
ಗಾಂಧೀ ಸಾಹಿತ್ಯ ಮಾಲೆ-15

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸುವರ್ಣ ಮಹೋತ್ಸವ ವರ್ಷ ಅಕ್ಟೋಬರ್ 2010-2011



ಸರ್ವೋದಯ

ಮೋ. ಕ. ಗಾಂಧಿ

ಅನುವಾದಕರು

ಸಿ. ಎಸ್. ಕುಲಕರ್ಣಿ

ಗಾಂಧಿಯಾನ
gandhiyaana

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸುವರ್ಣ ಮಹೋತ್ಸವ ವರ್ಷ:ಅಕ್ಟೋಬರ್
೨೦೧೦-೨೦೧೧

ಸರ್ವೋದಯ

ಗಾಂಧಿ ಸಾಹಿತ್ಯ ಮಾಲೆ-15

ಮೋ.ಕ. ಗಾಂಧಿ

ಅನುವಾದಕರು

ಸಿ.ಎಸ್. ಕುಲಕರ್ಣಿ

ಗಾಂಧೀಯಾನ ಪಬ್ಲಿಷಿಂಗ್ ಹೌಸ್

ಕಸ್ತೂರ್ಬಾ ಭವನ, ಗಾಂಧಿ ಭವನ ಆವರಣ

ಕುಮಾರಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧

SARVODAYA

By

M. K. Gandhi

Translated by

C. S. Kulakarni

Published by

Gandhiyaana Publishing House

Kasturba Bhavan, Gandhi Bhavan Campus
Kumara Park East
Bangalore -560 001

First Impression : 1960
Third Impression : 2011
Price : **Rs. 60/-**
Pages : 96
1/8th Crown
80 GSM Maplitho

Printed by
Shakthi Printers & Publishers
Bangalore - 560 058
Ph.: 080-28372643

ನಿವೇದನೆ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ತನ್ನ ೫೦ ವರ್ಷಗಳ ಸಾರ್ಥಕ ಸೇವೆಯನ್ನ ಪೂರೈಸಿ ಪ್ರಸ್ತುತದಲ್ಲಿ ತನ್ನ ಸ್ವರ್ಣ ಮಹೋತ್ಸವನ್ನು ೨-೬-೨೦೧೦ ರಿಂದ ಆಚರಣೆ ಮಾಡಿಕೊಳ್ಳುತ್ತಿದೆ. ಆಚರಣಾ ಸಮಿತಿಯ ತೀರ್ಮಾನದಂತೆ ಕರ್ನಾಟಕ ರಾಜ್ಯದ ಎಲ್ಲಾ ೩೦ ಜಿಲ್ಲೆಗಳಲ್ಲಿ ರಾಷ್ಟ್ರಪಿತನ ಜೀವನ - ಸಾಧನೆ ಕುರಿತಂತೆ ಉಪನ್ಯಾಸಗಳು, ವಿಚಾರ ಸಂಕೀರ್ಣಗಳು, ಚರ್ಚಾ ಸ್ಪರ್ಧೆಗಳನ್ನೂ ಏರ್ಪಡಿಸುತ್ತಿದೆ. ಜೊತೆ ಜೊತೆಯಲ್ಲಿ ಗಾಂಧೀಜೀಯವರ ಸಾಹಿತ್ಯವನ್ನೂ ಪ್ರಕಟಿಸುತ್ತಿದೆ. ಈ ಸಂದರ್ಭಕ್ಕೆ ಅನುಗುಣವಾಗಿ ೫೦ ಉತ್ತಮ ಗ್ರಂಥಗಳನ್ನು ಪ್ರಕಟಿಸುತ್ತಿದೆ. ೫೦ ಗ್ರಂಥಗಳಲ್ಲಿ ಕೆಲವು ಮರು ಮುದ್ರಣಾವಾಗುತ್ತಿವೆ. ಈ ಕೆಲವು ಮಹಾತ್ಮರ ಸಾಹಿತ್ಯ ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ತ್ಯಾಗ, ಅವರ ಸೇವಾನಿಷ್ಠೆ ಮುಂತಾದ ವಿಷಯಗಳನ್ನು ಕುರಿತಂತೆ ಅನುಭವಿ ಗಾಂಧೀವಾದಿಗಳಿಂದ ಬರೆಸಿ ಪ್ರಕಟಿಸಿದ ಕೃತಿಗಳಾಗಿರುತ್ತವೆ. ೫೦ ಕೃತಿಗಳ ಪ್ರಕಟಣೆ ಜೊತೆಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಕಳೆದ

ಶತಮಾನದ ಅರವತ್ತರ ದಶಕದಿಂದ ಗಾಂಧೀ ವಿಚಾರ ಪ್ರಚಾರ ಕಾರ್ಯದಲ್ಲಿ ನಿರ್ವಹಿಸಿದ ಕಾರ್ಯಕ್ರಮಗಳ ಕ್ರೋಢೀಕೃತ ಗ್ರಂಥವನ್ನೂ ಪ್ರಕಟಿಸುತ್ತಿದೆ.

ಇದಲ್ಲದೆ ಗಾಂಧಿಯವರಂತೆಯೇ ಈ ದೇಶದಲ್ಲಿ ಸಂಚಲನವನ್ನು ಮೂಡಿಸಿದ ಹಲವಾರು ಮಹನೀಯರು ಇದ್ದಾರೆ. 'ಸಂಪೂರ್ಣ ಕ್ರಾಂತಿ' ಯ ಮೂಲಕ ಭಾರತದ ಸಾಮಾಜಿಕ–ರಾಜಕೀಯ ವ್ಯವಸ್ಥೆಗೆ ಚುರುಕು ಮುಟ್ಟಿಸಿದ ಜೆ.ಪಿ. ಯವರನ್ನು ಕುರಿತು 'ಜೆ.ಪಿ. ವಿಚಾರ ಸಾಹಿತ್ಯ ಮಾಲೆ'ಯನ್ನು ಹೊರತರುವ ಯೋಜನೆಗೂ ಚಾಲನೆ ದೊರೆತಿದೆ.

'ಭೂದಾನ' ಯಜ್ಞದ ಮೂಲಕ ಭೂರಹಿತರ ಕನಸಿಗೆ ರೆಕ್ಕ ಮೂಡಿಸಿದ ಮಹಾಚೇತನ ವಿನೋಬಾ ಭಾವೆ ಅವರನ್ನು ಕುರಿತು 'ವಿನೋಬ ಸಾಹಿತ್ಯ ಮಾಲೆ' ಯನ್ನು ಸಹ ಹೊರತರಲಾಗುತ್ತಿದೆ ಎಂದು ತಿಳಿಸಲು ಹರ್ಷವಾಗುತ್ತಿದೆ.

ಈ ಪ್ರಕಟಣಾ ಕಾರ್ಯದಲ್ಲಿ ಆಸ್ತೆ ವಹಿಸಿ ಪ್ರಕಟಣೆಗೆ ಅನುವು ಮಾಡಿಕೊಟ್ಟಿರುವ ಗಾಂಧಿಯಾನ ಪಬ್ಲಿಷಿಂಗ್ ಹೌಸ್ ಸಂಸ್ಥೆಯ ನಿರ್ದೇಶಕರಾದ ಶ್ರೀ ಸಿವಿಜಿ ಚಂದ್ರು ಅವರಿಗೂ, ಅವರ ಮುದ್ರಕ ಸಿಬ್ಬಂದಿಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಆಭಾರಿಯಾಗಿದೆ.

ಈ ಕೃತಿಗಳನ್ನೂ ಕೊಂಡು ಓದುವ ಅಭ್ಯಾಸ ಕನ್ನಡ ನಾಡಿನ ಜನತೆಯಲ್ಲಿ ಹೆಚ್ಚು ಹೆಚ್ಚಾಗಿ ಉಂಟಾಗಲಿ ಎಂದು ಆಶಿಸುತ್ತೇನೆ.

ಪ್ರೊ. ಎಚ್. ಆರ್. ದಾಸೇಗೌಡ
ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿಯಾನ

ಭಾರತದ ಯುವಜನಾಂಗ ಗಾಂಧೀ ವಿಚಾರಧಾರೆಗಳಿಂದ ದೂರ ಸರಿಯುತ್ತ, ಪಾಶ್ಚಾತ್ಯ ಸಂಸ್ಕೃತಿಯ ದಾಸಾನುದಾಸರಾಗಿ, ನೆಲೆ ತಪ್ಪಿದ ಹಕ್ಕಿಗಳಂತೆ ಪರಿತಪಿಸುತ್ತಿರುವುದು ಹೆಚ್ಚಾಗುತ್ತಿರುವಂತೆಯೇ ಗಾಂಧೀವಾದ ಹಿಂದೆಂಗಿಂತ ಹೆಚ್ಚು ಪ್ರಸ್ತುತವಾಗುತ್ತಿರುವುದು ಅಚ್ಚರಿಯ ಬೆಳವಣಿಗೆಯಾಗಿ ಕಂಡುಬರುತ್ತಿದೆ. ನಗರೀಕರಣ, ಆಧುನೀಕರಣ, ಖಾಸಗೀಕರಣ, ಜಾಗತೀಕರಣಗಳಲ್ಲಿ ಬೆಂದು ಬಸವಳಿದ ಪಾಶ್ಚಾತ್ಯರಿಗೆ ಗಾಂಧೀ ಚಿಂತನೆಗಳು ಮಂತ್ರದಂಡದಂತೆಯೂ ಗಾಂಧೀಜಿ ಆರಾಧ್ಯದೈವದಂತೆಯೂ ಗೋಚರಿಸತೊಡಗಿದ್ದಾರೆ. 'ಹಿತ್ತಲ ಗಿಡ ಮದ್ದಲ್ಲ' ಎನ್ನುವುದನ್ನು ಕಡುನಿಷ್ಠೆಯಿಂದ ನಂಬಿ ಅನುಸರಿಸಿಕೊಂಡು ಬರುತ್ತಿರುವ, ಶಂಖದಿಂದ ಬಂದರೆ ಮಾತ್ರ ತೀರ್ಥ ಎಂದು ಕೈಯೊಡ್ಡಿ ನಮ್ಮಿಂದ ಅಲ್ಲಿಗೆ ಹೋಗಿ, ಅಲ್ಲಿಂದ ಬರುತ್ತಿರುವುದನ್ನು ಭಯಭಕ್ತಿಯಿಂದ ಸ್ವೀಕರಿಸಲು ಸಿದ್ಧರಾಗಿರುವ ನಾವು ಇನ್ನಾದರೂ ಗಾಂಧೀಜಿ ಮತ್ತು

ಅವರ ವಿಚಾರಗಳನ್ನು ಅರ್ಥಮಾಡಿಕೊಳ್ಳುವ ಪ್ರಾಮಾಣಿಕತೆಯನ್ನೂ ವಿವೇಕವನ್ನೂ ತೋರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಗಾಂಧೀಜಿಯವರ ಬರಹಗಳೇ ದೀವಟಿಗೆಗಳಾಗಿ ನಮಗೆ ದಾರಿ ತೋರಬೇಕಾಗಿದೆ. ಗಾಂಧಿಯನ್ನು ಅರ್ಥಮಾಡಿಕೊಂಡವರು, ಗಾಂಧೀಮಾರ್ಗದಲ್ಲಿ ನಡೆದು ಉದ್ಧಾರವಾದವರು ವಿಶ್ವದೆಲ್ಲೆಡೆ ಆಗಾಗ ಮಿನುಗುತ್ತಿದ್ದರೂ ಭಾರತದಲ್ಲಿಯೇ ಅಂಥವರು ಕಾಣುತ್ತಿಲ್ಲವಲ್ಲ ಎನ್ನುವ ಲಜ್ಜೆಯಾದರೂ ನಮ್ಮನ್ನು ಆವರಿಸಿಕೊಳ್ಳಬೇಕಾಗಿದೆ.

ಗಾಂಧೀಜಿ ವಿಚಾರಧಾರೆಗಳನ್ನು ಓದುವ ಮೂಲಕವಾದರೂ ಒಂದು ಪರಿವರ್ತನೆಗೆ ಹೊರಳಿಕೊಳ್ಳುವ ದಿನ ಹತ್ತಿರವಾಗಲಿ ಎಂದು ಗಾಂಧೀ ಸ್ಮಾರಕ ನಿಧಿ ಗಾಂಧೀಜಿಯವರ ಎಲ್ಲ ಬರಹಗಳನ್ನು ಕನ್ನಡದಲ್ಲಿ ಪ್ರಕಟಿಸುವ ಸಾಹಸಕ್ಕೆ ಮುಂದಾಯಿತು. ಇವುಗಳಲ್ಲಿ ಕೆಲವು ಗಾಂಧಿ ಮತ್ತು ಅವರ ಚಿಂತನೆಗೆ ಸಂಬಂಧಿಸಿದ ಸ್ವತಂತ್ರ ಕೃತಿಗಳಾದರೆ ಮತ್ತೆ ಕೆಲವು ಇಂಗ್ಲಿಷ್‌ನಿಂದ ಅನುವಾದ ರೂಪದಲ್ಲಿ ಕನ್ನಡಕ್ಕೆ ತಂದ ಕೃತಿಗಳು. ಗಾಂಧೀ ಸ್ಮಾರಕ ನಿಧಿ ವ್ರತದೋಪಾದಿಯಲ್ಲಿ ನಿರ್ವಹಿಸಿದ ಈ ಪುಸ್ತಕ ಪ್ರಕಟಣೆಯ ಕೆಲಸ ನಿರೀಕ್ಷೆಗೂ ಮೀರಿ ಯಶಸ್ಸು ಕಂಡದ್ದು ಈಗ ಇತಿಹಾಸ. ನಂಬಲು ಆಶ್ಚರ್ಯವೆನಿಸುವಷ್ಟು ಕಡಿಮೆ ಬೆಲೆಯಲ್ಲಿ ಲಾಭಾಪೇಕ್ಷೆಯಿಲ್ಲದೆ ನಿಧಿ ಹೊರತಂದ ಪುಸ್ತಕಗಳು ವೇಗವಾಗಿ ಖರ್ಚಾದವು. ಜನ ಈ ಪುಸ್ತಕಗಳನ್ನು ಪ್ರೀತಿ ಭಕ್ತಿ ಗೌರವ ಅಭಿಮಾನಗಳಿಂದ ಖರೀದಿಸಿದರು. ಮನೆಯ ಕಪಾಟುಗಳಲ್ಲಿ ಆಲಂಕಾರಿಕವಾಗಿ ಜೋಡಿಸಿಟ್ಟರು. ಕೆಲವರಾದರೂ ಓದಿದರು. ತಲೆಯಲ್ಲಿ ತುಂಬಿಕೊಂಡರು. ಬೇರೆಯವರಿಗೂ ಮುಟ್ಟಿಸಿದರು. ಗಾಂಧೀ ಸಾಧನೆ ಈ ರೀತಿ ಮರುಪ್ರಸಾರವಾಗಲು ನಿಧಿಯ ಪ್ರಯತ್ನ ಕಾರಣವಾಯಿತು.

ಗಾಂಧೀ ಸ್ಮಾರಕ ನಿಧಿ ಹೊರತಂದ ಪುಸ್ತಕಗಳು ಒಂದೋ ಎರಡೋ ಮುದ್ರಣ ಕಂಡು ಐವತ್ತು ಅರುವತ್ತು ವರ್ಷಗಳು ಕಳೆದ ಮೇಲೆ ಎರಡನೇ ಸುತ್ತಿನಲ್ಲಿ ಆ ಪುಸ್ತಕಗಳನ್ನು ಮರುಚಾಲನೆಗೊಳಿಸುವ ಜವಾಬ್ದಾರಿ ಈಗ 'ಗಾಂಧಿಯಾನ' ದ ಪಾಲಿಗೆ ಬಂದಿದೆ. ಯಾರೋ ಬಿತ್ತಿದ ಬೀಜವನ್ನು, ಯಾರೋ ಬೆಳೆಸಿದ ಫಸಲನ್ನು ಈಗ ಕಟಾವು ಮಾಡಿ ಮನೆಮನೆಗೆ ಮುಟ್ಟಿಸುವ ಕಾಯಕವನ್ನು ಗಾಂಧೀಯಾನ ಅತ್ಯಂತ ಗೌರವದಿಂದ ಮಾಡುತ್ತಿದೆ. ಗಾಂಧೀ ಬದುಕು, ಗಾಂಧೀವಾದ, ಗಾಂಧೀ ಚಿಂತನೆ, ಗಾಂಧೀ ವಿಚಾರಧಾರೆಗಳಲ್ಲಿ ಓದುಗರು ಮಿಂದೇಳಬೇಕೆಂದು, ಹೊಸ ಕಾಲದ ಕಗ್ಗಂಟುಗಳನ್ನು ಎದುರಿಸಲು ಸನ್ನದ್ಧರಾಗಬೇಕೆಂದು ಸಮರ್ಥರಾಗಬೇಕೆಂದು, ಉತ್ಸಾಹದಿಂದ ಪುಟಿದೇಳಬೇಕೆಂದು, ಪುನರ್ಮುದ್ರಣಗೊಳ್ಳುತ್ತಿರುವ ಎಲ್ಲ ಪುಸ್ತಕಗಳ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು, ವಿಶ್ವದ ಉತ್ತಮ ನಾಗರಿಕರಾಗಿ ರೂಪುಗೊಳ್ಳಬೇಕೆಂದು 'ಗಾಂಧಿಯಾನ' ಆಶಿಸುತ್ತದೆ.

ನಿರ್ದೇಶಕರು

–ಗಾಂಧಿಯಾನ ಪಬ್ಲಿಷಿಂಗ್ ಹೌಸ್

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು–ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿಯ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿಯವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧಿ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟನೆಗಳಾಗಿವೆ. ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧಿ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟನೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು

ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಈ ಗ್ರಂಥಗಳ ಉದ್ದೇಶ ಗಾಂಧೀತತ್ವ ಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿರದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿಯುವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿಕೊಡುವುದೇ ಆಗಿದೆ. ಪ್ರಸ್ತುತ ಗ್ರಂಥವು ಗಾಂಧೀಜಿಯವರ ಆತ್ಮಕಥೆಯ ಭಾಷಾಂತರವಾಗಿದೆ. ಗಾಂಧೀಜಿ ರಾಷ್ಟ್ರದ ಸೊತ್ತು. ರಾಷ್ಟ್ರೀಯ ಪರಂಪರೆಯಾದ ಅವರ ಜೀವನಪ್ರಭಾವವು ಗಾಢವಾಗಿ ಆಗಬೇಕಾದರೆ, ಎಳೆಯ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಗಾಂಧಿ ಚರಿತ್ರೆಯನ್ನು ಅರಿತಿರಬೇಕು. ಎಳೆಯ ವಯಸ್ಸಿನ ಮಕ್ಕಳಿಗೆ ಹಿಡಿಯುವಂತೆ ತೀರ ಸರಳವಾದ ಮಕ್ಕಳ ಭಾಷೆಯಲ್ಲಿಯೇ ಈ ಅನುವಾದವನ್ನು ಒದಗಿಸಿ ಕೊಡಲಾಗಿದೆ.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆಗೆ ಲಕ್ಷ್ಯವನ್ನು ಪೂರೈಸಿದ್ದರೆ ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧಿ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ 'ಮಹಿಳೆಯರು', 'ಒಳ್ಳೆಯ ಜೀವನ', 'ಅಸ್ಪೃಶ್ಯತೆ ಸತ್ಯ' 'ಸರ್ವೋದಯ', ವಿದ್ಯಾರ್ಥಿಗಳು ಎಂಬ ಪುಸ್ತಕಗಳು ಪ್ರಕಟವಾಗಿವೆ

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರದಲ್ಲಿ ಇಂದು ಗಾಂಧಿ ವಿಚಾರದ ತಿಳುವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ

ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ವಿದ್ಯಾಗಿರಿ **ರಾ. ಶ್ರೀ. ಹುಕ್ಕೇರಿಕರ**
ಧಾರವಾಡ ಅಧ್ಯಕ್ಷ
೧೫-೮-೧೯೭೦ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ
ಸ್ವಾತಂತ್ರ್ಯ ದಿನ

ಪ್ರಕಾಶಕರ ಮಾತು

ಗಾಂಧೀಜಿ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಈ ಕೃತಿ ಮೊದಲು ಮುದ್ರಣವಾದದ್ದು ೧೯೬೦ರ ಗಾಂಧೀ ಜಯಂತಿ ಸಂದರ್ಭದಲ್ಲಿ ಆಗ ೫೦೦೦ ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್‌ಮುದ್ರಣ ಮಾಡಲಾಯಿತು. ಭಾರತದಂತಹ ಅತ್ಯಧಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಅನಕ್ಷರಸ್ಥರು ಇರುವ ದೇಶಕ್ಕೆ ಬೇಸಾಯಕ್ಕೆ ಪರ್ಯಾಯವಾದ ಉದ್ಯೋಗವನ್ನು ನೀಡಿ ಸ್ವಾವಲಂಬನೆಯ ಹಾದಿಯಲ್ಲಿ ಸ್ವದೇಶಿ ಅಭಿಮಾನವನ್ನು ಜಾಗೃತಗೊಳಿಸಲು ಖಾದಿ ಗ್ರಾಮೋದ್ಯೋಗವೇ

ಸರಿಯಾದ ಹಾದಿಯೆಂದು ಮನಗಂಡು ಗಾಂಧಿ ಭಾರತದಲ್ಲಿ ಒಂದು ಗ್ರಾಮಕ್ಕೆ ಕೈಗಾರಿಕೆಯಾಗಿದ್ದ ನೂಲುವ ವೃತ್ತಿಯನ್ನು ಜಾಗೃತಗೊಳಿಸಿ ಖಾದಿಯನ್ನು ರೂಪಿಸಿದವರು. ಗಾಂಧೀಜಿಯವರು ದಾರಿದ್ರ್ಯ ನಿವಾರಣೆಗೆ ಖಾದಿಯೇ ಮೂಲವೆಂದು ನಂಬಿದ್ದರು. ಅದಕ್ಕಾಗಿ ಚರಕವನ್ನು ಆಶ್ರಯಿಸಿದರು. ಅವರು ಹೀಗೆ ಹೇಳುತ್ತಾ ಹಣ ಇಲ್ಲದಿರುವುದೇ ಜನತೆಗೆ ಅಂಟಿದ ರೋಗವಲ್ಲ, ಕೆಲಸ ಇಲ್ಲದಿರುವುದೇ ರೋಗವಾಗಿದೆ. ಶ್ರಮವೇ ಧನವು. ಲಕ್ಷಾಂತರ ಜನರಿಗೆ ಅವರ ಗುಡಿಸಲಲ್ಲಿ ಮರ್ಯದೆಯಿಂದ ಬಾಳಲು ಕೆಲಸ ಒದಗಿಸಿದರೆ, ಅವರಿಗೆ ಅನ್ನ ವಸ್ತ್ರ ಅರ್ಥಾತ್ ಹಣ ದೊರಕಿಸಿ ಕೊಟ್ಟಂತಂಹದಾಗುವುದು. ಚರಕವು ಅಂಥ ಕೆಲಸವನ್ನು ಒದಗಿಸುತ್ತದೆ ಎಂಬ ಅಭಿಪ್ರಾಯವನ್ನು ಚಿತ್ರಿಸಿದರು. ಇದು ಅವರು ಚರಕಾದ ಮೇಲಿಟ್ಟಿದ್ದ ನಂಬಿಕೆಯನ್ನು ಸೂಚಿಸುತ್ತದೆ. ಅವರು ಪ್ರವಾಸದ ವೇಳೆಯಲ್ಲಿ ಸಹಸ್ರಾರು ಹರಿಜನರಿಗೆ ನೂಲುವ ನೇಯುವ ಉದ್ಯಮಗಳೇ ಆಧಾರವಾಗಿದೆಯೆಂಬುದನ್ನು ನನ್ನ ಸಂಚಾರದಲ್ಲಿ ಕಂಡಿದ್ದೇನೆ ಎಂದು ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ. ಇದನ್ನು ಹೆಚ್ಚಿಗೆ ಸಂಘಟಿಸಿದ್ದರೆ ಹೆಚ್ಚು ಹರಿಜನರಿಗೆ ಆಸರೆಯಾಗಬಹುದು ಎಂದಿದ್ದಾರೆ.

ಖಾದಿಯು ಬಹುದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಟ ನಾಲ್ಕು ತಿಂಗಳು ನಿರುದ್ಯೋಗಿಯಾಗಿರುವ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ. ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ ಆ ಕೆಲಸವೇ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತದೆ. ಯಾಕೆಂದರೆ ಲಕ್ಷಾಂತರ ಜನ ನಿರೋದ್ಯೋಗಿಯಾಗಿದ್ದಾರೆ. ಅವರು ಆಧ್ಯಾತ್ಮಿಕವಾಗಿ,

ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡಸ್ತ್ರೀಯರ ಗೌರವವನ್ನು ಉಳಿಸುತ್ತದೆ ಮತ್ತು ಹೆಚ್ಚಿಸುತ್ತದೆ. ಆದ್ದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ ಎಂದಿದ್ದರು. ಹಳ್ಳಿಗಳ ಪುನರುಜ್ಜೀವನ ಚರಕದಿಂದಲೇ ಮತ್ತು ಚರಕವು ಬಡವರ ಬಾಳುವೆಯ ಆಶಾಕಿರಣ ಚರಕ ಬಿಟ್ಟ ಜನತೆಯ ಸ್ವಾತಂತ್ರ್ಯ ಔದ್ಯಮೀಕರಣದಿಂದ ನಿರುದ್ಯೋಗ ಸಮಸ್ಯೆ, ಬಟ್ಟೆಯ ನಿರ್ಯಾತ, ಖಾದಿಯ ಅರ್ಥನೀತಿ, ಸ್ವದೇಶಿ ಧರ್ಮ, ಗ್ರಾಮೋದ್ಯೋಗಗಳು, ಅದನ್ನು ಆರಂಭಿಸುವ ಬಗ್ಗೆ ಕೂಲಂಕಷವಾಗಿ ಈ ಗ್ರಂಥದಲ್ಲಿ ತಿಳಿಸಿದ್ದಾರೆ.

ಇಂತಹ ಕೃತಿಯನ್ನು ಮಹಿಳೆಯರು ಮತ್ತು ಯುವಜನತೆಗೆ ತಲುಪಿಸಲು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮಹತ್ತರ ಕಾರ್ಯವನ್ನು ಕೈಗೊಂಡಿದೆ. ಈ ಕೃತಿ ಯುವ ಜನತೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಹಕಾರಿಯಾಗುತ್ತದೆ. ೧೯೬೦ರಲ್ಲಿ ಈ ಕೃತಿಯಲ್ಲಿ ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಅಂದಿನ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಅಂದಿನ ಪ್ರಕಟಣಾ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕದ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಈ ಕೃತಿ ಕರಡು ತಿದ್ದುಪಡಿ ಮಾಡಿದ ಪ್ರೊ॥ ಜಿ.ಅಶ್ವತ್ಥ ನಾರಾಯಣ ಹಾಗೂ ಶ್ರೀಮತಿ ಎಂ.ಆರ್. ಲಕ್ಷ್ಮೀದೇವಿ

ದಂಪತಿಗಳಿಗೂ ಹಾಗೂ ಈ ಕೃತಿಗೆ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ। ಬಸವರಾಜ ಪಾಟೀಲ್ ಅವರಿಗೂ ಮತ್ತು ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಮೆ। ಲಿಬರ್ಟಿ ಎಂಟರ್ ಪ್ರೈಸಸ್ ಮಾಲೀಕರಾದ ಶ್ರೀಯುತ ಶಿವದೇವ್ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.

ಡಾ। ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

"ಜೀವನವೆಂಬುದೊಂದು ಆಕಾಂಕ್ಷೆ. ಸಿದ್ಧಿ ಮತ್ತು ಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ."

– **ಮಹಾತ್ಮ ಗಾಂಧಿ**

ಪರಿವಿಡಿ

೧. ಸರ್ವೋದಯದ ಅರ್ಥ

ಸರ್ವೋದಯ

ನಾನು ಶಿಕ್ಷಣ ಪಡೆಯುತ್ತಿದ್ದಾಗ ನನ್ನ ಪಠ್ಯ ಪುಸ್ತಕಗಳ ಹೊರತಾಗಿ ಬೇರೆ ಪುಸ್ತಕಗಳನ್ನು ಬಹುಮಟ್ಟಿಗೆ ಓದಲಿಲ್ಲ ಮತ್ತು ಪ್ರಾಪಂಚಿಕ ಜೀವನದಲ್ಲಿ ನಾನು ಕಾಲಿಟ್ಟ ನಂತರ ಓದಲು ನನಗೆ ತೀರ ಸ್ವಲ್ಪ ವೇಳೆ ದೊರೆಯುತ್ತಿತ್ತು. ಆದುದರಿಂದ ನನಗೆ ಬಹಳಷ್ಟು ಪುಸ್ತಕೀಯ ಜ್ಞಾನವಿದೆ ಎಂದು ಹೇಳಿಕೊಳ್ಳಲಾರೆ. ಆದರೂ ಒತ್ತಾಯವಾಗಿ ನಾನು ಪಾಲಿಸಬೇಕಾದ ಈ ಕಟ್ಟು ಪಾಡಿನಿಂದ ನನಗೆ ಬಹಳ ಹಾನಿಯಾಗಲಿಲ್ಲ. ಬದಲಾಗಿ ನನ್ನ ಈ ಅಲ್ಪ ಓದು ನಾನು ಓದಿದುದನ್ನೆಲ್ಲ ಸಂಪೂರ್ಣವಾಗಿ ಅರಗಿಸಿಕೊಳ್ಳುವಂತೆ ನನ್ನನ್ನು ಸಮರ್ಥನನ್ನಾಗಿ ಮಾಡಿತೆಂದು ಹೇಳಬಹುದು. ನಾನು ಓದಿದ ಈ ಪುಸ್ತಕಗಳಲ್ಲಿ **'ಅಂಟು ದಿಸ್ ಲಾಸ್ಟ್'** (Unto

This Last) ಎಂಬ ಪುಸ್ತಕವು ನನ್ನ ಜೀವನದಲ್ಲಿ ಕೂಡಲೇ ವ್ಯಾಹವಾರಿಕವಾದ ಬದಲಾವಣೆಯನ್ನುಂಟು ಮಾಡಿತು. ಅದನ್ನು ನಂತರ ನಾನು ಗುಜರಾತಿಯಲ್ಲಿ ಭಾಷಾಂತರಿಸಿ ಅದಕ್ಕೆ ಸರ್ವೋದಯ (The Welfare of All, ಸಕಲರ ಕಲ್ಯಾಣ) ಎಂದು ಹೆಸರಿಟ್ಟೆನು.

ನಾನು ಆಳವಾಗಿ ನಂಬಿದ ಕೆಲವು ತತ್ವಗಳು ರಸ್ಕಿನ್‌ನ ಈ ಮಹಾಗ್ರಂಥದಲ್ಲಿ ಪ್ರತಿಬಿಂಬಿತವಾಗಿರುವುದನ್ನು ನಾನು ಕಂಡು ಹಿಡಿದೆನೆಂದು ಅದಕ್ಕಾಗಿಯೇ ನನ್ನನ್ನು ಅದು ಅಷ್ಟು ಸೆರೆಹಿಡಿದು ನನ್ನ ಬಾಳಿನಲ್ಲಿ ಬದಲಾವಣೆಯನ್ನು ತಂದಿತೆಂದೂ ಭಾವಿಸಿದ್ದೇನೆ.

ಸರ್ವೋದಯ (Unto This Last) ಎಂಬ ಗ್ರಂಥವು ಈ ಕೆಳಗಿನ ಮಾತುಗಳನ್ನು ಉಪದೇಶಿಸುವುದೆಂದು ನಾನು ತಿಳಿದು ಕೊಂಡಿದ್ದೇನೆ.

೧. ವ್ಯಕ್ತಿಯ ಕಲ್ಯಾಣವು ಸಕಲರ ಕಲ್ಯಾಣದಲ್ಲಿ ಅಡಕವಾಗಿದೆ.

೨. ಕಾಯಕವನ್ನು ಮಾಡಿ ತಮ್ಮ ಉಪಜೀವನವನ್ನು ಸಾಗಿಸುವ ಅಧಿಕಾರವು ಸಕಲರಿಗೂ ಸಮಾನಾಗಿರುವುದರಿಂದ ಒಬ್ಬ ವಕೀಲನ ಕಾಯಕಕ್ಕೆ ಒಬ್ಬ ಕ್ಷೌರಿಕನ ಕಾಯಕದಷ್ಟೇ ಬೆಲೆಯಿದೆ.

೩. ಶ್ರಮಜೀವನವು ಅಂದರೆ ಉಳುವವನ ಮತ್ತು ಕೈಗಾರಿಕೆಯ ಕೆಲಸ ಮಾಡುವವನ ಜೀವನವು ಸಾರ್ಥಕವಾದ ಜೀವನವಾಗಿದೆ.

ಇವುಗಳಲ್ಲಿ ಮೊದಲನೆಯ ಮಾತು ನನಗೆ ಗೊತ್ತಿತ್ತು. ಎರಡನೆಯದನ್ನು ಮಸಕುಮಸುಕಾಗಿ ಅರಿತಿದ್ದೆನು. ಮೂರನೆಯದು

ಮಾತ್ರ ನನಗೆ ಹೊಳೆದಿರಲೇ ಇಲ್ಲ. ಎರಡನೆಯ ಮತ್ತು ಮೂರನೆಯ ಮಾತುಗಳು ಮೊದಲನೆಯ ಮಾತಿನಲ್ಲಿ ಅಡಕವಾಗಿರುವು ದೆಂಬುದನ್ನು 'ಸರ್ವೋದಯ' ವು (Unto This Last) ಸೂರ್ಯ ಪ್ರಕಾಶದಷ್ಟು ನನಗೆ ಸ್ಪಷ್ಟಗೊಳಿಸಿತು. ಈ ತತ್ವಗಳನ್ನು ವ್ಯವಹಾರದಲ್ಲಿ ತರಲು ಸಿದ್ಧನಾಗಿ ನಾನು ಈ ಮುಂಬೆಳಗಿನಲ್ಲಿ ಎಚ್ಚೆತ್ತೆನು.

– ಅ. ಕ. ಪ್ರ. ೧೮.

ಸರ್ವೋದಯದ ರೂಪರೇಷೆ

(ಸರ್ವೋದಯ ಅಂದರೆ ನಿಜವಾದ ಪ್ರಜಾ ಪ್ರಭುತ್ವದ ನಮ್ಮ ಕನಸು ನನಸಾದರೆ ಭಾರತದ ಅತಿ ದೀನ ದರಿದ್ರನೂ ಅತಿ ಶ್ರೇಷ್ಠ ನಷ್ಟೇ ಭಾರತದ ಆಡಳಿತಗಾರನಾಗಿರುವನೆಂಬುದನ್ನು ನಾವು ಮನ್ನಿಸುತ್ತೇವೆ. ಈ ಭಾವನೆ ನೆಲೆಗೊಳ್ಳುವ ಮೊದಲು ಎಲ್ಲರೂ ಪರಿಶುದ್ಧ ರಾಗಿರಬೇಕಾಗುತ್ತದೆ. ಮತ್ತು ಪಾವಿತ್ರ್ಯವು ಜ್ಞಾನದ ಜೊತೆಜೊತೆಯಾಗಿಯೇ ಮುನ್ನಡೆಯುಬೇಕಾಗುತ್ತದೆ. ಆಗ ಯಾರೂ ಜಾತಿ ಜಾತಿಗಳಲ್ಲಿ– ಸವರ್ಣಿಯರು ಹಾಗೂ ವರ್ಣ ಬಾಹಿರರಲ್ಲಿ ಭೇದಭಾವವನ್ನು ಕಲ್ಪಿಸುವುದಿಲ್ಲ. ಎಲ್ಲರೂ ತನ್ನ ಸಮಾನರು ಎಂದು ಪ್ರತಿಯೊಬ್ಬನೂ ಎಣಿಸುವನು ಮತ್ತು ತನ್ನ ಪ್ರೇಮಪಾಶದಿಂದ ಎಲ್ಲರನ್ನೂ ಬಂಧಿಸಿಡುವನು. ಯಾವನೂ ಇನ್ನೊಬ್ಬನನ್ನು ಅಸ್ಪೃಶ್ಯನೆಂದು ಭಾವಿಸುವುದಿಲ್ಲ. ಬೆವರುಸುರಿಸುವ ಕೂಲಿಕಾರನನ್ನೂ ಸಿರಿವಂತನಾದ ಬಂಡವಾಳದಾರನನ್ನೂ ನಾವು ಸರಿಸಮನಾಗಿಯೇ ಮನ್ನಿಸುತ್ತೇವೆ. ಮೈ–ಬೆವರುಸುರಿಸಿ ಪ್ರಾಮಾಣಿಕ ರೀತಿಯಿಂದ ತನ್ನ ಉಪಜೀವನವನ್ನು ಮತ್ತು ಬೌದ್ಧಿಕ ಹಾಗೂ

ಶಾರೀರಿಕ ಶ್ರಮಗಳಲ್ಲಿ ಭೇದವನ್ನು ಕಲ್ಪಿಸುವುದಿಲ್ಲ. ಈ ಪೂರ್ಣತೆಯನ್ನು ತೀವ್ರವಾಗಿ ತರಲು ನಾವು ಸ್ವೇಚ್ಛೆಯಿಂದಲೇ ಭಂಗಿಗಳಾಗಿ ಮಾರ್ಪಡುವೆವು. ತಿಳುವಳಿಕೆಯುಳ್ಳ ಯಾವನೂ ಅಫೀಮನ್ನಾಗಲೀ, ಮದ್ಯವನ್ನಾಗಲೀ ಯಾವುದೇ ಅಮಲೇರುವ ಪದಾರ್ಥವನ್ನಾಗಲೀ ಮುಟ್ಟುವುದಿಲ್ಲ. ಪ್ರತಿಯೊಬ್ಬನೂ ಸ್ವದೇಶಿಯನ್ನು ತನ್ನ ಜೀವನದ ವ್ರತವೆಂದು ಪಾಲಿಸುವನು. ತನ್ನ ಹೆಂಡಿತಿಯ ಹೊರತಾಗಿ ಉಳಿದೆಲ್ಲ ಸ್ತ್ರೀಯರನ್ನು ಅವರ ವಯಸ್ಸಿಗೆ ತಕ್ಕಂತೆ ತಾಯಿಯೆಂದೋ, ತಂಗಿಯೆಂದೋ, ಮಗಳೆಂದೋ ಭಾವಿಸುವನು ಹಾಗೂ ಪರಸ್ತ್ರೀಯರ ಬಗ್ಗೆ ಮನಸ್ಸಿನಲ್ಲಿ ಎಂದೂ ಕಾಮಭಾವನೆಯನ್ನು ತಾಳುವುದಿಲ್ಲ. ಯಾವುದೇ ದುರ್ಧರ ಪ್ರಸಂಗ ಬಂದಾಗ ತನ್ನ ಸ್ವಂತ ಜೀವನವನ್ನು ಕೊಡುವನಲ್ಲದೆ ಇನ್ನೊಬ್ಬನ ಜೀವನವನ್ನು ಎಂದೂ ತೆಗೆದುಕೊಳ್ಳುವುದಿಲ್ಲ.)

೨. ಸರ್ವೋದಯದ ಆಧ್ಯಾತ್ಮಿಕ ತಳಹದಿ

ಸಾಧನಗಳೇ ಎಲ್ಲಕ್ಕಿಂತ ಮಹತ್ವಪೂರ್ಣವಾಗಿರುವವು

ನಾವು ಮುಟ್ಟತಕ್ಕ ಗುರಿಯು ವ್ಯಾಖ್ಯೆಯು ಅತ್ಯಂತ ಸ್ಪಷ್ಟವಾಗಿದ್ದರೂ, ಅದನ್ನು ನಾವು ಅತ್ಯಂತ ಚೆನ್ನಾಗಿ ಅರ್ಥಮಾಡಿಕೊಂಡಿದ್ದರೂ, ಆ ಗುರಿಯನ್ನು ತಲುಪಿಸುವ ಸಾಧನಗಳ ಅರಿವು ನಮಗೆ ಇರದಿದ್ದರೆ ಮತ್ತು ಆ ಸಾಧನಗಳನ್ನು ಹೇಗೆ ಉಪಯೋಗಿಸಬೇಕೆಂಬುದು ನಮಗೆ ತಿಳಿದಿರದಿದ್ದರೆ, ಆ ಗುರಿಯನ್ನು ತಲುಪುವುದರಲ್ಲಿ ನಾವು ಅಯಶಸ್ವಿಗಳಾಗುವೆವು. ಆದುದರಿಂದ ಸಾಧನಗಳ ಸಂಗ್ರಹ ಮಾಡುವುದಕ್ಕೂ, ಆ ಸಾಧನಗಳನ್ನು ಪ್ರಗತಿಪರವಾಗಿ ಉಪಯೋಗಿಸುವುದಕ್ಕೂ ಪೂರೈಸಿದರೆ ಗುರಿಯನ್ನು ತಲುಪುವುದು ನಿಶ್ಚಿತವೆಂಬುದನ್ನು

ನಾನು ಬಲ್ಲೆನು. ನಮ್ಮ ಸಾಧಗಳು ಎಷ್ಟೆಷ್ಟು ಪವಿತ್ರವಾಗಿರುವವೋ ಅಷ್ಟಷ್ಟೇ ನಾವು ನಮ್ಮ ಗುರಿಯೆಡೆಗೆ ಪ್ರಗತಿಯನ್ನು ಹೊಂದುವೆವೆಂದು ನನ್ನ ಭಾವನೆ.

ಈ ದಾರಿಯು ದೂರಿನದೂ ಬಹಳ ದೀರ್ಘವಾದದೂ ಆಗಿದೆ ಎಂದು ತೋರಬಹುದು. ಆದರೆ ಇದೇ ಅತ್ಯಂತ ಸಮೀಪದ್ದೆಂದು ನನ್ನ ನಂಬುಗೆಯಾಗಿದೆ.

– ಅಮೃತ ಬಝಾರ ಪತ್ರಿಕಾ,೧೭-೯-೨೨

ಹಕ್ಕುಗಳಲ್ಲ : ಕರ್ತವ್ಯಗಳು

ಎಲ್ಲರೂ ತಮ್ಮ ತಮ್ಮ ಹಕ್ಕುಗಳನ್ನು ಮಾತ್ರ ಸಾಧಿಸುವುದರಲ್ಲಿ ಮಗ್ನರಾಗಿ ತಮ್ಮ ಕರ್ತವ್ಯಗಳನ್ನು ಮರೆತುಬಿಟ್ಟರೆ, ಎಲ್ಲೆಡೆಗೂ ಗೊಂದಲ ಹಾಗೂ ಅರಾಜಕತೆ ಉಂಟಾಗುವುವು. ಪ್ರತಿಯೊಬ್ಬನೂ ತನ್ನ ಹಕ್ಕು ಸಾಧಿಸುವುದನ್ನು ಬಿಟ್ಟು ತನ್ನ ಕರ್ತವ್ಯವನ್ನು ಮಾತ್ರ ಮಾಡುತ್ತ ಹೋದರೆ ಈ ಜಗತ್ತಿನಲ್ಲಿ ಸುವ್ಯವಸ್ಥೆಯ ರಾಜ್ಯವೂ ಕೂಡಲೇ ನೆಲೆಗೊಳ್ಳುವುದು. ಸರಳವಾದ ಮತ್ತು ಸಾರ್ವತ್ರಿಕವಾದ ಈ ನಿಯಮವನ್ನು ಒಡೆಯರು ಹಾಗೂ ಕೂಲಿಕಾರರು, ಜಮೀನುದಾರರು ಹಾಗೂ ರೈತರು, ಅರಸರು ಹಾಗೂ ಪ್ರಜೆಗಳು ಹಿಂದು ಮತ್ತು ಮುಸಲ್ಮಾನರು ಎಲ್ಲರೂ ಪಾಲಿಸಿದರೆ ಭಾರತದ ಮತ್ತು ಜಗತ್ತಿನ ಇನ್ನಿತರ ಭಾಗಗಳ ನಿತ್ಯಜೀವನದಲ್ಲಿ ಉದ್ಯೋಗ ವ್ಯವಹಾರಗಳಲ್ಲಿ ಈಗ ಕಂಡು ಬರುತ್ತಿರುವ ಗೊಂದಲ ಅವ್ಯವಸ್ಥೆಗಳು ಇಲ್ಲದಂತಾಗಿ ಜೀವನದ ಪ್ರತಿಯೊಂದು

ರಂಗದಲ್ಲಿಯೂ ಒಳ್ಳೆಯ ಬಾಂಧವ್ಯವು ಸ್ಥಾಪಿತವಾಗುವುದನ್ನು ನೀವು ಕಾಣುತ್ತೀರಿ. ಮೊದಲು ತನ್ನ ಕರ್ತವ್ಯ ನಂತರ ಅವುಗಳ ಫಲವಾಗಿ ಬರುವ ಹಕ್ಕುಗಳು ಎಂಬುದನ್ನು ಅರ್ಥ ಮಾಡಿಕೊಳ್ಳುವುದರಿಂದ ನಾನು ಯಾವುದನ್ನು ಸತ್ಯಾಗ್ರಹದತ್ತ ಎಂದು ಕರೆಯುತ್ತೇನೆಯೋ ಅದನ್ನು ಪಡೆದುಕೊಳ್ಳುಬಹುದು.

ಉದಾಹರಣೆಗೆ, ತನ್ನ ಮುಸ್ಲಿಮ್ ನೆರೆಯವನ ಬಗ್ಗೆ ಹಿಂದುವು ಪಾಲಿಸಬೇಕಾದ ಕರ್ತವ್ಯವೇನು? ತನ್ನ ನೆರೆಯವನಾದ ಮುಸ್ಲೀಮನೂ ಒಬ್ಬ ಮಾನವ ಎಂಬ ಅವನ ಸುಖದುಃಖಗಳಲ್ಲಿ ಪಾಲುಗೊಳ್ಳುವುದು, ಅವನು ಸಂಕಟದಲ್ಲಿ ಬಿದ್ದಾಗ ಅವನಿಗೆ ನೆರವಾಗುವುದು ಇವು ಅವನ ಕರ್ತವ್ಯವಾಗಿವೆ. ಆಗ ತನ್ನ ಮುಸ್ಲೀಮ ನೆರೆಯುವನಿಂದ ಇಂಥದೇ ನಡತೆಯುನ್ನು ನಿರೀಕ್ಷಿಸುವುದು ಅವನ ಹಕ್ಕು ಎನಿಸುವುದು ಮತ್ತು ಹೀಗೆ ನಿರೀಕ್ಷಿಸಿದ ಪ್ರತಿ ಕ್ರಿಯೆಯೂ ನೆರೆಯವನಿಂದ ದೊರೆಯಬಹುದು. ಒಂದು ವೇಳೆ ಕೆಲವು ಮುಸಲ್ಮಾನರು ಬಹುಜನ ಹಿಂದುಗಳ ಒಳ್ಳೆಯ ನಡತೆಗೆ ಉತ್ತರವಾಗಿ ತಾವೂ ಒಳ್ಳೆಯವರಾಗಿ ನಡೆಯದೆ ಅವರ ಪ್ರತಿಯೊಂದು ಕಾರ್ಯದಲ್ಲಿಯೂ ವಿರೋಧವನ್ನು ವ್ಯಕ್ತಪಡಿಸಿದರೆ ಅದು ಅಮಾನುಷ ವೆನಿಸುತ್ತದೆ. ಆಗ ಹಿಂದುಗಳ ಕರ್ತವ್ಯವೇನು? ಅಂಥವರನ್ನು ತಮ್ಮ ಪಾಶವೀಶಕ್ತಿಯಿಂದ ಬಗ್ಗಿಸುವುದು ಖಂಡಿತ ವಾಗಿಯೂ ಅವರ ಕರ್ತವ್ಯವೆನಿಸುವುದಿಲ್ಲ. ಹಾಗೆ ಮಾಡಿದರೆ ತಾವು ಗಳಿಸದೇ ಇದ್ದ ಹಕ್ಕನ್ನು ಬಲ ಪ್ರಯೋಗದಿಂದ ಸೆಳೆದು

ಕೊಂಡಂತಾಗುತ್ತದೆ. ತಮ್ಮ ಒಡ ಹುಟ್ಟಿದ ಬಂಧುಗಳ ಅಮಾನುಷತನವನ್ನು ಯಾವ ರೀತಿಯಲ್ಲಿ ತಡೆಯುವುದೋ ಅದನ್ನೂ ಅದೇ ರೀತಿಯಲ್ಲಿ ತಡೆಯಬೇಕು.

ಹರಿಜನ, ೬-೭-೪೭

ನೈತಿಕ ಸಾಧನಗಳ ಅವಶ್ಯಕತೆ

ಸಾಮಾನ್ಯವಾಗಿ ಪಾಶ್ಚಿಮಾತ್ಯರು ಅಭಿಪ್ರಾಯಪಡುವುದೇನೆಂದರೆ, ಬಹುಜನರ ಸುಖವನ್ನು ವರ್ಧಿಸುವುದೇ ಮಾನವನ ಸಕಲ ಕರ್ತವ್ಯವಾಗಿದೆ. ಶಾರೀರಿಕ ಸೌಖ್ಯ ಹಾಗೂ ಆರ್ಥಿಕ ಉನ್ನತಿಗಳೇ ನಿಜವಾದ ಸುಖವೆಂದು ಭಾವಿಸಲ್ಪಡುತ್ತವೆ. ಇಂಥ ಸುಖವನ್ನು ಗೆದ್ದು ಕೊಳ್ಳುವುದಕ್ಕಾಗಿ ನೈತಿಕ ನಿಯಮಗಳನ್ನು ಮುರಿದರೆ ಅದು ಅಷ್ಟೇನೂ ಮಹತ್ವದ್ದಲ್ಲ. ಈ ರೀತಿಯಾಗಿ ವಿಚಾರ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳು ಯುರೋಪ ಖಂಡದ ತುಂಬೆಲ್ಲ ಕಂಡುಬರುತ್ತಲಿವೆ.

ನೀತಿಯನ್ನು ದುರ್ಲಕ್ಷಿಸಿ ಸಂಪೂರ್ಣವಾಗಿ ಶಾರೀರಿಕ ಮತ್ತು ಆರ್ಥಿಕ ಸುಖವನ್ನೇ ಹುಡುಕುತ್ತ ಹೋಗುವುದೆಂದರೆ ದೈವೀನಿಯಮಕ್ಕೆ ವಿರುದ್ಧವಾಗಿ ನಡೆದಂತೆಯೇ ಎಂದು ಪಾಶ್ಚಿಮಾತ್ಯರಲ್ಲಿ ಸುಜ್ಞಾನಿಗಳಾದವರು ತೋರಿಸಿಕೊಟ್ಟಿದ್ದಾರೆ. ಅಂಥ ಸುಜ್ಞಾನಿಗಳಲ್ಲಿ ಜಾನ್ ರಸ್ಕಿನ್ ಒಬ್ಬನಾಗಿದ್ದಾನೆ. ಅವನು ತನ್ನ ಸರ್ವೋದಯ (Unto This Last) ಎಂಬ ಗ್ರಂಥದಲ್ಲಿ ಮಾನವರು ನೀತಿಯ ನಿಯಮವನ್ನು ಪಾಲಿಸಿದರೆ ಮಾತ್ರ ಸುಖಿಗಳಾಗಬಲ್ಲರು ಎಂದು ಪ್ರತಿಪಾದಿಸಿದ್ದಾರೆ.

ಜಗತ್ತಿನಲ್ಲಿರುವ ಎಲ್ಲ ಧರ್ಮಗಳೂ ನೀತಿಗೆ ಬಹಳ ಮಹತ್ವದ ಸ್ಥಾನವನ್ನು ಕೊಟ್ಟಿವೆ. ಧರ್ಮವು ಹೇಳುವ ಮಾತನ್ನು ಬದಿಗಿಟ್ಟರೂ ನಮ್ಮ ವ್ಯವಹಾರ ಜ್ಞಾನವೂ ಕೂಡ ನೀತಿಯನ್ನು ಪಾಲಿಸುವುದು ಬಹಳ ಅವಶ್ಯವಿದೆ ಎಂಬುದನ್ನು ಸೂಚಿಸುತ್ತದೆ. ನೀತಿಯನ್ನು ಪಾಲಿಸುವುದರಿಂದ ಮಾತ್ರ ನಾವು ಸುಖಿಗಳಾಗಬಲ್ಲೆವು.

ಸರ್ವೋದಯಕ್ಕೆ ಅವಶ್ಯವಿರುವ ಸದ್ಗುಣಗಳು

೧. ಸತ್ಯ

ನಮ್ಮ ಕಾರ್ಯಗಳೆಲ್ಲ ಸತ್ಯವನ್ನೇ ಕೇಂದ್ರವನ್ನಾಗಿಟ್ಟುಕೊಂಡು ಸಾಗಬೇಕು. ತನ್ನ ಮುನ್ನಡೆಯಲ್ಲಿ ಮಾನವನು ಒಮ್ಮೆ ಈ ಸ್ಥಿತಿಯನ್ನು ತಲುಪಿದನೆಂದರೆ ಶುದ್ಧಾಚರಣೆಯ ಉಳಿದೆಲ್ಲ ನಿಯಮಗಳೂ ತಮ್ಮಿಂದ ತಾವೇ ಬರುವುವು. ಈ ನಿಯಮಗಳಿಗೆ ವಿಧೇಯನಾಗಿ ನಡೆಯುವುದು ಮಾನವನಿಗೆ ಹುಟ್ಟುಗುಣದಷ್ಟೇ ಸಹಜವಾಗುವುದು. ಸತ್ಯವಿಲ್ಲದೇ ಜೀವನದಲ್ಲಿ ಯಾವ ತತ್ವಗಳನ್ನಾಗಲೀ ನಿಯಮಗಳನ್ನಾಗಲಿ ಪಾಲಿಸುವುದು ಅಸಾಧ್ಯವಾದ ಮಾತಾಗಿದೆ.

– ಯರವಡಾ ಮಂದಿರದಿಂದ, ಪು. ೨–೩

೨. ಅಹಿಂಸೆ ಮತ್ತು ಪ್ರೇಮ

ಯಾವ ಸಜೀವ ಪ್ರಾಣಿಯನ್ನೂ ಗಾಯಗೊಳಿಸದೆ ಇರುವುದು ನಿಶ್ಚಯವಾಗಿಯೂ ಅಹಿಂಸೆಯ ಭಾಗವಾಗಿದೆ. ಆದರೆ ಅದು

ಅಹಿಂಸೆಯನ್ನು ವ್ಯಕ್ತಪಡಿಸುವ ಕನಿಷ್ಠವಾದ ರೀತಿಯಾಗಿದೆ. ಪ್ರತಿಯೊಂದು ಕೆಟ್ಟವಿಚಾರ, ಅನಾವಶ್ಯಕವಾದ ಅವಸರ, ಇನ್ನೊಬ್ಬನಿಗೆ ಕೇಡನ್ನು ಬಯಸುವುದು ಇವೆಲ್ಲವುಗಳಿಂದ ಅಹಿಂಸಾತತ್ವವು ಭಂಗವಾಗುತ್ತದೆ. ಜಗತ್ತಿಗೆ ಬೇಕಾಗಿರುವ ವಸ್ತುವನ್ನು ತಾನೊಬ್ಬನೇ ಸಂಗ್ರಹಿಸಿಟ್ಟುಕೊಳ್ಳುವುದರಿಂದಲೂ ಅಹಿಂಸೆ ಕೆಡುತ್ತದೆ. ಅಹಿಂಸೆಯಿಲ್ಲದೆ ಸತ್ಯವನ್ನು ಹುಡುಕುವುದಾಗಲೀ ಸಾಧ್ಯವಿಲ್ಲ. ಅಹಿಂಸೆ ಮತ್ತು ಸತ್ಯಗಳು ಒಂದರಿಂದೊಂದನ್ನು ವ್ಯಾವಹಾರಿಕಾವಾಗಿ ಬಿಡಿಸಲು ಬಾರದಷ್ಟು ಒಂದಕ್ಕೊಂದು ಅಂಟಿಕೊಂಡಿವೆ. ಅದರ ಮೊಗವು ಯಾವುದು ಬೆನ್ನು ಯಾವುದು ಎಂಬುದನ್ನು ಯಾರು ಹೇಳಬಲ್ಲರು? ಆದಾಗ್ಯೂ ಅಹಿಂಸೆಯು ಸಾಧನವಾಗಿದೆ. ಸತ್ಯವು ಗುರಿಯಾಗಿದೆ. ಸಾಧನವು ನಿಜವಾದ ಸಾಧನವು ನಿಜವಾದ ಸಾಧನವೆನಿಸಬೇಕಾದರೆ ಅದು ಯಾವಾಗಲೂ ನಮಗೆ ಎಟುಕುವಂತಿರಬೇಕು. ಮತ್ತು ಅಹಿಂಸೆಯು ಯಾವಾಗಲೂ ನಮಗೆ ಎಟುಕುವಂತಿರುವುದರಿಂದ ಅದೇ ನಮ್ಮ ಅತ್ಯಂತ ಶ್ರೇಷ್ಠವಾದ ಕರ್ತವ್ಯವಾಗಿದೆ. ನಮ್ಮ ಸಾಧನಗಳ ಯೋಗಕ್ಷೇಮನನ್ನು ನಾವು ಮುಟ್ಟಿಯೇ ಮುಟ್ಟುತ್ತೇವೆ. ಈ ಮಾತವನ್ನು ಒಮ್ಮೆ ನಾವು ಗ್ರಹಿಸಿದೆವೆಂದರೆ ಕೊನೆಗೆ ದೊರೆಯುವ ಯಶಸ್ಸಿನ ಬಗ್ಗೆ ನಮ್ಮಲ್ಲಿ ಯಾವ ಸಂಶಯವೂ ಉಳಿಯುವುದಿಲ್ಲ.

– ಯರವಡಾ ಮಂದಿರದಿಂದ, ಪು೭-೯

ಅಹಿಂಸೆಯೇ ಬಾಳಿನ ನಿಯಮವೆಂಬುದನ್ನು ನಾವು ಒಪ್ಪಿಕೊಂಡಾಗ ಅದು ನಮ್ಮ ಇರುವಿಕೆಯನ್ನೆಲ್ಲ ಇಡಿಯಾಗಿ

ಆವರಿಸಬೇಕು. ಕೇವಲ ಬಿಡಿ ಬಿಡಿಯಾದ ಕೃತಿಗಳಿಗೆ ಅದು ಅನ್ವಯಿಸಲ್ಪಡಬಾರದು. ಅಹಿಂಸೆಯ ನಿಯಮವು ವ್ಯಕ್ತಿಗಳಿಗೆ ಮಾತ್ರ ಒಳ್ಳೆಯದಾಗಿದೆಂಬುದೇ ವಿನಾ ಜನಜಂಗುಳಿಗೆ ಸಾಕಷ್ಟು ಒಳ್ಳೆಯದಾದುದಲ್ಲ ಎಂದು ಭಾವಿಸುವುದು ಬಹಳ ದೊಡ್ಡ ತಪ್ಪು.

–ಹರಿಜನ, ೧೯೩೬

೩. ಬ್ರಹ್ಮ ಚರ್ಯ ಅಥವಾ ಶುದ್ಧ ಚಾರಿತ್ರ್ಯ

ಈಗ ಬ್ರಹ್ಮಚರ್ಯದ ವ್ಯಾಖ್ಯೆ ಅರ್ಥಗಳ ಕಡೆಗೆ ಹೊರಳೋಣ. ಅದರ ಮೂಲ ಅರ್ಥವೇನೆಂದರೆ–ದೇವರ ಸಂಪರ್ಕದಲ್ಲಿ ನಮ್ಮನ್ನು ಇರಿಸುವ ಆಚರಣೆಯೇ ಬ್ರಹ್ಮಚರ್ಯ,

ಆ ಆಚರಣೆಯೆಂದರೆ ನಮ್ಮ ಎಲ್ಲಿ ಇಂದ್ರಿಯಗಳನ್ನೂ ದಮನ ಮಾಡುವುದು. ಇದೇ ಬ್ರಹ್ಮಚರ್ಯದ ನಿಜವಾದ ಮತ್ತು ಸರಿಯಾದ ಅರ್ಥವಾಗಿರುತ್ತದೆ.

ಶಾರೀರಿಕವಾಗಿ ಜನನೇಂದ್ರಿಯವನ್ನು ನಿಯಂತ್ರಿಸುವುದೇ ಬ್ರಹ್ಮ ಚರ್ಯವೆಂದು ಜನಸಾಮಾನ್ಯರ ಕಲ್ಪನೆಯಾಗಿದೆ. ಈ ಸಂಕುಚಿತ ಅರ್ಥವು ಬ್ರಹ್ಮ ಚರ್ಯದ ಗೌರವವನ್ನು ಕಡಿಮೆ ಮಾಡಿದೆ ಮತ್ತು ಅದರ ಪಾಲನೆಯನ್ನು ಅಸಾಧ್ಯಗೊಳಿಸಿದೆ. ಎಲ್ಲ ಇಂದ್ರಿಯಗಳನ್ನೂ ಯೋಗ್ಯವಾದ ರೀತಿಯಲ್ಲಿ ದಮನ ಮಾಡದಿದ್ದರೆ ಜನನೇಂದ್ರಿಯವನ್ನೂ ದಮನ ಮಾಡುವುದು ಸಾಧ್ಯವಿಲ್ಲ. ಎಲ್ಲ ಇಂದ್ರಿಯಗಳೂ ಪರಸ್ಪರಾವಲಂಬಿಗಳಾಗಿವೆ. ಕೆಳಗಿನ ತರಗತಿಯಲ್ಲಿ ಮನಸ್ಸನ್ನೂ ಇಂದ್ರಿಯಗಳಲ್ಲಿಯೇ ಗಣಿಸಲಾಗುವುದು. ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲಾರದೆ ಬರೀ ಶರೀರವನ್ನೂ ನಿಯಂತ್ರಿಸಿದರೆ

ಹೀಗೆ ನಿಯಂತ್ರಿಸುವುದು ಕೆಲವು ವೇಳೆ ಸಾಧ್ಯವಾದರೂ ಅದು ಏನೂ ಉಪಯೋಗಕ್ಕೆ ಬಾರದು.

ಹರಿಜನ ೧೩-೬-೩೬

೪. ನಿರ್ಭಯತೆ

ಮನುಷ್ಯನಲ್ಲಿ ಉಳಿದೆಲ್ಲ ಉದಾತ್ತ ಗುಣಗಳು ಬೆಳೆದು ಬರಬೇಕಾದರೆ ಅವನಿಗೆ ನಿರ್ಭಯತೆಯು ತೀರ ಅವಶ್ಯವಾಗಿದೆ. ನಿರ್ಭಯತೆ ಇಲ್ಲದೆ ಯಾವನೊಬ್ಬನು ಸತ್ಯವನ್ನು ಹೇಗೆ ಶೋಧಿಸಬಲ್ಲನು? ಅಥವಾ ಪ್ರೇಮವನ್ನು ಹೇಗೆ ಮಾಡಬಲ್ಲನು? ಪ್ರೀತಮನು ಹೇಳುತ್ತಾನೆ ಹರಿ-ಪರಮಾತ್ಮನ ಮಾರ್ಗವು ಶೂರರ ಮಾರ್ಗವಾಗಿದೆ. ಹೇಡಿಗಳ ಮಾರ್ಗವಾಗಿಲ್ಲ. ಇಲ್ಲಿ ಹರಿ ಅಥವಾ ಪರಮಾತ್ಮ ನೆಂದರೆ ಸತ್ಯ ಮತ್ತು ಶೂರರೆಂದರೆ ನಿರ್ಭಯತೆಯಿಂದ ಸುಸಜ್ಜಿತರಾದವರು.

ಯರವಡಾ ಮಂದಿರದಿಂದ ಪು. ೨೩೫. ಆಸ್ತೇಯ

೫. ಆಸ್ತೇಯ

ತುಡುಗತವನ್ನು ಮಾಡುವ ವ್ಯಕ್ತಿಯೊಬ್ಬನು ತಾನು ಸತ್ಯವನ್ನು ಅರಿತವನೆಂದೂ ಸಕಲ ಪ್ರಾಣಿಗಳಲ್ಲಿಯೂ ಪ್ರೀತಿಯುಳ್ಳವನೆಂದೂ ಹೇಳಿಕೊಂಡರೆ ಅದು ಅಸಾಧ್ಯ ಕೋಟಿಯ ಮಾತೆನಿಸುವುದು. ನಾವೆಲ್ಲರೂ ತಿಳಿದೋ ತಿಳಿಯದೆಯೋ ಹೆಚ್ಚು ಕಡಿಮೆಯಾಗಿ ತುಡುಗುತನದ ಅಪರಾಧವನ್ನು ಮಾಡಿದವರೇ ಆಗಿದ್ದೇವೆ. ಒಂದು ವಸ್ತುವು ಯಾರ ಒಡೆನದ್ದೂ ಅಲ್ಲ ಎಂದು ನಂಬಿ ಅದನ್ನು

ತಾನು ತೆಗೆದುಕೊಳ್ಳುವುದು ಕಳ್ಳತನವೆಸುತ್ತದೆ. ಬೀದಿಗಳಲ್ಲಿ ದೊರೆತ ವಸ್ತುಗಳು ಸರಕಾರದ ಒಡೆತನಕ್ಕಾಗಲೀ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಒಡೆಯಕ್ಕಾಗಲೀ ಸೇರಿರುತ್ತವೆ.

ನಮಗೆ ಅವಶ್ಯವಿಲ್ಲದ ವಸ್ತುವನ್ನು ಇನ್ನೊಬ್ಬರಿಂದ ಅವರ ಅಪ್ಪಣೆ ಪಡೆದು ತೆಗೆದುಕೊಂಡರೂ ಅದು ಕಳ್ಳತನವೆನಿಸುತ್ತದೆ. ನಮಗೆ ಅವಶ್ಯವಿರದ ಯಾವುದೇ ವಸ್ತುವನ್ನು ನಾವು ಇನ್ನೊಬ್ಬರಿಂದ ಪಡೆಯಬಾರದು. ಆಹಾರ ಸಾಮಗ್ರಿಗಳನ್ನು ಈ ರೀತಿಯ ಕಳ್ಳತನಕ್ಕೆ ಉದಾರಹಣೆಯಾಗಿ ಹೇಳಬಹುದು. ನನಗೆ ಅವಶ್ಯವಿರದ ಯಾವುದೇ ತರಹದ ಹಣ್ಣನ್ನು ನಾನು ತೆಗೆದುಕೊಳ್ಳುವುದು ಅಥವಾ ನನಗೆ ಅವಶ್ಯವಿರುವುದಕ್ಕಿಂತಲೂ ಹೆಚ್ಚಿಗೆ ತೆಗೆದುಕೊಳ್ಳುವುದು ಕಳ್ಳತನವಾಗಿರುತ್ತದೆ. ನಮ್ಮ ನಿಜವಾದ ಅವಶ್ಯಕತೆಗಳೇನಿವೆ ಎಂಬ ಅರಿವು ನಮಗೆ ಯಾವಾಗಲೂ ಇರುವುದಿಲ್ಲ. ನಮ್ಮಲ್ಲಿ ಬಹಳಷ್ಟು ಜನರು ಅಯೋಗ್ಯವಾದ ರೀತಿಯಲ್ಲಿ ನಮ್ಮ ಬೇಡಿಕೆಗಳನ್ನು ಹೆಚ್ಚಿಸುತ್ತ ಹೋಗುತ್ತೇವೆ. ಮತ್ತು ನಮಗೆ ಅರಿವಾಗದಂತೆ ನಮ್ಮನ್ನು ನಾವೇ ಕಳ್ಳರನ್ನಾಗಿ ಮಾಡಿಕೊಳ್ಳುತ್ತೇವೆ. ನಾವು ಈ ವಿಷಯಕ್ಕೆ ಸ್ವಲ್ಪ ಗಮನವನ್ನು ಕೊಟ್ಟರೆ ನಮ್ಮ ಎಷ್ಟೊ ಅವಶ್ಯಕತೆಗಳನ್ನು ಕಡಿಮೆ ಮಾಡಬಲ್ಲೆವೆಂಬುದನ್ನು ಅರಿಯುತ್ತೇವೆ. ಆಸ್ತೇಯ ವ್ರತವನ್ನು ಪಾಲಿಸುವವನು ತನ್ನ ಅವಶ್ಯಕತೆಗಳನ್ನು ಕ್ರಮವಾಗಿ ಕಡಿಮೆ ಮಾಡುತ್ತ ಹೋಗುವನು. ಆಸ್ತೇಯ ವ್ರತದ ನಿಯಮಗಳನ್ನು ಪಾಲಿಸದೇ ಇರುವುದರಿಂದಲೇ ಈ ಜಗತ್ತಿನಲ್ಲಿರುವ ದುಃಖದಾಯಕವಾದ ಬಡತನದ ಬಹುಭಾಗವು ತಲೆದೋರಿದೆ.

ಆಸ್ತೇಯ ವ್ರತವನ್ನು ಕೈಕೊಂಡವನು ಮುಂದೆ ತನಗೆ ಬೇಕಾಗುವ ವಸ್ತುಗಳನ್ನು ದೊರಕಿಸುವ ಬಗ್ಗೆ ಚಿಂತೆಯನ್ನೇ ಮಾಡುವುದಿಲ್ಲ. ಭವಿಷ್ಯಕಾಲದ ಬಗ್ಗೆ ನಮ್ಮಲ್ಲಿರುವ ಕೆಟ್ಟ ಆತುರತೆಯೇ ಹಲವು ಕಳ್ಳತನಗಳ ಮೂಲವಾಗಿರುವುದಾಗಿ ಕಂಡುಬಂದಿದೆ. ಇಂದು ಒಂದು ವಸ್ತುವಿನ ಒಡೆತನವನ್ನಷ್ಟೇ ನಾವು ಬಯಸುತ್ತೇವೆ. ನಾಳೆ ಆ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಆ ವಿಚಾರದ ಅನ್ಯಾಯದ ಕ್ರಮಗಳನ್ನು ಕೈಗೊಳ್ಳಲು ಪ್ರಾರಂಭಿಸುತ್ತೇವೆ.

ವಸ್ತುಗಳನ್ನಷ್ಟೇ ಅಲ್ಲ ವಿಚಾರಗಳನ್ನೂ ನಾವು ಕಳವು ಮಾಡಬಹುದು. ಒಬ್ಬ ಮನುಷ್ಯನು ಕೆಲವು ಒಳ್ಳೆಯ ವಿಚಾರಗಳು ತನ್ನಿಂದಲೇ ಕಂಡುಹಿಡಿಯಲ್ಪಟ್ಟವೆಂದು ಬಹಳ ಆದ್ಯತೆಯಿಂದ ಸಾಧಿಸುತ್ತಿದ್ದಾಗ ಆ ವಿಚಾರಗಳು ನಿಜವಾಗಿಯೂ ಅವನಿಂದ ಕಂಡುಹಿಡಿಯಲ್ಪಟ್ಟದ್ದಲ್ಲ ಎಂದು ತಿಳಿದುಬಂದರೆ ಆ ಮನುಷ್ಯನು ಕಳ್ಳತನದ ಅಪರಾಧಕ್ಕೆ ಗುರಿಯಾಗುತ್ತಾನೆ.

ಆದ್ದರಿಂದ ಆಸ್ತೇಯ ವ್ರತವನ್ನು ಕೈಗೊಂಡವನು ನಮ್ರನೂ, ವಿಚಾರವಂತನೂ, ಜಾಗ್ರತನೂ ಸಾದಾ ರೀತಿಯ ರೂಢಿಗಳುಳ್ಳವನೂ ಆಗಿರಬೇಕಾಗುತ್ತದೆ.

ಯರವಡಾ ಮಂದಿರದಿಂದ, ಪು ೧೯-೨೨

೬. ಅಸ್ವಾಮ್ಯ

ಅಸ್ವಾಮ್ಯವು, ಆಸ್ತೇಯಕ್ಕೆ ಸಂಬಂಧವುಳ್ಳದ್ದಾಗಿದೆ. ನಮಗೆ ಅನಾವಶ್ಯಕವಾದ ವಸ್ತುವನ್ನು ನಮ್ಮ ಒಡೆನತದಲ್ಲಿಟ್ಟುಕೊಂಡರೆ ಅದನ್ನು ನಾವು ಕಳವಿನಿಂದ ಪಡೆದಿದ್ದರೂ ಅದು ಕಳವಿನ

ವಸ್ತುವೆಂದೇ ಗಣಿಸಲ್ಪಡಬೇಕು, ಒಂದು ವಸ್ತುವನ್ನು ನಮ್ಮ ಒಡೆನತದಲ್ಲಿಟ್ಟು ಕೊಳ್ಳುವುದೆಂದರೆ ಮುಂಬರುವ ಕಾಲಕ್ಕಾಗಿ ಅದನ್ನು ಸಂಗ್ರಹಿಸಿಟ್ಟಂತೆಯೇ. ಸತ್ಯವನ್ನು ಕಂಡುಕೊಳ್ಳಲು ಹೊರಟವನು, ಪ್ರೇಮದ ಶಾಸನವನ್ನು ಪಾಲಿಸುವವನು, ನಾಳೆಗಾಗಿ ಎಂದು ಯಾವುದನ್ನೂ ಇಟ್ಟುಕೊಳ್ಳತಕ್ಕದ್ದಲ್ಲ. ಸಂಗ್ರಹಿಸಿಟ್ಟುಕೊಳ್ಳವುದಿಲ್ಲ. ನಮಗೆ ದೇವರ ಕೊಡುಗೆಯಲ್ಲಿ ವಿಶ್ವಾಸವಿದ್ದರೆ ಪ್ರತಿ ದಿನ ಅವನು ನಮಗೆ ಆಹಾರವನ್ನು ಒದಗಿಸುವನು ಅಂದರೆ ನಮಗೆ ಬೇಕಾದುದೆಲ್ಲವನ್ನೂ ಒದಗಿಸುವನು ಎಂದು ತಿಳಿದು ನಾವು ಸ್ವಸ್ಥಚಿತ್ತರಾಗಿರಬೇಕು. ದೇವರಲ್ಲಿ ಈ ರೀತಿಯಾಗಿ ನಂಬುಗೆಯಿಟ್ಟ ಸಾಧುಸಂತರೂ, ಭಕ್ತರೂ ತಮ್ಮ ಅನುಭವದಿಂದ ಮನಗಂಡಿದ್ದಾರೆ. ಮನುಷ್ಯನಿಗೆ ಪ್ರತಿ ದಿನ ಅವಶ್ಯಕವಾಗಿರುವಷ್ಟನ್ನು, ಅದಕ್ಕೂ ಹೆಚ್ಚಲ್ಲ ಮತ್ತೆ, – ಒದಗಿಸುವ ದೈವನಿಯಮವನ್ನು ನಾವು ಅರಿಯದಿದ್ದು ದರಿಂದಲೋ, ಅಲಕ್ಷಿಸಿರುವುದರಿಂದಲೋ, ಇಂದಿನ ಅಸಮಾನ ತೆಗಳೂ ಅವುಗಳ ದುಷ್ಪರಿಣಾಮಗಳೂ ತಲೆದೋರಿವೆ. ಸಿರಿವಂತರಾದವರ ಹತ್ತಿರ ಹೆಚ್ಚಿನ ವಸ್ತುಗಳ ದೊಡ್ಡ ಸಂಗ್ರಹವೇ ಇರುತ್ತದೆ. ಆ ವಸ್ತುಗಳು ಅವರಿಗೆ ಅನಾವಶ್ಯಕವಾಗಿರುವುದರಿಂದ ಅವುಗಳನ್ನು ಅವರು ಅಲಕ್ಷಿಸಿ ಹಾಳು ಮಾಡುತ್ತಾರೆ. ಅದೇ ಕಾಲಕ್ಕೆ ಲಕ್ಷಾವಧಿ ಜನರು ಹೊಟ್ಟೆಗೆ ಕೂಳಿಲ್ಲದೆ ಉಪವಾಸ ಬಿದ್ದು ಸಾಯುತ್ತಾರೆ. ಪ್ರತಿಯೊಬ್ಬನೂ ತಮಗೆ ಅವಶ್ಯವಾದುದಷ್ಟನ್ನೇ ಇಟ್ಟುಕೊಂಡರೆ ಯಾರಿಗೂ ತಾಪತ್ರಯವುಂಟಾಗದೇ ಎಲ್ಲರೂ ಸಾಮಾಧಾನದಿಂದ ಬಾಳಬಹುದು. ಈಗಿರುವ ರೀತಿಯಲ್ಲಿ

ಬಡವರಷ್ಟೇ ಸಿರಿವಂತರೂ ಅಸಂತುಷ್ಟಿಯುಳ್ಳವರಾಗಿದ್ದಾರೆ. ಬಡವನಾದವನು ಲಕ್ಷಾಧೀಶನಾಗಬಯಸುತ್ತಾನೆ. ಲಕ್ಷಾಧೀಶನು ಕೋಟ್ಯಾಧೀಶನಾಗಲಿಚ್ಛಿಸುತ್ತಾನೆ. ಜಗತ್ತಿನ ತುಂಬ ಸಂತೃಪ್ತಿಯ ಮನೋಭಾವನೆಯನ್ನು ಹರಡುವ ಬಯಕೆಯಿಂದ ಸಿರಿವಂತರಾದವರು ತಾವೇ ಮುಂದಾಗಿ ಅಸ್ವಾಮ್ಯವನ್ನು ದಾಟದಂತೆ ಅವರು ಎಚ್ಚರವಹಿಸಿದರೆ, ಉಪವಾಸ ಬೀಳುವವರಿಗೆ ಅನ್ನ ದೊರೆತು ಸಿರಿವಂತರು ಕೂಡ ಬಡವರೂ ಸಂತೃಪ್ತಿ ಯಿಂದಿರಲು ಕಲಿಯುತ್ತಾರೆ.

ಶುದ್ಧ ಸತ್ಯ ದೃಷ್ಟಿಯಿಂದ ನಮ್ಮ ಶರೀರವೂ ಒಂದು ಆಸ್ತಿಯೆನಿಸುತ್ತದೆ. ಈ ರೀತಿಯಾಗಿ ನಾವು ವಿಚಾರಿಸಿದರೆ ನಾವು ಸಂಪೂರ್ಣವಾದ ತ್ಯಾಗಜೀವನದ ಆದರ್ಶಕ್ಕೆ ಎಂದು ತಲುಪುತ್ತೇವೆ ಮತ್ತು ಶರೀರವು ಇರುವವರೆಗೂ ಅದನ್ನು ನಾವು ಸೇವೆಗಾಗಿ ಉಪಯೋಗಿಸುವುದನ್ನು ಕಲಿಯುತ್ತೇವೆ. ಮುಂದೆ ನಮಗೆ ಆಹಾರದ ಬದಲಾಗಿ ಸೇವೆಯೇ ಜೀವನಾಧಾರವಾಗುತ್ತದೆ. ನಾವು ಸೇವೆಗಾಗಿಯೇ ನಮ್ಮ ನಿದ್ರಾಹಾರ ವಿಹಾರಗಳನ್ನು ಕೈಗೊಳ್ಳುತ್ತೇವೆ. ಈ ಒಂದು ತರಹದ ಮನೋವೃತ್ತಿಯು ನಮಗೆ ನಿಜವಾದ ಸುಖವನ್ನು ಕೊಡುತ್ತದೆ.

ಯರವಡಾ ಮಂದಿರದಿಂದ, ೧೯೪೫, ಪು ೨೩

ಆಹಾರ ಪಾನೀಯಗಳಲ್ಲಿ ಸಂಯಮ

ಮಾದಕವಾದ ಪೇಯ ಹಾಗೂ ಔಷಧಗಳನ್ನೂ ವಿವಿಧ ತರದ ಆಹಾರ, ವಿಶೇಷವಾಗಿ ಮಾಂಸಾಹಾರ ಮೊದಲಾದವುಗಳನ್ನೂ

ಸೇವಿಸದಿರುವುದು ನಿಶ್ಚಿತವಾಗಿಯೂ ನಮ್ಮ ಆತ್ಮೋನ್ನತಿಗೆ ಬಹಳ ಸಹಾಯಮಾಡುತ್ತದೆ. ಆದರೆ ಅತ್ಮೋನ್ನತಿಯ ಬದಲಾಗಿ ಇವುಗಳನ್ನು ಸೇವಿಸದಿರುವುದೇ ನಮ್ಮ ಪರಮಗುರಿಯಾಗಬಾರದು. ಮಾಂಸಾಹ್ಹಾರವನ್ನೂ ಇನ್ನಿತರ ಕೆಲವನ್ನೂ ಧಾರ್ಮಿಕ ಬುದ್ಧಿಯಿಂದ ನಿಷಿದ್ಧವೆಂದು ಅವುಗಳನ್ನು ತ್ಯಾಗ ಮಾಡಿ, ತಮ್ಮ ಪ್ರತಿಯೊಂದು ಕೃತಿಯಲ್ಲಿಯೂ ದೇವರ ಹೆಸರಿಗೆ ಕಳಂಕ ಹಚ್ಚುವಂತೆ ನಡೆಯುವುದಕ್ಕಿಂತಲೂ ಮಾಂಸಾಹಾರವನ್ನು ತೆಗೆದುಕೊಳ್ಳುತ್ತಿದ್ದರೂ ದೇವರಿಗೆ ಅಂಜಿ ಇತರರೊಡನೆ ಜೀವಿಸುತ್ತಿರುವವರಿಗೆ ಆತ್ಮ ಸ್ವಾತಂತ್ರ್ಯವು ಹೆಚ್ಚು ಸಮೀಪದಲ್ಲಿರುವುದು.

ಯಂಗ್ ಇಂಡಿಯಾ,೬-೧೦-೨೧

ಯಾರಿಗೆ ತಮ್ಮ ವಿಕಾರಗಳನ್ನು ಹತ್ತಿಕ್ಕಬೇಕಾಗಿದೆಯೇ ಅವರಿಗೆ ಮಾಂಸಾಹಾರವು ಅಯೋಗ್ಯವಾದುದೆಂದು ಅನುಭವವು ಹೇಳಿಕೊಡುತ್ತದೆ. ಆದರೆ ನಮ್ಮ ವಿಕಾರಗಳನ್ನು ಗೆಲ್ಲುವುದರಲ್ಲಾಗಲೀ ನಮ್ಮ ಚಾರಿತ್ರ್ಯವನ್ನು ರೂಪಿಸುವುದರಲ್ಲಾಗಲೀ ಆಹಾರಕ್ಕಿರುವ ಮಹತ್ವವನ್ನು ಅತಿರಂಜಿತಗೊಳಿಸುವುದು ತಪ್ಪು. ಆಹಾರ ವ್ರತವು ಬಹಳ ಮಹತ್ವದ್ದೆಂಬ ಮಾತನ್ನು ನಾವು ಅಲಕ್ಷಿಸುವಂತಿಲ್ಲ. ಆದರೆ ಭಾರತದಲ್ಲಿ ನಡೆದಿರುವಂತೆ ಎಲ್ಲ ಧರ್ಮವೂ ಆಹಾರವ್ರತದಲ್ಲಿ ನಡೆದಿರುವಂತೆ ಎಲ್ಲ ಧರ್ಮವೂ ಆಹಾರವ್ರತದಲ್ಲಿಯೇ ಅಡಕವಾಗಿರುವುದೆಂದು ತಿಳಿಯುವುದು. ಆಹಾರ ವಿಷಯದಲ್ಲಿ ಯಾವ ಸಂಯಮವನ್ನೂ ಪಾಲಿಸದೆ ನಾಲಗೆಯ ಸವಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟುಬಿಡುವಷ್ಟೇ ತಪ್ಪಾದುದಾಗಿದೆ.

ಯ. ಇ, ೧೯೨೬

ಅಹಿಂಸೆಯು ಆಹಾರಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವಷ್ಟೇ ಅಲ್ಲ. ಅದು ಅದನ್ನು ಮೀರಿದ ವಿಷಯವಾಗಿದೆ. ಒಬ್ಬ ಮನುಷ್ಯನು ಏನನ್ನು ಉಣ್ಣುತ್ತಾನೆ. ಕುಡಿಯುತ್ತಾನೆಂಬುದು ಮಹತ್ವದ ಸಂಗತಿಯಲ್ಲ. ನಿಮ್ಮ ಆಹಾರ ವಸ್ತುಗಳನ್ನು ಆಯ್ದುಕೊಳ್ಳುವಾಗ ನಿಮಗೆ ಎಷ್ಟು ಬೇಕೋ ಅಷ್ಟು ಸಂಯಮವನ್ನು ಪಾಲಿಸಿರಿ. ಈ ಸಂಯಮವು ಸ್ತುತ್ಯವೂ ಅವಶ್ಯಕವೂ ಆಗಿದೆ, ಆದರೆ ಅದು ಅಹಿಂಸೆಯ ಅಂಚನ್ನು ಮಾತ್ರ ಮುಟ್ಟುತ್ತದೆ ಒಬ್ಬ ಮನುಷ್ಯನು ಆಹಾರ ವಿಷಯದಲ್ಲಿ ಬಹಳಷ್ಟು ಸ್ವಾತಂತ್ರ್ಯವುಳ್ಳವನಾಗಿರಬಹುದು. ಆದರೂ ಅವನ ಹೃದಯವು ಪ್ರೇಮದಿಂದ ತುಂಬಿ ತುಳುಕುತ್ತಿದ್ದರೆ, ಹೆರರ ದುಃಖವನ್ನು ನೋಡಿ ಅವನ ಹೃದಯವು ಕರಗಿ ನೀರಾಗುತ್ತಿದ್ದರೆ ಮತ್ತು ಅವನು ಎಲ್ಲ ವಿಕಾರಗಳನ್ನೂ ತನ್ನ ಹೃದಯದಿಂದ ಹೊರದೂಡಿದ್ದರೆ, ಅವನು ಅಹಿಂಸೆಯ ಸಾಕಾರವಾದ ರೂಪವೇ ಎನಿಸಬಹುದು. ಅವನು ಎಲ್ಲರಿಗೂ ಪೂಜ್ಯ ನೆನಿಸಬಹುದು. ಇದರ ಬದಲಾಗಿ ಒಬ್ಬ ಮನುಷ್ಯನ ತನ್ನ ಸ್ವಾರ್ಥ ಹಾಗೂ ವಿಕಾರಗಳ ಗುಲಾಮನೂ ಕಲ್ಲೆದೆಯವನೂ ಆಗಿದ್ದು ಆಹಾರ ವಿಷಯದಲ್ಲಿ ಮಾತ್ರ ಅತಿಯಾಗಿ ಎಚ್ಚರಿಕ ವಹಿಸುವವನಾಗಿದ್ದರೆ ಅವನು ಅಹಿಂಸೆಗೆ ಅಪರಿಚಿತನೂ ಅನುಕಂಪನೀಯನೂ ಎನಿಸುತ್ತಾನೆ.

ಯ.ಇ, ೧೯೨೮

ತ್ಯಾಗ

ತ್ಯಾಗವೆಂದರೆ ಸಂಸಾರವನ್ನು ಬಿಟ್ಟು ಅರಣ್ಯವನ್ನು ಸೇರುವುದೆಂದು ಅರ್ಥವಲ್ಲ. ನಮ್ಮ ಜೀವನದ ಪ್ರತಿಯೊಂದು ಕಾರ್ಯವನ್ನು ತ್ಯಾಗ ಮನೋವೃತ್ತಿಗೆ ಒಳಗಾಗಿಸುವುದೇ ತ್ಯಾಗವು. ಜೀವನವು ಒಂದು ವಿಲಾಸವಲ್ಲ. ಅದು ಒಂದು ಕರ್ತವ್ಯವೆಂದು ಗೃಹಸ್ಥನು ತಿಳಿದು ನಡೆದರೆ ಅವನು ತ್ಯಾಗಿಯೆನಿಸುತ್ತಾನೆ. ಒಬ್ಬ ವ್ಯಾಪಾರವಸ್ಥನು ತ್ಯಾಗಮನೋವೃತ್ತಿಯವನಾದರೆ ಕೋಟಿಗಟ್ಟಲೆ ಹಣವು ಅವನ ಕೈಯ್ಯಲ್ಲಿ ಓಡಾಡುತ್ತಿದ್ದರೂ ಅವನು ತ್ಯಾಗಿಯೆನಿಸುತ್ತಾನೆ. ಅವನು ತ್ಯಾಗಮನೋವೃತ್ತಿಯ ನಿಯಮವನ್ನು ಸರಿಯಾಗಿ ಪಾಲಿಸಿದರೆ ತನ್ನ ಶಕ್ತಿ ಸಾಮರ್ಥ್ಯಗಳನ್ನು ಜನತೆಯ ಸೇವೇಗಾಗಿಯೇ ವೆಚ್ಚ ಮಾಡುತ್ತಾನೆ. ತ್ಯಾಗಿಯಾದ ವರ್ತಕನು ಮೋಸಮಾಡುವುದಿಲ್ಲ. ಸಟಾವ್ಯವಹರಾವನ್ನು ಕೈಗೊಳ್ಳುವುದಿಲ್ಲ. ಅವನು ಸಾದಾ ಜೀವನವನ್ನು ನಡೆಸುತ್ತಾನೆ; ಯಾವ ಪ್ರಾಣಿಯನ್ನೂ ಹಿಂಸೆಗೆ ಒಳಪಡಿಸುವುದಿಲ್ಲ; ಇಂಥವನು ಲಕ್ಷಗಟ್ಟಲೆ ಹಣವನ್ನಾದರೂ ಕಳೆದುಕೊಳ್ಳುವವನಲ್ಲದೆ ಇನ್ನೊಬ್ಬರಿಗೆ ಹಾನಿಯನ್ನುಂಟು ಮಾಡುವುದಿಲ್ಲ.

ತ್ಯಾಗಮಯವಾದ ಜೀವನವು ಕಲೆಯ ಕಳಸವಾಗಿದೆಯಲ್ಲದೆ ನಿಜವಾದ ಆನಂದದಿಂದ ತುಂಬಿ ತುಳುಕುತ್ತದೆ. ಸೇವೆಯನ್ನು ಕೈಗೊಂಡವನು ತನ್ನ ಸುಖಸೌಕರ್ಯಗಳ ಬಗ್ಗೆ ವ್ಯರ್ಥವಾಗಿ ಚಿಂತಿಸುವುದಿಲ್ಲ. ತನ್ನ ಯೋಗಕ್ಷೇಮದ ಹೊಣೆಯನ್ನೆಲ್ಲ ಅವನು ದೇವರಿಗೆ ಒಪ್ಪಿಸಿಬಿಟ್ಟಿರುತ್ತಾನೆ. ದೇವರು ಅವನ ಯೋಗಕ್ಷೇಮವನ್ನು

ಲಕ್ಷಿಸಬಹುದು ಅಥವಾ ಅಲಕ್ಷಿಸಬಹುದು ಅದರ ಬಗ್ಗೆ ಅವನು ವಿಚಾರ ಮಾಡುವುದೇ ಇಲ್ಲ. ಆದುದರಿಂದ ತನ್ನ ಕೈಗೆ ಸಿಗುವ ವಸ್ತುಗಳನ್ನೆಲ್ಲ ಲಹೊತ್ತೊಯ್ಯಲು ಅವನು ಬಯಸುವುದಿಲ್ಲ. ತನಗೆ ತೀರ ಅವಶ್ಯ ಎಂದುದನ್ನೇ ಅವನು ತೆಗೆದುಕೊಂಡು ಉಳಿದುದುನ್ನೆಲ್ಲ ಬಿಟ್ಟುಬಿಡುತ್ತಾನೆ. ಕಷ್ಟಕ್ಕೀಡಾದರೂ ಅವನು ಶಾಂತನೂ, ಕೋಪರಹಿತನೂ, ನಿಶ್ಚಲಮನಸ್ಸಿನವನೂ ಆಗಿರುವನು. ಸದ್ಗುಣವೇ ಸದ್ಗುಣದ ಪ್ರತಿಫಲವಾಗಿರುವಂತೆ; ಅವನ ಸೇವೆಯೇ ಅವನಿಗೆ ಪ್ರತಿಫಲವಾಗಿರುತ್ತದೆ; ಅಷ್ಟರಿಂದಲೇ ಅವನು ಸಂತುಷ್ಟನಾಗಿರುತ್ತಾನೆ.

ಸ್ವಸಂತೋಷದಿಂದ ಇನ್ನೊಬ್ಬರನ್ನು ಸೇವಿಸುವವನು ತನ್ನಲ್ಲಿರುವ ಸಾಮರ್ಥ್ಯವನ್ನೂ ಅದಕ್ಕಾಗಿ ಮೀಸಲಿಡಬೇಕಾಲ್ಲದೇ ತನ್ನ ಸ್ವಂತದ ಸೇವೆಗೆ ಕೊನೆಯ ಸ್ಥಾನವನ್ನೂ ಕೊಡಬೇಕು. ನಿಜವಾಗಿ ಹೇಳಬೇಕೆಂದರೆ, ಶುದ್ಧ, ಭಕ್ತನು ಮಾನವ ಸೇವೆಗಾಗಿ ತನ್ನ ಸರ್ವಸ್ವವನ್ನೂ ಆತ್ಮಾರ್ಪಣಬುದ್ಧಿಯಿಂದ ಅರ್ಪಿಸುವನು.

ಯರವಡಾ ಮಂದಿರದಿಂದ, ಪು. ೫೭–೬೦

ರೊಟ್ಟಿ ದುಡಿತ

ರೊಟ್ಟಿ ದುಡಿತದ ಬಗ್ಗೆ ಟಾಲಸ್ಟಾಯರು ಬರೆದ ಬರೆಹವನ್ನು ಓದಿದನಂತರ ಮನುಷ್ಯನು ಬಾಳಬೇಕಾದರೆ ಅವನು ರಟ್ಟೆ ಮುರಿದು ರೊಟ್ಟೆ ಗಳಿಸಬೇಕು ಎಂಬ ತತ್ವವು ನನಗೆ ಮೊಟ್ಟ ಮೊದಲನೆಯ ಸಾರಿ ಮನದಟ್ಟಾಯಿತು. ಅದಕ್ಕೂ ಮೊದಲು ನಾನು ರಸ್ಕಿನ್ ಮಹಾಶಯನು ಬರೆದ ಪೂಜ್ಯ ಭಾವನೆಯನ್ನು ತಾಳತೊಡಗಿದ್ದೆನು.

ಮನುಷ್ಯನು ತನ್ನ ರಟ್ಟೆ ಮುರಿದು ರೊಟ್ಟೆ ಗಳಿಸಬೇಕು ಎಂಬ ದಿವ್ಯನಿಯಮವನ್ನು ಮೊಟ್ಟಮೊದಲು ಒತ್ತಿ ಹೇಳಿದವನೆಂದರೆ ರಶಿಯಾ ದೇಶದ ಟಿ.ಎಂ. ಬಾಡರೆಫ್ (T. M. Bondraef) ಎಂಬ ಲೇಖಕ ಮಹಾಶಯನು. ಈ ದಿವ್ಯ ನಿಯಮವನ್ನು ಪ್ರಚುರಪಡಿಸಿ ಅದಕ್ಕೆ ವಿಶಾಲವಾದ ಪ್ರಕಟನೆ ಒದಗಿಸಿದವನೆಂದರೆ ಟಾಲ್‌ಸ್ಟಾಯ್ ಮಹಾಶಯನು. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿಯೂ ಇದೇ ತತ್ವವನ್ನು ಹೇಳಲಾಗಿದೆ ಎಂದು ನನ್ನ ಅಭಿಪ್ರಾಯ. ಯಜ್ಞವನ್ನು ಮಾಡದೆ ಯಾವನು ಊಟ ಮಾಡುವನೋ ಅವನು ಕಳ್ಳತನದಿಂದ ದೊರಕಿಸಿದ ಆಹಾರವನ್ನು ತಿನ್ನುತ್ತಾನೆ. ಎಂದು ಅಲ್ಲಿಹೇಳಲಾಗಿದೆ. ಯಜ್ಞವೆಂದರೆ ಬೆವರು ಸುರಿಸಿ ರೊಟ್ಟಿಯನ್ನು ದೊರಕಿಸಬೇಕು ಎಂದು ಮಾತ್ರ ಇಲ್ಲಿ ಅರ್ಥವಾಗುತ್ತದೆ. ತರ್ಕವೂ ನಮ್ಮನ್ನು ಇದೇ ಸಿದ್ಧಾಂತಕ್ಕೆ ಕೊಂಡೊಯ್ಯುತ್ತದೆ. ಶರೀರಶ್ರಮವನ್ನು ಮಾಡದ ಮನುಷ್ಯನು ಊಟ ಮಾಡಲು ಹೇಗೆ ಹಕ್ಕನ್ನು ಸಂಪಾದಿಸಬಲ್ಲನು? ನಿನ್ನ ಮೈ ಬೆವರಿನಿಂದಲೇ ನೀನು ಊಟ ಮಾಡಬೇಕು' ಎಂದು ಬೈಬಲ್ ಹೇಳುತ್ತದೆ. ಒಬ್ಬ ಲಕ್ಷಾಧೀಶನು ಇಡೀ ದಿನ ಬರಿ ಹಾಸಿಗೆಯ ಮೇಲೆಯೇ ಉರುಳಾಡುತ್ತಿದ್ದು ಸೇವಕರು ಅಲ್ಲಿಯೇ ಅವನಿಗೆ ಬಾಯಲ್ಲಿ ತುತ್ತು ಹಾಕಿ ಉಣಿಸುತ್ತಿದ್ದರೆ ಆ ಲಕ್ಷಾಧೀಶನು ಬಹುದಿನಗಳವರೆಗೆ ಈ ತರದ ಜೀವನವನ್ನು ಸಾಗಿಸಲಾರನು. ಬೇಗನೆ ಅವನು ಅದಕ್ಕೆ ಬೇಸರಗೊಳ್ಳುವನು. ಆದುದರಿಂದ ಅವನು ವ್ಯಾಯಾಮ ಮಾಡಿ ಹಸಿವನ್ನುಂಟು ಮಾಡಿಕೊಳ್ಳತೊಡಗುತ್ತಾನೆ. ತಾನೇ ತನ್ನ ಕೈಯಿಂದಲೇ ಉಣ್ಣ ತೊಡಗುತ್ತಾನೆ. ಹೀಗೆ

ಪ್ರತಿಯೊಬ್ಬನೂ ಅವನು ಸಿರಿವಂತನೇ ಇರಲಿ ಬಡವನೇ ಇರಲಿ ಅವನಿಗೆ ಯಾವುದೇ ರೀತಿಯಲ್ಲಾಗಲೀ ವ್ಯಾಯಾಮವು ಅವಶ್ಯವಿದ್ದ ಮೇಲೆ ಈ ವ್ಯಾಯಾಮವು ಉತ್ಪಾದಕ ಸ್ವರೂಪವನ್ನು ಅಂದರೆ ರೊಟ್ಟಿಯು ದುಡಿತದ ಸ್ವರೂಪವನ್ನು ಏಕೆ ತಳೆಯಬಾರದು? ಒಕ್ಕಲುತನದಲ್ಲಿ ತೊಡಗಿದವರಿಗೆ ವ್ಯಾಯಾಮ ಮಾಡು ಎಂದಾಗಲೀ ಸ್ನಾಯುಗಳನ್ನು ದುಡಿಸು ಎಂದಾಗಲೀ ಯಾರೂ ಪ್ರತ್ಯೇಕವಾಗಿ ಹೇಳುವುದಿಲ್ಲ. ಮಾನವ ಜನಾಂಗದ ಹತ್ತರಲ್ಲಿ ಒಂಭತ್ತು ಪಾಲು ಜನ ನೆಲವನ್ನು ಉತ್ತು ತಮ್ಮ ಬಾಳನ್ನು ಸಾಗಿಸುತ್ತಾರೆ. ಇನ್ನುಳಿದ ಒಂದು ಪಾಲು ಜನವೂ ಕನಿಷ್ಠ ಪಕ್ಷ ತಮ್ಮ ಆಹಾರವನ್ನು ದೊರಕಿಸುವ ಮಟ್ಟಿಗಾದರೂ ಬಹುಸಂಖ್ಯಾತರ ಈ ಉದಾಹರಣೆಯನ್ನು ಅನುಸರಿಸಿದರೆ ಈ ಜಗತ್ತು ಎಷ್ಟು ಸುಖಮಯವೂ, ಆರೋಗ್ಯಶಾಲಿಯೂ, ಶಾಂತಿಯುತವೂ ಎನಿಸುವುದಲ್ಲ! ಇಂಥ ಜನರು ಒಕ್ಕಲುತನವನ್ನು ಕೈಗೊಂಡರೆ ಒಕ್ಕಲುತನಕ್ಕೆ ಒದಗಿದ ಹಲವು ಸಂಕಟಗಳು ಸುಲಭವಾಗಿ ನಿವಾರಣೆಯಾಗುತ್ತದೆ. ರೊಟ್ಟಿ ದುಡಿತದ ಅವಶ್ಯಕತೆಯನ್ನು ಎಲ್ಲರೂ ಒಪ್ಪಿಕೊಂಡರೆ ದ್ವೇಷವನ್ನು ಹುಟ್ಟಿಸುವ ವರ್ಗಭೇದವು ಮಾಯವಾಗುತ್ತದೆ. ರೊಟ್ಟಿ ಜಗತ್ತಿನ ತುಂಬ ದುಡಿಯುವವರ ಮತ್ತು ದುಡಿಸಿಕೊಳ್ಳುವವರ ನಡುವೆ ಕಲಹವಿದೆ. ಬಡವರು ಸಿರಿವಂತರನ್ನು ದ್ವೇಷಿಸುತ್ತಿದ್ದಾರೆ, ಎಲ್ಲರೂ ತಮ್ಮ ರೊಟ್ಟಿಗಾಗಿ ದುಡಿದರೆ ವರ್ಗಭೇದವೇ ಅಳಿಸಿಹೋಗುವುದು. ಸಿರಿವಂತರು ಉಳಿದರೂ ತಮ್ಮ ಆಸ್ತಿಯ ಧರ್ಮದರ್ಶಿಗಳಾಗಿ ಮಾತ್ರ ಉಳಿಯುತ್ತಾರಲ್ಲದೆ ತಮ್ಮ ಆಸ್ತಿಯನ್ನು ಅವರು ಸಾರ್ವಜನಿಕ

ಹಿತಕ್ಕಾಗಿ ಉಪಯೋಗಿಸುತ್ತಾರೆ. ಬ್ರಹ್ಮಚರ್ಯವನ್ನು ನಿಸರ್ಗದತ್ತ ನಿಯಮವೆಂದು ಆಚರಿಸುವವನಿಗೆ, ರೊಟ್ಟಿ ದುಡಿತವು ನಿಜವಾದ ವರವಾಗಿದೆ. ರೊಟ್ಟಿ ದುಡಿತವೆಂದರೆ ನಿಜವಾಗಿಯೂ ಒಕ್ಕಲುತನದ ದುಡಿಮೆಯಾಗಿದೆ. ಅದರೆ ಈಗಿನ ಕಾಲದಲ್ಲಿ ಪ್ರತಿಯೊಬ್ಬನೂ ಒಕ್ಕಲುತನವನ್ನು ಕೈಗೊಳ್ಳುವ ಸ್ಥಿತಿಯಲ್ಲಿ ಇಲ್ಲ. ಆದುದರಿಂದ ಒಬ್ಬ ವ್ಯಕ್ತಿಯು ನೂಲಬಹುದು, ನೇಕಾರಿಕೆ ಮಾಡಬಹುದು, ಆದರೆ ಒಕ್ಕಲುತನವೇ ಕುಂಬಾರಿಕೆಯನ್ನೋ ಕೈಗೊಳ್ಳಬಹುದು. ಆದರೆ ಒಕ್ಕಲುತನವೇ ತಮ್ಮ ಆದರ್ಶವೆಂಬುದನ್ನು ಮಾತ್ರ ಅವರು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರತಿಯೊಬ್ಬನೂ ತಾನೇ ತನ್ನ ಭಂಗಿಯಾಗಬೇಕು. ಆಹಾರ ಸೇವನೆಯಷ್ಟೇ ಮಲ ವಿಸರ್ಜನೆಯೂ ಅವಶ್ಯಕವಾಗಿದೆ. ಪ್ರತಿಯೊಬ್ಬನೂ ತನ್ನ ವಿಸರ್ಜನೆಯೂ ಅವಶ್ಯಕವಾಗಿದೆ. ಪ್ರತಿಯೊಬ್ಬನೂ ತನ್ನ ಮಲವಿಸರ್ಜನೆಯ ಸ್ಥಳವನ್ನು ತಾನೇ ಸ್ವಚ್ಛಮಾಡುವುದು ಅತ್ಯುತ್ತಮವು. ಅದು ಸಾಧ್ಯವಿರದಲ್ಲಿ ಪ್ರತಿಯೊಂದು ಕುಟುಂಬವೂ ತನ್ನ ಭಂಗೀ ಕೆಲಸವು ಒಂದು ವಿಶಿಷ್ಟ ವರ್ಗದ ಕಾರ್ಯವಾಗಿ ಪರಿಗಣಿಸಲ್ಪಟ್ಟಿರುವುದೋ ಆ ಸಮಾಜದಲ್ಲಿ ಒಂದು ದೊಡ್ಡ ಕೊರತೆ ಇದೆ ಇಂದು ನನಗೆ ಹಲವು ವರುಷಗಳಿಂದಲೂ ಎನಿಸುತ್ತಲಿದೆ. ನಮ್ಮ ಆರೋಗ್ಯಕ್ಕೆ ಅವಶ್ಯವಾದ ಈ ಭಂಗೀ ಕೆಲಸವನ್ನು ಬೇರೆ ಕೀಳುತರದ ಕೆಲಸವೆಂದು ಯಾವ ಮಹಾಶಯನು ಮೊಟ್ಟಮೊದಲು ವರ್ಗೀಕರಣ ಮಾಡಿದನೆಂಬುದು ಯಾವ ಇತಿಹಾಸದಿಂದಲೂ ಗೊತ್ತಾಗುವುದಿಲ್ಲ. ಹೀಗೆ ವರ್ಗೀಕರಣ ಮಾಡಿದ ಮಹಾಶಯನು ಯಾವನೇ ಆಗಿರಲಿ ಅವನು ಮಾತ್ರ ನಮಗೆ ಇದರಿಂದ

ಕಲ್ಯಾಣವನ್ನು ಮಾಡಲಿಲ್ಲ. ನಾವೆಲ್ಲರೂ ಕಕ್ಕಸ ಬಳಿಯುವವರು ಎಂಬ ಭಾವನೆಯನ್ನು ಬಾಲ್ಯದಿಂದಲೂ ನಮ್ಮ ಮೇಲೆ ಪರಿಣಾಮವಾಗುವಂತೆ ಬಿಂಬಿಸಬೇಕು. ಹೀಗೆ ಮಾಡುವ ಉತ್ತಮ ಉಪಾಯವೆಂದರೆ ಈ ಮಾತನ್ನು ಅರಿತವರು ತಮ್ಮ ರೊಟ್ಟಿ ದುಡಿತಕ್ಕಾಗಿ ಭಂಗೀ ಕೆಲಸವನ್ನು ಪ್ರಾರಂಭಿಸಬೇಕು. ಹೀಗೆ ವೈಚಾರಿಕ ರೀತಿಯಲ್ಲಿ ನಾವು ಭಂಗೀ ಕೆಲಸವನ್ನು ಕೈಗೊಂಡರೆ ಪ್ರತಿಯೊಬ್ಬ ಮನುಷ್ಯನು ಸರಿ ಸಮಾನವೆಂಬ ಭಾವನೆಯನ್ನು ನಿಜವಾಗಿಯೂ ಅರಿತುಕೊಳ್ಳಲು ಅದು ಸಹಾಯಕವಾಗುವುದು.

ಯರವಡಾ ಮಂದಿರದಿಂದ, ಪು. ೩೭

ಯಜ್ಞಗಳು ಹಲವು ಪ್ರಕಾರವಿರಬಹುದು. ಅವುಗಳಲ್ಲಿ ರೊಟ್ಟಿಯ ದುಡಿತವೂ ಒಂದು ಯಜ್ಞವಾಗಿದೆ. ಎಲ್ಲರೂ ತಮ್ಮ ರೊಟ್ಟಿಗಾಗಿ ದುಡಿದರೆ ಸಾಕು. ಆಗ ಎಲ್ಲರಿಗೂ ಸಾಕಷ್ಟು ಆಹಾರ ವಿಶ್ರಾಂತಿಗಳು ದೊರೆಯುತ್ತವೆ. ಆಗ ಜನಸಂಖ್ಯೆ ಹೆಚ್ಚಾಯಿತೆಂಬ ಕೂಗು ಕೇಳಿಬರುವುದಿಲ್ಲ. ನಮ್ಮ ಸುತ್ತಲೂ ಕಾಣುವ ದುಃಖ ದುಮ್ಮಾನಗಳೂ ಬೇನೆ ಬೇಸರಿಕೆಗಳೂ ಕಾಣಿಸಿಕೊಳ್ಳುವುದಿಲ್ಲ. ಇಂಥ ದುಡಿತವು ಶ್ರೇಷ್ಠ ತಮವಾದ ಯಜ್ಞವಾಗಿದೆ. ಇದಲ್ಲದೆ ಮನುಷ್ಯರು ತಮ್ಮ ದೇಹಾದಲ್ಲಿ ಮನಸ್ಸಿನಿಂದಲೂ ಇನ್ನೂ ಹಲವು ಕಾರ್ಯಗಳನ್ನು ನಿಶ್ಚಿತವಾಗಿ ಕೈಗೊಳ್ಳುತ್ತಾರೆ. ಆದರೆ ಅದೆಲ್ಲ ಶ್ರಮವೂ ಲೋಕಕಲ್ಯಾಣಕ್ಕಾಗಿ ಗೈದ ಪ್ರೀತಿಯ ದುಡಿತವೆನಿಸುತ್ತೆ. ಆಗ ಯಾರೂ ಸಿರಿವಂತರೆಂದಾಗಲೀ ಬಡವರೆಂದಾಗಲೀ ಮೇಲಿನವರೆಂದಾಗಲೀ ಕೆಳಗಿನವರೆಂದಾಗಲೀ ಸ್ಪೃಶ್ಯರೆಂದಾಗಲೀ ಅಸ್ಪೃಶ್ಯರೆಂದಾಗಲೀ ಎನಿಸಿಕೊಳ್ಳುವುದಿಲ್ಲ.

ನಾವು ಈ ರೀತಿ ನಡೆದರೆ ನಮ್ಮ ಅವಶ್ಯಕತೆಗಳು ತೀರ ಕಡಿಮೆಯಂತವಾಗುತ್ತವೆ. ನಮ್ಮ ಆಹಾರವು ಬಹಳ ಸಾದಾರೀತಿದಾಗುತ್ತದೆ. ಆಗ ನಾವು ಬದುಕುವುದಕ್ಕಾಗಿ ಉಣ್ಣಬೇಕಾಗುತ್ತದಲ್ಲದೆ ಉಣ್ಣುವುದಕ್ಕಾಗಿ ಬದುಕಬೇಕಾಗುವುದಿಲ್ಲ. ಯಾರಿಗೆ ಈ ಸಿದ್ಧಾಂತದ ಸತ್ಯತೆಯ ಬಗ್ಗೆ ಸಂಶಯವಿದೆಯೋ ಅವರು ತಮ್ಮ ರೋಟ್ಟಿಯನ್ನು ದೊರಕಿಸುವುದಕ್ಕಾಗಿ ಬೆವರು ಸುರಿಸಲು ಪ್ರಯತ್ನಿಸಲಿ. ಆಗ ತಮ್ಮ ಬೆವರಿನ ಬೆಳೆಯು ಅತ್ಯಂತ ರುಚಿಕರವಾದುದೆಂದು ಗೊತ್ತಾಗುತ್ತದೆ. ಅವರ ಆರೋಗ್ಯವು ಸುಧಾರಿಸುತ್ತದೆ. ತಾವು ಇಲ್ಲಿಯವರೆಗೆ ಬಳಸುತ್ತಿದ್ದ ಹಲವು ವಸ್ತುಗಳು ಅನಾವಶ್ಯಕವಾಗಿದ್ದವೆಂಬುದು ಕಂಡುಬರುತ್ತದೆ.

ಮನುಷ್ಯನು ತನ್ನ ಬುದ್ಧಶ್ರಮದಿಂದ ತನ್ನ ರೊಟ್ಟಿಯನ್ನು ದೊರಕಿಸಬಾರದೇನು? ದೊರಕಿಸಬಾರದು. ಶಾರೀರಿಕ ಬೇಡಿಕೆಗಳು ಶಾರೀರಿಕ ಶ್ರಮದಿಂದಲೇ ಪೂರೈಸಲ್ಪಡಬೇಕು. Render unto Caesar that which is Caesar's (ಯಾವುದು ಸೀಝರನದೋ ಅದನ್ನು ಸೀಝರನಿಗೇ ಮುಟ್ಟಿಸು) ಎಂಬ ಇಂಗ್ಲೀಷ ಗಾದೆಯು ಇಲ್ಲಿ ಸರಿಯಾಗಿ ಅನ್ವಯಿಸುತ್ತದೆ.

ಬರೀ ಮಾನಸಿಕ ಅಂದರೆ ಬೌದ್ಧಿಕ ಶ್ರಮವು ಆತ್ಮಕ್ಕಾಗಿ ಇರುತ್ತದೆ. ಆದುದರಿಂದ ಆತ್ಮ ತೃಪ್ತಿಯೇ ಅದರ ಪ್ರತಿಫಲವೆನಿಸುತ್ತದೆ. ಅದು ಹಣವನ್ನು ಪ್ರತಿಫಲವಾಗಿ ಬಯಸತಕ್ಕದ್ದಲ್ಲ. ಆದರ್ಶವಾದ ರಾಜ್ಯದಲ್ಲಿ ಡಾಕ್ಟರರೂ ವಕೀಲರೂ ಇದೇ ಮಾದರಿಯ ಉದ್ಯೋಗ ಕೈಗೊಂಡ ಇನ್ನಿತರರೂ ಸಮಾಜದ ಕಲ್ಯಾಣಕ್ಕಾಗಿ ದುಡಿಯುವರಲ್ಲದೆ ತಮ್ಮ ಸ್ವಂತಕ್ಕಾಗಿ ದುಡಿಯುವುದಿಲ್ಲ. ರಟ್ಟೆ ಮುರಿದು

ರೊಟ್ಟಿ ಗಳಿಸುಎಂಬ ನಿಯಮವನ್ನು ನಾವು ವಿಧೇಯತೆಯಿಂದ ಪಾಲಿಸಿದರೆ ಯಾವ ಹಾಹಾಕಾರವಿಲ್ಲದೆ ಸಾಮಾಜಿಕ ರಚನೆಯಲ್ಲಿ ಕ್ರಾಂತಿಯುಂಟಾಗುತ್ತದೆ. ಬದುಕುವುದಕ್ಕಾಗಿ ನಡೆಯುವ ಹೋರಾಟದ ಸ್ಥಳದಲ್ಲಿ ಸೇವೆಗಾಗಿ ನಡೆಯುವ ಹೋರಾಟವನ್ನು ತರುವುದೇ ಮಾನವತೆಯ ನೀತಿ ನಿಯಗಳು ಆಕ್ರಮಿಸುವುವು.

ರಟ್ಟೆ ಮುರಿದು ರೊಟ್ಟಿ ಗಳಿಸುವ ಕರ್ತವ್ಯವನ್ನೂ ಅದರ ಸರ್ವಾಂಗೀಣ ಅರ್ಥವನ್ನೂ ಸಂತೋಷದಿಂದ ದೃಢವಾಗಿ ಅರಿತುಕೊಳ್ಳುವುದೇ ಹಳ್ಳಿಗೆ ಹಿಂದಿರುಗಿರಿ ಎಂಬ ಕೂಗಿನ ಅರ್ಥವಾಗಿದೆ. "ಲಕ್ಷಾವಧಿ ಭಾರತಪುತ್ರರು ಇಂದು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ ಅವರು ಅಲ್ಲಿ ಅರೆ ಹೊಟ್ಟೆಯುಂಡು ಜೀವಿಸುತ್ತಿದ್ದಾರೆ." ಎಂದು ಒಬ್ಬ ಟೀಕಾಕಾರನು ತನ್ನ ಆಕ್ಷೇಪವನ್ನು ಸೂಚಿಸಿದ್ದಾನೆ. ಅಯ್ಯೋ ಇದು ನಂಬಲಾರದಷ್ಟು ಸತ್ಯವಾಗಿದೆ! ಈಗ ಹಳ್ಳಿಯಲ್ಲಿ ವಾಸಿಸುತ್ತಿರುವವರು ಸ್ವಸಂತೋಷದಿಂದ ಅಲ್ಲಿ ವಾಸಿಸುತ್ತಿಲ್ಲವೆಂಬುದನ್ನು ನಾವು ಸುದೈವದಿಂದ ಅರಿತಿದ್ದೇವೆ. ಹಳ್ಳಿಯಲ್ಲಿ ವಾಸಿಸುತ್ತಿರುವವರು ಸ್ವೇಚ್ಛೆಯಿಂದ ರೊಟ್ಟಿ ದುಡಿತದ ದೀಕ್ಷೇಯನ್ನು ಕೈಗೊಂಡಿಲ್ಲ. ಶಕ್ಯವಿದ್ದಲ್ಲೆಲ್ಲ. ಅವರು ತಮ್ಮ ಶರೀರ ಶ್ರಮವನ್ನು ತಪ್ಪಿಸಲು ಹವಣಿಸುತ್ತಾರೆ. ಇಷ್ಟೇ ಅಲ್ಲ ನೆರೆಯ ಪಟ್ಟಣದಲ್ಲಿ ಅವರಿಗೆ ಇರಲು ಸ್ಥಳವು ದೊರೆತರೆ ಅಲ್ಲಿಗೆ ಕೂಡಲೇ ನುಗ್ಗಿಬಿಡುತ್ತಾರೆ. ಒಬ್ಬ ಯಜಮಾನನಿಗೆ ಒತ್ತಾಯದಿಂದ ವಿಧೇಯನಾಗಿರುವುದು ಗುಲಾಮಗಿರಿಯೆನಿಸುತ್ತದೆ. ತಂದೆಗೆ

ಸ್ವಸಂತೋಷದಿಂದ ವಿಧೇಯನಾಗಿರುವುದು ಪಿತೃಭಕ್ತಿಯೆನಿಸುತ್ತದೆ. ರಟ್ಟೆ ಮುರಿದು ರೊಟ್ಟಿಗಳಿಸುವ ನಿಯಮಕ್ಕೆ ನಾವು ಒತ್ತಾಯಕ್ಕೊಳಗಾಗಿ ವಿಧೇಯರಾದರೆ ಅದು ನಮ್ಮಲ್ಲಿ ಬಡತನ, ರೋಗ, ಅತೃಪ್ತಿಗಳನ್ನು ಹಟ್ಟಿಸುತ್ತದೆ. ಅದು ಗುಲಾಮಗಿರಿ ಎನಿಸುತ್ತದೆ. ಸ್ವಸಂತೋಷದಿಂದ ಅದನ್ನು ಪಾಲಿಸಿದರೆ ಅದು ಸಂತೃಪ್ತಿ ಹಾಗೂ ಆರೋಗ್ಯಗಳನ್ನು ಉಂಟು ಮಾಡಲೇಬೇಕು. ನಿಜವಾದ ಸಂಪತ್ತೆಂದರೆ ಬೆಳ್ಳಿಬಂಗಾರಗಳು ಅಲ್ಲ. ಗ್ರಾಮೋದ್ಯೋಗಸಂಸ್ಥೆಯು ಸಂತೋಷದಿಂದ ಕೈಗೊಳ್ಳುವ ರೊಟ್ಟಿ ದುಡಿತದ ಒಂದು ಪ್ರಯೋಗವಾಗಿದೆ.

ಹ. ೧೯೩೫

ಪ್ರ:– ಒಬ್ಬ ರವೀಂದ್ರನಾಥನಿಗಾಲೀ ಒಬ್ಬ ರಾಮನ್ ನಿಗಾಗಲೀ ರಟ್ಟೆ ಮುರಿದೇ ರೊಟ್ಟಿಗಳಿಸಬೇಕು ಎಂದು ಒತ್ತಾಯಪಡಿಸುವುದು ಯೋಗ್ಯವೇ? ಅದು ಶಕ್ತಿಯ ಅಪವ್ಯಯವೆನಿಸುವುದಿಲ್ಲವೆ? ಬೌದ್ಧಿಕ ಶ್ರಮ ವನ್ನು ಮಾಡುವವರೂ ಶಾರೀರಿಕ ಶ್ರಮ ಮಾಡುವವರೂ ಸಮಾಜಕ್ಕೆ ಉಪಯುಕ್ತವಾದ ಕೆಲಸವನ್ನು ಮಾಡುತ್ತಾರೆಂದ ಮೇಲೆ ಬೌದ್ಧಿಕ ಶ್ರಮವನ್ನು ಮಾಡುವವರು ಶಾರೀರಿಕ ಶ್ರಮ ಮಾಡುವವರಿಗೆ ಸರಿಸಮಾನರೆಂದು ಏಕೆ ಗಣಿಸಬಾರುದು?

ಉ:– ಬೌದ್ಧಿಕ ಶ್ರಮವು ಮಹತ್ವದ್ದಾಗಿದೆ ಮತ್ತು ಜೀವನ ಕ್ರಮದಲ್ಲಿ ಅದಕ್ಕೆ ಒಂದು ನಿಶ್ಚಿತವಾದ ಸ್ಥಾನವಿದೆ. ಆದರೆ ಶಾರೀರಿಕ ಶ್ರಮದ ಅವಶ್ಯಕತೆಯನ್ನು ನಾನು ಇಲ್ಲಿ ಒತ್ತಿ ಹೇಳುತ್ತಿದ್ದೇನೆ.

ಯಾವ ಮನುಷ್ಯನೂ ಆ ಕರ್ತವ್ಯದಿಂದ ವಿಮುಕ್ತತೆಯನ್ನು ಪಡೆಯತಕ್ಕದ್ದಲ್ಲ ಎಂದು ಸಾರಿ ಹೇಳುತ್ತೇನೆ. ಇಷ್ಟೇ. ಅಲ್ಲ, ಶಾರೀರಿಕ ಶ್ರಮವು ಅವನ ಬೌದ್ಧಿಕ ಕೃತಿಗಳ ಮಟ್ಟವನ್ನು ಎತ್ತರಿಸಲು ಸಹಾಯಕವಾಗುವುದು.

ಹ. ೧೯೪೭

ಸ್ವದೇಶಿ

ಸ್ವದೇಶಿ ವ್ರತವನ್ನು ಕೈಗೊಂಡವನ ಮೊದಲನೆಯ ಕರ್ತವ್ಯವೆಂದರೆ, ತನ್ನ ಸಮೀಪದಲ್ಲಿದ್ದ ನೆರೆಹೊರೆಯವರ ಸೇವೆಗಾಗಿ ತನ್ನನ್ನು ಮೀಸಲಾಗಿಡುವುದು. ಹೀಗೆ ಮಾಡುವುದರಿಂದ ನಾವು ಇನ್ನುಳಿದವರ ಹಿತಸಂಬಂಧಗಳನ್ನು ತಮ್ಮ ಕಕ್ಷೆಯಿಂದ ಹೊರದೂಡಬೇಕಾಗುತ್ತದೆ. ಇವೆಲ್ಲ ಬಲಿಕೊಡಬೇಕಾಗುತ್ತದೆ. ಆದರೆ ಹೀಗೆ ಹೊರದೂಡುವುದೇ ಅಥವಾ ಬಲಿಕೊಡುವುದು ಬರೀ ತೋರಿಕೆಯದಾಗಿರುತ್ತದೆ. ಯಾಕೆಂದರೆ ನಮ್ಮ ನೆರೆಹೊರೆಯವರಿಗೆ ನಾವು ಮಾಡುವ ಉಪಕಾರವಾಗಿ ಪರಿಗಣಿಸುವ ಸ್ವಭಾವ ದ್ದಾಗಿರುವುದಿಲ್ಲ. ಬದಲಾಗಿ ಅದು ಅವರಿಗೆ ಉಪಕಾರವಾಗಿಯೇ ಪರಿಗಣಿಸುತ್ತದೆ. 'ಒಬ್ಬ ವ್ಯಕ್ತಿಗೆ ಸರಿಹೋಗುವಂಥದು ವಿಶ್ವಕ್ಕೂ ಸರಿಹೋಗುವುದು ಎಂಬ ತತ್ವವು ಸರ್ವಕಾಲಕ್ಕೂ ಸತ್ಯವಾದ್ದು ಎಂಬುದನ್ನು ನಮ್ಮ ಎದೆಯಾಳದಲ್ಲಿ ನಾವು ನೆನಪಿಟ್ಟುಕೊಳ್ಳುವುದು ಲೇಸು. ಇದರ ಬದಲಾಗಿ 'ದೂರದ ಗುಡ್ಡ' ದಿಂದ ಆಕರ್ಷಿತನಾಗಿ ಒಬ್ಬ ಮನುಷ್ಯನು ಪೃಥ್ವಿಯ ಯಾವುದೋ ಒಂದು ತುದಿಗೆ ಸೇವೆಗೈಯಲು ಓಡಿದರೆ ಅವನ ಮಹತ್ವಾಕಾಂಕ್ಷೆಯು

ಕೈಗೊಡುವುದಿಲ್ಲವಷ್ಟೇ ಅಲ್ಲ,, ತನ್ನ ನೆರೆಹೊರೆಯವರಿಗೆ ಮಾಡಬೇಕಾದ ತನ್ನ ಕರ್ತವ್ಯದಿಂದಲೂ ಅವನು ಚ್ಯುತನಾಗುತ್ತಾನೆ. ಒಂದು ಪ್ರತ್ಯಕ್ಷ ಉದಾಹರಣೆಯನ್ನೇ ತೆಗೆದುಕೊಂಡು ವಿಚಾರಿಸೋಣ. ನಾನು ವಾಸಿಸುವ ವಿಶಿಷ್ಟವಾದ ಸ್ಥಳದಲ್ಲಿ ನನ್ನ ನೆರೆಹೊರೆಯುವರೂ ಬಂಧೂಬಳಗದವರೂ ನನಗೆ ಇದ್ದಾರೆ. ನನ್ನಿಂದ ಸೇವೆಯನ್ನು ಪಡೆಯಲು ಅವರಿಗೆ ಅಧಿಕಾರ ವಿರುವುದರಿಂದ ನನ್ನ ಮೇಲೆ ತಮ್ಮ ಹಕ್ಕು ಉಂಟು ಎಂದು ಅವರು ಸ್ವಾಭಾವಿಕವಾಗಿಯೇ ತಿಳಿಯುತ್ತಾರಲ್ಲದೆ ಸಹಾಯ ಸಹಕಾರಗಳಿಗಾಗಿ ನನ್ನ ಕಡೆಗೆ ನೋಡುತ್ತಾರೆ. ಈಗ ನಾನು ಒಮ್ಮಿಂದೊಮ್ಮೆಲೆ ದೂರ ದೇಶದ ಜನರ ಸೇವೆ ಕೈಗೊಳ್ಳಲು ಹೊರಡುತ್ತೇನೆಂದು ಭಾವಿಸೋಣ. ಈ ನನ್ನ ನಿರ್ಧಾರದಿಂದ ನೆರೆಹೊರೆಯುವರ ಬಂಧುಬಳಗದವರ ಜೀವನ ಕ್ರಮವು ಅಸ್ತವ್ಯಸ್ತವಾಗುದಲ್ಲದೆ ಅತ್ತ ನನ್ನ ಪುಕ್ಕಟೆ ಸಾಹಸದಿಂದ ಹೊಸ ಸ್ಥಳದ ವಾತಾರಣವೂ ಕದಡುವುದು ಹೀಗೆ ಸ್ವದೇಶಿ ತತ್ವವನ್ನು ಪಾಲಿಸದೇ ಇದ್ದುದರ ಪರಿಣಾಮವಾಗಿ ನನ್ನ ಹತ್ತಿರದ ನೆರೆಹೊರೆಯವರನ್ನು ಅಲಕ್ಷಿಸಿದ ಪರಿಣಾಮವಾಗಿ ನನ್ನ ಸೇವೆ ಮಾಡಬೇಕೆಂದಿರುವ ಜನರಿಗೆ ಅನುದ್ದೇಶಪೂರ್ವಕವಾಗಿ ಉಂಟಾದ ತೊಂದರೆಯೂ ಘಟಿಸುತ್ತದೆ.

ಸ್ವದೇಶಿ ತತ್ವವನ್ನು ತಪ್ಪಾಗಿ ಅರ್ಥ ಮಾಡಿಕೊಂಡಾಗ ಮಾತ್ರ ತೊಂದರೆಗಳು ಹುಟ್ಟಿಕೊಳ್ಳುತ್ತದೆ. ಉದಾಹರಾಣೆಗೆ ನನ್ನ ಕುಟುಂಬವನ್ನು ಘೋಷಿಸುವುದಕ್ಕಾಗಿ ನ್ಯಾಯವಾಗಿಯೋ ಅನ್ಯಾಯವಾಗಿಯೋ ಹಣವನ್ನು ಎತ್ತಿ ಹಾಕತೊಡಗಿದರೆ ಅದು

ಸ್ವದೇಶಿ ತತ್ವದ ಅಪಹಾಸ್ಯವೆನಿಸುತ್ತದೆ. ನನ್ನ ಕುಟುಂಬಕ್ಕೆ ನಾನು ಮಾಡಬೇಕಾದ ಕರ್ತವ್ಯವನ್ನು ನ್ಯಾಯವಾದ ಮಾರ್ಗದಿಂದ ಪೂರೈಸಬೇಕೆಂಬುದಕ್ಕಿಂತ ಹೆಚ್ಚಿನದೇನನ್ನೂ ಸ್ವದೇಶಿ ತತ್ವವು ನನ್ನಿಂದ ಬಯಸುವುದಿಲ್ಲ. ನನ್ನ ಕುಟುಂಬದ ಬಗ್ಗೆ ಇರುವ ಕರ್ತವ್ಯಗಳನ್ನು ನ್ಯಾಯವಾದ ರೀತಿಯಲ್ಲಿ ಪಾಲಿಸಲು ನಾನು ಮಾಡುವ ಪ್ರಯತ್ನವು ಜಗತ್ತಿನ ಕೂಡ ನಾನು ಹೇಗೆ ನಡೆಯಬೇಕೆಂಬುದನ್ನೂ ನನಗೆ ತಿಳಿಸಿಕೊಡುತ್ತದೆ. ಸ್ವದೇಶಿ ಪಾಲನೆಯು ಎಂದೂ ಯಾರಿಗೂ ಕೇಡನ್ನುಂಟುಡುವುದಿಲ್ಲ. ಒಂದು ವೇಳೆ ಹಾಗೆ ಕೇಡುಂಟಾದರೆ ಪ್ರೇರಣೆಯಾಗಿರುತ್ತದೆ.

ಸ್ವದೇಶಿಯ ಭಕ್ತನಾದವನು ಲೋಕಸೇವೆಯ ವೇದಿಕೆಯ ಮೇಲೆ ತನ್ನ ಕುಟುಂಬವನ್ನೇ ಬಲಿಕೊಡಬೇಕಾದ ಪ್ರಸಂಗಗಳು ಒಮ್ಮೊಮ್ಮೆ ಬರಬಹುದು. ಸ್ವೇಚ್ಛೆಯಿಂದ ಮಾಡಿದ ಇಂಥ ಬಲಿದಾನವು ಕುಟುಂಬಕ್ಕೆ ಸಲ್ಲಿಸಿದ ಅತ್ಯಂತ ಶ್ರೇಷ್ಠವಾದ ಸೇವೆಯಾಗಿದೆ. 'ಯಾವನು ತನ್ನ ಜೀವನವನ್ನು ಕಾಪಾಡಿ ಕೊಳ್ಳುತ್ತಾನೆಯೋಅವನು ಅದನ್ನು ಕಳೆದುಕೊಳ್ಳುತ್ತಾನೆ. ಮತ್ತು ಪರಮಾತ್ಮನ ಸಲುವಾಗಿ ಯಾವನು ತನ್ನ ಜೀವನವನ್ನು ಕಳೆದು ಕೊಳ್ಳುತ್ತಾನೆಯೋ ಅವನು ಅದನ್ನು ಪಡೆದುಕೊಳ್ಳುತ್ತಾನೆ' ಎಂಬ ಮಾತು ಒಬ್ಬ ವ್ಯಕ್ತಿಯ ವಿಷಯದಲ್ಲಿ ಸತ್ಯವಾಗಿದೆ. ಇನ್ನೊಂದು ಉದಾಹರಣೆಯನ್ನು ನೋಡೋಣ. ನನ್ನ ಹಳ್ಳಿಯಲ್ಲಿ ಪ್ಲೇಗು ಬೇನೆ ಹಬ್ಬಿತು ಎಂದು ತಿಳಿಯಿರಿ. ಈ ರೋಗದ ಹಾವಳಿಗೆ ತುತ್ತಾದ ಜನರ ಸೇವೆಗೈಯಲು ಯತ್ನಿಸುವಾಗ ನಾನು ನನ್ನ ಹೆಂಡತ್ತಿ ಮಕ್ಕಳು ಹಾಗೂ ನನ್ನ

ಕುಟುಂಬದ ಇತರರೂ ಅಳಿದುಹೋಗುತ್ತೇವೆಂದು ತಿಳಿಯಿರಿ, ಹೀದ್ದರೂ ಅಲ್ಲಿ ನನ್ನ ಕೂಡ ಕಾರ್ಯ ಮಾಡಲು ನನ್ನ ತೀರ ಹತ್ತಿರದವರೂ ಪ್ರೀತಿ ಪಾತ್ರರೂ ಆದವರ ಮನವೊಲಿಸಿದರೆ ನಾನು ನನ್ನ ಕುಟುಂಬ ನಾಗರಿಕನಾಗಿ ಕಾರ್ಯ ಮಾಡಿದಂತಾಗುವದಿಲ್ಲ. ಬದಲಾಗಿ ನಾನು ನನ್ನ ಕುಟುಂಬದ ನಿಜವಾದ ಮಿತ್ರವಾಗಿ ನಡೆದುಕೊಂಡಂತೆ ಆಗುವುದು. ಸ್ವದೇಶಿಯಲ್ಲಿ ಸ್ವಾರ್ಥಕ್ಕೆ ಸ್ಥಾನವಿಲ್ಲ. ಒಂದು ವೇಳೆ ಅದರಲ್ಲಿ ಸ್ವಾರ್ಥವು ಇದ್ದರೆ ಅದು ಅತ್ಯುಚ್ಚ ಸ್ವರೂಪದ್ದಾಗಿರುತ್ತದೆ. ಅಂದರೆ ಅದು ಪರೋಪಕಾರದಿಂದ ಬೇರೆಯಾಗಿರುವುದಿಲ್ಲ. ತನ್ನ ಶುದ್ಧ ಸ್ವರೂಪದಲ್ಲಿ ಸ್ವದೇಶಿಯು ಲೋಕಸೇವೆಯ ತುತ್ತತುದಿಯಾಗಿದೆ.

ಈ ರೀತಿಯಾದ ವಿಚಾರಸರಣಿಯನ್ನನುಸರಿಸಿ ಸ್ವದೇಶಿ ತತ್ತ್ವವನ್ನು ಸಮಾಜಕ್ಕೆ ಅನ್ವಯಿಸುವ ಮಾರ್ಗದಲ್ಲಿ ತೀರ ಅವಶ್ಯಕವಾದ ಮತ್ತು ಮಹತ್ವದ ಸಾಧನವೆಂದು ಖಾದಿಯನ್ನು ಕಂಡುಹಿಡಿದೆನು. ನಾನು ನನ್ನನ್ನು ಹೀಗೆ ಕೇಳಿಕೊಂಡೆನು. "ನಾನು ಮಾಡಬೇಕಾಗಿರುವ ಸೇವೆ ಎಂಥದು? ಭಾರತದ ಸಮೃದ್ಧವಾದ ಜನ ಜಂಗುಳಿಗೆ ಸದ್ಯಕ್ಕೆ ತೀರ ಅವಶ್ಯವಾದಂಥದು, ಬೇಗನೆ ಅರ್ಥವಾಗುವಂಥದು, ಕೃತಿಯಲ್ಲಿ ತರಲು ಹಗುರಾದಂಥದು, ಅದೇ ಕಾಲಕ್ಕೆ ಅರೆಹೊಟ್ಟೆಯುಂಡು ಇರುವ ನಮ್ಮ ದೇಶದ ಕೋಟಿಗಟ್ಟಲೆ ಜನರು ಬಾಳಲು ಸಮರ್ಥರಾಗುವಂತೆ ಮಾಡುವುದು ಯಾವುದು?" ಖಾದಿಯನ್ನು ಅಥವಾ ಚರಕವನ್ನು ಸಾರ್ವತ್ರಿಕವಾಗಿ ಮಾಡುವುದೊಂದೇ ಈ ಎಲ್ಲ ಸಂಗತಿಗಳನ್ನು ಪೂರೈಸಬಲ್ಲದು ಎಂದು ಉತ್ತರ ಬಂದಿತು.

ಖಾದಿಯ ಮುಖಾಂತರವಾಗಿ ಸ್ವದೇಶಿಯನ್ನು ಪಾಲಿಸಿದರೆ ಭಾರತದ ಅಥವಾ ಪರದೇಶದ ಗಿರಣಿಯೊಡೆಯರಿಗೆ ಹಾನಿಯಾಗುತ್ತದೆಂದು ಯಾರೂ ಭಾವಿಸಕೂಡದು. ಕಳ್ಳನೊಬ್ಬನನ್ನು ಕಳ್ಳತನದ ದುರ್ಗುಣದಿಂದ ಬಿಡಿಸಿದರೆ ಅಥವಾ ಅವನಲ್ಲಿರುವ ಕಳ್ಳತನದಿಂದ ಬಂದ ಆಸ್ತಿಯನ್ನು ಮರಳಿ ಕೊಡಿಸಿದರೆ ಕಳ್ಳನನ್ನು ಹಾನಿಗೀಡು ಮಾಡಿದಂತೆ ಆಗುವುದಿಲ್ಲ. ಅದರ ಬದಲಾಗಿ ಒಂದು ಕೃತಿಯಿಂದ ಪ್ರತ್ಯಕ್ಷವಾಗಿಯೋ ಇನ್ನೊಂದು ಕೃತಿಯಿಂದ ಪರೋಕ್ಷವಾಗಿಯೋ ಅವನಿಗೆ ಲಾಭವೇ ಒದಗುತ್ತದೆ. ಇದೇ ರೀತಿಯಲ್ಲಿ ಎಲ್ಲ ಅಫೀಮು ತಿನ್ನುವವರು, ಕುಡುಕರು, ತಮ್ಮ ದುಶ್ಚಟದಿಂದ ದೂರಾದರೆ, ಗಡಂಗದವರೂ ಹಾನಿಗೀಡಾಗುವರು ಎಂದು ಹೇಳಲು ಶಕ್ಯವಿಲ್ಲ. ಲಾಭ ಹೊಂದು ಎಂಬ ಶಬ್ದದ ನಿಜವಾದ ಅರ್ಥದಲ್ಲಿ ಅವರು ಲಾಭವನ್ನು ಹೊಂದುವರು. ಪಾಪ ಪೂರಿತವಾದ ಪ್ರತಿಫಲವನ್ನು ಕಳೆದು ಕೊಳ್ಳುವುದು ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಎಂದೂ ಹಾನಿಯನ್ನುಂಟುಮಾಡುವುದಿಲ್ಲ. ಅದು ಸಮಾಜವನ್ನೂ ವ್ಯಕ್ತಿಯನ್ನೂ ಶುದ್ಧಗೊಳಿಸುತ್ತದೆ.

ಹೇಗಾದರೂ ನೂಲು ತೆಗೆದು ಅದರಿಂದ ಮಾಡಿದ ಖಾದಿಯನ್ನು ತೊಟ್ಟುಕೊಳ್ಳುವುದೇ ಸ್ವದೇಶೀ ವ್ರತದ ಮೊದಲು ಹಾಗೂ ಕೊನೆ ಎಂದು ತಿಳಿದುಕೊಳ್ಳುವುದು ದೊಡ್ಡ ಮೂರ್ಖತವಾಗಿದೆ. ಸಮಾಜ ಕಲ್ಯಾಣಕ್ಕಾಗಿ ನಾವು ಪಾಲಿಸಬೇಕಾದ ಸ್ವದೇಶೀ ವ್ರತದ ತೀರ ಅವಶ್ಯಕವಾದ ಮೊದಲನೆಯ ಹೆಜ್ಜೆ ಎಂದರೆ ಖಾದಿ. ಆದರೆ ಉಳಿದೆಲ್ಲ ವಿಷಯಗಳಲ್ಲಿ ಪರದೇಶದ ವಸ್ತುಗಳ

ಬಗ್ಗೆ ತಮ್ಮ ಅಭಿರುಚಿಯನ್ನು ಮನ ಬಂದಂತೆ ವ್ಯಕ್ತ ಮಾಡಿ ವೇಷದ ಮಟ್ಟಿಗೆ ಮಾತ್ರ ಖಾದಿಯನ್ನು ತೊಡುವ ಜನರನ್ನು ಆಗಾಗ ಕಾಣುತ್ತೇವೆ. ಇಂಥ ಜನರನ್ನು ಸ್ವದೇಶಿ ವ್ರತಪಾಲಕರೆಂದು ಕರೆಯಲಾಗದು. ಅವರು 'ಫ್ಯಾಶನ್'ಗೆ ಬಲಿ ಬಿದ್ದವರು ಮಾತ್ರ ಆಗಿರುತ್ತಾರೆ. ಸ್ವದೇಶಿಯ ಭಕ್ತ ನಾದವನು ತನ್ನ ಸುತ್ತಮುತ್ತಲಿನ ಪರಿಸ್ಥಿತಿಯನ್ನು ಚೆನ್ನಾಗಿ ಅಭ್ಯಸಿಸಿ ತನಗೆ ಸಾಧ್ಯ ವಿದ್ದಲ್ಲೆಲಲ ತಾನಿರುವ ಸ್ಥಾನದಲ್ಲಿ ಸಿದ್ಧವಾಗುವ ವಸ್ತುಗಳನ್ನೇ ಅವು ಬೇರೆ ಕಡೆಗೆ ತಯಾರಾಗಿರುವ ಅಂಥ ವಸ್ತುಗಳಿಗಿಂತಲೂ ಕಡಿಮೆ ತರಗತಿಯವೂ ತುಟ್ಟಿಯೂ ಆಗಿದ್ದರೂ ಕೊಂಡುಕೊಂಡು ತನ್ನ ನೆರೆ ಹೊರೆಯುವರಿಗೆ ಸಹಾಯ ಮಾಡಲು ಯತ್ನಿಸುವನು. ಅಂಥ ವಸ್ತುಗಳು ದೋಷ ಪೂರ್ಣವಾಗಿದ್ದರೆ ಅವುಗಳ ದೋಷಗಳನ್ನು ನಿವಾರಿಸಲು ಅವನು ಪ್ರಯತ್ನಿಸುವನೇ ಹೊರತಾಗಿ ಆ ದೋಷಗಳ ಕಾರಣದಿಂದ ಅವುಗಳನ್ನು ತ್ಯಜಿಸಿ ಪರದೇಶಿ ವಸ್ತುಗಳನ್ನು ಕೊಳ್ಳುವುದಿಲ್ಲ.

ಆದರೆ ಸ್ವದೇಶಿಯನ್ನು ಅತ್ಯಾರಧನೆ (Fetish) ಯ ವಿಷಯುವನ್ನಾಗಿ ಮಾಡಿದರೆ ಅದೇ ನಮ್ಮ ನಾಶಕ್ಕೆ ಕಾರಣವಾಗಬಹುದು. ಈ ಗಂಡಾಂತರದಿಂದ ನಾವು ಯಾವಾಗಲೂ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಪರದೇಶಿ ವಸ್ತುಗಳನ್ನು ಅವು ಪರದೇಶವೆಂಬ ಕಾರಣದಿಂದ ತ್ಯಜಿಸುವುದು ಮತ್ತು ತಮ್ಮ ದೇಶವು ಯಾವ ವಸ್ತುಗಳನ್ನು ನಿರ್ಮಿಸಲು ಅಯೋಗ್ಯವಾಗಿದೆಯೋ ಅಂಥ, ವಸ್ತುಗಳನ್ನು ಅಲ್ಲಿ

ನಿರ್ಮಿಸುವುದಕ್ಕಾಗಿ ರಾಷ್ಟ್ರದ ಹಣವನ್ನೂ ವೇಳೆಯನ್ನೂ ವ್ಯರ್ಥವಾಗಿ ಹಾಳು ಮಾಡುವುದು ದುಷ್ಕೃತ್ಯದಿಂದ ಕೂಡಿದ ಹುಚ್ಚುತನವೆನಿಸುವುವು. ಮತ್ತು ಇದು ಸ್ವದೇಶಿ ಭಾವನೆಗೆ ನಿಷೇಧವೆನಿಸುವದು. ಸ್ವದೇಶಿಯ ನಿಜವಾದ ಭಕ್ತನು ಪರದೇಶಿಯನ ಬಗ್ಗೆ ದ್ವೇಷಭಾವನೆಯನ್ನು ಎಂದೂ ತಳೆಯುವುದಿಲ್ಲ. ಅವನು ಪ್ರಥ್ವಿಯ ಮೇಲಿರುವ ಯಾವನ ಬಗ್ಗೆಯೂ ವಿರೋಧ ಭಾವನೆಯಿಂದ ಪ್ರೇರಿತನಾಗಿರುವುದಿಲ್ಲ. ಸ್ವದೇಶಿಯು ದ್ವೇಷ ಹುಟ್ಟಿಸುವ ಮತಾಚಾರವಲ್ಲ. ಅದು ನಿಷ್ಕಾಮ ಕರ್ಮದ ಒಂದು ಅಹಿಂಸೆ ಅಂದರೆ ಪ್ರೇಮದಲ್ಲಿ ನೆಲೆಗೊಂಡಿದೆ.

(ಗಾಂಧೀಜಿಯವರು ಯರವಡಾ ಸೆರೆಮನೆಯಿಂದ ೧೯೩೧ರಲ್ಲಿ ಹೊರಗೆ ಬಂದ ಮೇಲೆ ಇದು ಬರೆಯಲ್ಪಟ್ಟಿದೆ).

ಯರವಡಾ ಮಂದಿರದಿಂದ, ಪು. ೬೩-೬೭

ಸರ್ವಮತಗಳಲ್ಲಿ ಆದರ

ಧರ್ಮಗಳೆಂದರೆ ಒಂದೇ ಬಿಂದುವಿನಲ್ಲಿ ಕೇಂದ್ರೀಕೃತವಾಗುವ ಹಲವು ದಾರಿಗಳಾಗಿವೆ. ನಾವು ತಲುಪಬೇಕಾದ ಗುರಿ ಒಂದೇಯಾಗಿರುರುವಾಗ ನಾನು ಬೇರೆ ಬೇರೆ ದಾರಿಗಳಿಂದ ಸಾಗಿದರೆ ತಪ್ಪೇನು? ನಿಜವಾಗಿ ಹೇಳಬೇಕೆಂದರೆ ಈ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿರುವರೋ ಅಷ್ಟು ಧರ್ಮಗಳಿವೆ.

ಹಿಂದ್ ಸ್ವರಾಜ್ಯ. ೧೯೪೬-೩೫-೩೬

ನಮ್ಮ ಧರ್ಮವನ್ನು ನಾವು ಹೇಗೆ ಆದರಿಸುತ್ತೇವೆಯೋ ಹಾಗೇಯೇ ಇನ್ನುಳಿದವರ ಧರ್ಮವನ್ನೂ ಆದರಿಸಬೇಕೆಂಬುದನ್ನು

ಅಹಿಂಸೆಯು ನಮಗೆ ಕಲಿಸುತ್ತದೆ. ಮತ್ತು ಅದು ನಮ್ಮ ಧರ್ಮದ ಅಪೂರ್ಣತೆಯನ್ನೂ ನಾವು ಒಪ್ಪಿಕೊಳ್ಳುವಂತೆ ಮಾಡುತ್ತದೆ ಪ್ರೀತಿಯ ನಿಯಮವನ್ನು ಪಾಲಿಸುತ್ತಿರುವವನು ಸತ್ಯಶೋಧಕನು. ಇದನ್ನು ಕೂಡಲೇ ಒಪ್ಪಿಕೊಳ್ಳುತ್ತಾನೆ. ಸತ್ಯದ ಸಮಗ್ರವಾದ ದರ್ಶನವು ನಮಗೆ ದೊರೆತರೆ ನಾವು ಶೋಧಕರಾಗಿ ಉಳಿಯದೆ ನಾವು ದೇವರ ಕೂಡ ಒಂದಾಗಿ ಬಿಡುತ್ತೇವೆ. ಯಾಕೆಂದರೆ ಸತ್ಯವೆಂದರೇ ದೇವರು. ನಾವು ಇನ್ನೂ ಶೋಧಕರಾಗಿರುವುದರಿಂದ ನಮ್ಮ ಶೋಧನೆಯನ್ನು ಕೈಗೊಂಡಿರುತ್ತೇವೆ. ಹಾಗೂ ನಮ್ಮ ಅಪೂರ್ಣತೆಗಳನ್ನು ಅರಿತವರಾಗಿರುತ್ತೇವೆ. ನಾವು ಅಪೂರ್ಣರಾಗಿರುವುದರಿಂದ ನಮ್ಮಿಂದ ತಿಳಿಯಲ್ಪಡುವ ಧರ್ಮವೂ ಅಪೂರ್ಣವಾಗಿರಬೇಕು. ನಾವು ದೇವರನ್ನು ಸಂಪೂರ್ಣವಾಗಿ ಅರಿಯದಿರುವಂತೆ ಧರ್ಮವನ್ನೂ ಸಂಪೂರ್ಣವಾಗಿ ಅರಿತುಕೊಂಡಿಲ್ಲ. ನಾವು ಅರಿತುಕೊಂಡ ಧರ್ಮವು ಈ ರೀತಿಯಾಗಿ ಅಪೂರ್ಣವಾಗಿರುವುದರಿಂದ ವಿಕಾಸಗೊಳ್ಳುವುದಕ್ಕೂ ಹೊಸ ಅರ್ಥ ವಿವರಣೆಗೂ ಅಲ್ಲಿ ಯಾವಾಗಲೂ ಅವಕಾಶವಿರುತ್ತದೆ. ಅಲ್ಲಿ ಈ ರೀತಿಯಾಗಿ ವಿಕಾಸಕ್ಕೆ ಅವಕಾಶವಿರುವುದರಿಂದಲೇ ಸತ್ಯದ ಕಡೆಗೆ ದೇವರ ಕಡೆಗೆ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಮತ್ತು ಮನುಷ್ಯರಿಂದ ರೂಪುಗೊಂಡ ಎಲ್ಲ ಧರ್ಮಗಳೂ ಅಪೂರ್ಣವಿರುವುದರಿಂದ ತುಲನಾತ್ಮಕವಾಗಿ ಒಂದು ಧರ್ಮವು ಶ್ರೇಷ್ಠವಾಗಿದೆ. ಒಂದು ಧರ್ಮವು ಕನಿಷ್ಠವಾಗಿದೆ ಎಂಬ ಪ್ರಶ್ನೆಯೇ ಏಳುವುದಿಲ್ಲ ಮತಗಳೂ ಸತ್ಯದ ಸಾಕ್ಷಾತ್ಕಾರವನ್ನು

ಒಳಗೊಂಡಿರುವವು. ಆದರೆ ಎಲ್ಲ ಮತಗಳೂ ಅಪೂರ್ಣವಾಗಿರುವುವು ಮತ್ತು ತಪ್ಪು ಮಾಡಬಹುದಾದಂಥವು ಆಗಿರುವವು. ಪರಧರ್ಮಗಳ ಬಗ್ಗೆ ನಮ್ಮಲ್ಲಿರುವ ಆದರವು ಆ ಧರ್ಮಗಳಲ್ಲಿರುವ ದೋಷಗಳ ಬಗ್ಗೆ ನಮ್ಮನ್ನು ಕುರುಡರನ್ನಾಗಿ ಮಾಡಕೂಡದು ನಮ್ಮ ಧರ್ಮದಲ್ಲಿರುವ ದೋಷಗಳನ್ನೂ ನಾವು ಚೆನ್ನಾಗಿ ತಿಳಿದಿರಬೇಕು. ಆದರೆ ದೋಷಗಳಿವೆ ಎಂಬ ಕಾರಣದಿಂದ ನಮ್ಮ ಧರ್ಮವನ್ನು ನಾವು ಬಿಡತಕ್ಕದ್ದಲ್ಲ. ಆದರೆ ಆ ದೋಷಗಳನ್ನು ಸರಿಪಡಿಸಿಕೊಳ್ಳಲು ನಾವು ಪ್ರಯತ್ನಿಸಬೇಕು. ಎಲ್ಲ ಧರ್ಮಗಳನ್ನೂ ಸಮಾನತೆಯಿಂದ ಕಾಣಬೇಕಲ್ಲದೇ ಇನ್ನುಳಿದ ಧರ್ಮಗಳಲ್ಲಿರುವ ಸ್ವಾಗತಾರ್ಹವಾದ ಪ್ರತಿಯೊಂದು ಸಂಗತಿಯನ್ನೂ ನಮ್ಮ ಧರ್ಮದಲ್ಲಿ ಕೂಡಿಸಿಕೊಳ್ಳುಲು ನಾವು ಅನುಮಾನಪಡಬಾರದು. ಇಷ್ಟೇ ಅಲ್ಲ ಅವುಗಳನ್ನು ಸ್ವೀಕರಿಸುವುದು ನಮ್ಮ ಕರ್ತವ್ಯವೆಂದು ತಿಳಿಯಬೇಕು.

ಒಂದು ಗಿಡಕ್ಕೆ ಒಂದೇ ಬೊಡ್ಡೆಯಿದ್ದರು ಹಲವು ಟೊಂಗೆಗಳೂ ಎಲೆಗಳೂ ಇರುವಂತೆ ಸತ್ಯವೂ ಪರಿಪೂರ್ಣವೂ ಆದ ಧರ್ಮವು ಒಂದೇ ಇದ್ದು ಮನುಷ್ಯರ ಮುಖಾಂತರ ಅಭಿವ್ಯಕ್ತವಾಗುವಾಗ ಅದು ಹಲವು ರೂಪಗಳನ್ನು ತಾಳುತ್ತದೆ. ಸತ್ಯವಾದ, ಪರಿಪೂರ್ಣವಾದ, ಆ ಒಂದು ಧರ್ಮವು ನುಡಿಯು ಗಡಿಯಾಚೆಗಿದೆ. ಅಪೂರ್ಣರಾದ ಮಾನವರು ನುಡಿಯ ಗಡಿಯಾಚೆಗಿರುವ ಆ ಧರ್ಮವ್ನನು ತಾವು ಬಲ್ಲ ನುಡಿಯಲ್ಲಿ ಉಸುರುತ್ತಾರೆ. ಅವರ ಆ ನುಡಿಗಳಿೀಗೆ ಅವರಷ್ಟೇ ಅಪೂರ್ಣರಾದ ಇನ್ನುಳಿದ ಮಾನವರು ಅರ್ಥ ಹಚ್ಚುತ್ತಾರೆ. ಇವರಲ್ಲಿ ಯಾರ

ಅರ್ಥ ವಿರಣೆಯು ಸರಿಯಾದದ್ದೆಂದು ತಿಳಿಯುಬೇಕು.? ಪ್ರತಿಯೊಬ್ಬನ ಪ್ರತಿಪಾದನೆಯು ಅವನ ದೃಷ್ಟಿಕೋನದಿಂದ? ಪ್ರತಿಯೊಬ್ಬನ ಪ್ರತಿಪಾದನೆಯು ಆದರೂ ಪ್ರತಿಯೊಬ್ಬನೂ ತಪ್ಪಿರುವ ಸಂಭವವೂ ಉಂಟು. ಆದುದರಿಂದ ಪರಾಧರ್ಮ ಸಹಿಷ್ಣತೆ ಅವಶ್ಯಕವಾಗಿದೆ. ಪರಧರ್ಮ ಸಹಿಷ್ಣುತೆಯೆಂದರೆ ತನ್ನ ಮತದ ಸಲುವಾಗಿ ಅನಾಸ್ಥೆ ತಾಳುವುದು ಎಂದು ಅರ್ಥವಲ್ಲ. ಆದರೆ ತನ್ನ ಧರ್ಮದ ಬಗ್ಗೆ ಹೆಚ್ಚು ತಿಳಿವಳಿಕೆಯನ್ನು ಹೆಚ್ಚು ಪವಿತ್ರವಾದ ಪ್ರೀತಿಯನ್ನು ತಾಳುವುದೇ ಆಗಿದೆ. ಪರಧರ್ಮ ಸಹಿಷ್ಣುತೆಯು ನಮ್ಮಲ್ಲಿ ಆಧ್ಯಾತ್ಮಿಕ, ವಿವೇಕವನ್ನುಂಟು ಮಾಡುತ್ತಾರೆ. ಈ ವಿವೇಕವು ಧರ್ಮಾಂಧತೆಯಲ್ಲ ಮತ್ತೆ. ಉತ್ತರ ಧ್ರುವದಿಂದ ದಕ್ಷಣ ಧ್ರುವವು ಎಷ್ಟು ದೂರವಾಗಿರುವುದೋ ಅಷ್ಟು ಈ ವಿವೇಕವು ಧರ್ಮಾಂಧತೆಯಿಂದ ದೂರವಾಗಿದೆ. ಧರ್ಮದ ನಿಜವಾದ ಜ್ಞಾನವು ಧರ್ಮಗಳ ನಡುವಿರುವ ಒಡ್ಡುಗಳನ್ನು ಒಡೆದುಹಾಕುತ್ತದೆ.

ಯರವಡಾ ಮಂದಿರದಿಂದ, ಪು ೨೮-೪೦

ತಮ್ಮ ಧರ್ಮದ ಮಹತಿಯನ್ನು ಇನ್ನೊಬ್ಬರ ಮುಂದೆ ವರ್ಣಿಸುವುದರಲ್ಲಿ ಅದೂ ಮತಾಂತರ ಮಾಡುವ ದೃಷ್ಟಿಯನ್ನಿಟ್ಟುಕೊಂಡು ವರ್ಣಿಸಿರುವುದರಲ್ಲಿ ನನ್ನ ನಂಬಿಗೆಯಿಲ್ಲ. ಧರ್ಮಕ್ಕೆ ಪ್ರಚಾರವು ಅವಶ್ಯವಿಲ್ಲ. ಧರ್ಮವನ್ನು ಯಾವಾಗಲೂ ಆಚರಿಸಬೇಕಾಗುತ್ತದೆ. ಮತ್ತು ಧಮಾಚಾರಣೆಯೇ ಧರ್ಮದ ಪ್ರಚಾರವಾಗಿಬಿಡುತ್ತದೆ.

ಜನ್ಮತಃ ಯಾರೂ ಅಸ್ಪೃಶ್ಯರಾಗಿ ಹುಟ್ಟುವದು ಶಕ್ಯವಿಲ್ಲ. ಯಾಕೆಂದರೆ ಎಲ್ಲರೂ ಬೆಂಕಿಯ ಕಿಡಿಗಳೇ ಅಗಿರುವರು. ಜನ್ಮತಃ ಕೆಲವು ಮಾನವರನ್ನು ಅಸ್ಪೃಶ್ಯರೆಂದು ನಡೆಯಿಸಿಕೊಳ್ಳುವುದು ಶುದ್ಧ ತಪ್ಪು.

ಅಸ್ಪೃಶ್ಯತಾ ನಿರೋಧವ್ರತವು ಪೂರ್ಣವಾಗಬೇಕಾದರೆ ಅಸ್ಪೃಶ್ಯರ ಕೂಡ ನಾವು ಗೆಳೆತನ ಮಾಡಿದರಷ್ಟೇ ಸಾಲದು. ಆದರೆ. ಎಲ್ಲ ಪ್ರಾಣಿಗಳನ್ನೂ ನಮ್ಮಂತೆಯೇ ನಾವು ಪ್ರೀತಿಸಬೇಕು. ಅಸ್ಪೃಶ್ಯತಾನಿವಾರಣೆ ಎಂದರೆ ಇಡೀ ಜಗತ್ತನ್ನೇ ಪ್ರೀತಿಸುವುದೂ ಇಡೀ ಜಗತ್ತಿನ ಸಲುವಾಗಿ ಸೇವೆ ಕೈಕೊಳ್ಳುವುದೂ ಅಗಿದೆ. ಮತ್ತು ಅದು ಅಹಿಂಸೆಯ ಕೂಡ ಬೆರೆತುಹೋಗುತ್ತದೆ. ಮನುಷ್ಯ ಮನುಷ್ಯರ ನಡುವೆ ಹಾಗೂ ಇರುವಿಕೆಯ ವಿವಿಧ ಹಂತಗಳಲ್ಲಿ ಬೆಳೆದು ನಿಂತಿರುವ ಒಡ್ಡುಗಳನ್ನು ಅಸ್ಪೃಶ್ಯತಾ ನಿವಾರಣೆಯು ಒಡೆದುಹಾಕುತ್ತದೆ. ಜಗತ್ತಿನಲ್ಲಿ ಪ್ರತಿಯೊಂದು ಸ್ಥಳದಲ್ಲಿಯೂ ಇಂಥ ಒಡ್ಡುಗಳಿರುವುದನ್ನು ನಾವು ಕಾಣುತ್ತೇವೆ.

ಯರಡವಾ ಮಂದಿರದಿಂದ ಪು. ೩೧-೩೪

೩. ಸರ್ವೋದಯದ ಅರ್ಥಶಾಸ್ತ್ರ

ನ್ಯಾಯವಾದ ಕೂಲಿ

ನಾನು ನನ್ನ ಸೇವಕನಿಗೆ ನ್ಯಾಯವಾಗಿ ದೊರೆಯಬೇಕಾದ ಕೂಲಿಯನ್ನು ಕೊಟ್ಟರೆ ಅನಾವಶ್ಯಕವಾದ ಸಿರಿವಂತಿಕೆಯನ್ನು ನಾನು ಹೊಂದಲಾರೆ; ವಿಲಾಸಕ್ಕಾಗಿ ಹಣವನ್ನು ಹಾಳುಮಾಡಲಾರೆ; ಮತ್ತು ಜಗತ್ತಿನ ಬಡತನವನ್ನು ಹೆಚ್ಚಿಸಲಾರೆ. ನನ್ನಿಂದ ತನಗೆ ನ್ಯಾಯವಾಗಿ ದೊರೆಯಬೇಕಾದ ಕೂಲಿಯು ಸಿಗುವಂಥ ಒಬ್ಬ ಕೆಲಸಗಾರನು ತನ್ನ ಕೈ ಕೆಳಗಿನವರ ಕೂಡ ನ್ಯಾಯಬದ್ಧವಾದ ರೀತಿಯಲ್ಲಿಯೇ ನಡೆದುಕೊಳ್ಳುತ್ತಾನೆ. ಹೀಗಾಗಿ ನ್ಯಾಯದ ಹೊನಲು ಬತ್ತುವುದಿಲ್ಲ. ಆದರೆ ಅದು ಹರಿಯುತ್ತಾ ಮುಂದುವರಿದಂತೆ ಹೆಚ್ಚು ಬಲಗೊಳ್ಳುತ್ತ ಹೋಗುತ್ತದೆ. ಮತ್ತು ಇಂಥ ನ್ಯಾಯದ

ಅರಿವಿನಿಂದ ರಾಷ್ಟ್ರವು ಮುಖ್ಯ ಹಾಗೂ ಸಮೃದ್ಧಿಗಳಿಂದ ಕೂಡಿದ್ದಾಗುತ್ತದೆ.

ಹೀಗೆ ನಾವು ವಿಚಾರಿಸಿ ನೋಡಿದಾಗ ಪ್ರತಿಯೊಂದು ರಾಷ್ಟ್ರಕ್ಕೂ ಸ್ಪರ್ಧೆಯು ಒಳ್ಳೆಯದೆಂದು ಭಾವಿಸುತ್ತಿರುವ ಅರ್ಥಶಾಸ್ತ್ರಜ್ಞರೆಲ್ಲ ತಪ್ಪು ದಾರಿ ಹಿಡಿದಿರುವರೆಂಬುದನ್ನು ನಾವು ಕಾಣುತ್ತೇವೆ. ಸ್ಪರ್ಧೆಯು ಇರುವಲ್ಲಿ ಒಬ್ಬ ವ್ಯವಹಾರಸ್ಥನಿಗೆ ತನಗೆ ಬೇಕಾದ ಕೆಲಸವನ್ನು ಅನ್ಯಾಯವಾದ ರೀತಿಯಲ್ಲಿ ಕಡಿಮೆಯ ಬೆಲೆಯಲ್ಲಿ ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರ ಪರಿಣಾಮವಾಗಿ ಸಿರಿವಂತರು ಹೆಚ್ಚು ಸಿರಿವಂತಾರಾಗುತ್ತಾರೆ, ಬಡವರು ಹೆಚ್ಚು ಬಡವರಾಗುತ್ತಾರೆ. ಕೊನೆಗೆ ಇದು ರಾಷ್ಟ್ರವನ್ನು ವಿನಾಶದೆಡೆಗೆ ಕರೆದೊಯ್ಯುತ್ತದೆ. ಪ್ರತಿಯೊಬ್ಬ ಕೆಲಸಗಾರನಿಗೂ ಅವನ ಯೋಗ್ಯತೆಗೆ ಸರಿಯಾದ ಕೂಲಿ ದೊರೆಯಬೇಕು. ಹೀಗೆ ದೊರೆತಾಗಲೂ ಒಂದು ರೀತಿಯ ಸ್ಪರ್ಧೆ ಉಳಿದೇ ಉಳಿಯುತ್ತದೆ. ಆದರೆ ಜನರು ಸುಖಿಗಳೂ ಪ್ರಾವೀಣ್ಯತೆ ಪಡೆದವರೂ ಆಗುತ್ತಾರೆ. ಯಾಕೆಂದರೆ ಅವರು ತಮ್ಮ ಬೆಲೆಯನ್ನು ಕಡಿಮೆ ಮಾಡಿಕೊಳ್ಳುವ ಉದ್ಯೋಗ ದೊರೆಯಬೇಕೆಂಬ ಇಚ್ಛೆಯಿಂದ ಹೊಸ ಪ್ರಾವೀಣ್ಯತೆಗಳನ್ನು ದೊರಕಿಸಲು ಸ್ಪರ್ಧಿಸುತ್ತಾರೆ. ಸರಕಾರಿ ನೌಕರಿಯಲ್ಲಿರುವ ಆಕರ್ಷಣೆಯೆಂದರೆ ಇದೇ ಆಗಿದೆ ಸರಕಾರಿ ನೌಕರಿಯಲ್ಲಿ ಸ್ಥಾನಕ್ಕೆ ತಕ್ಕ ಸಂಬಳವು ನಿಶ್ಚಿತಗೊಳಿಸಲ್ಪಟ್ಟಿರುತ್ತದೆ. ಸರಕಾರಿ ನೌಕರಿಗೆ ಉಮೇದುವಾರನಾಗಿ ಹೋಗುವವನು ತಾನು ಕಡಿಮೆ ಸಂಬಳಕ್ಕೆ ಕೆಲಸ ಮಾಡಲು ಸಿದ್ಧನಿರುವನೆಂದು ನಿವೇದಿಸದೇ ತನ್ನ ಕೂಡ

ಸ್ಪರ್ಧಿಸುತ್ತಿರುವ ಇತರ ಉಮೇದುವಾರರಿಗಿಂತಲೂ ಸಮರ್ಥ ವಾಗಿದ್ದೇನೆಂದು ಪ್ರತಿಪಾದನೆ ಮಾಡುತ್ತಾನೆ. ಸೈನ್ಯ ಖಾತೆ ಯಲ್ಲಿಯೂ ಹಡುಗು ಪಡೆಯಲ್ಲಿಯೂ ಇದೇ ರೀತಿಯಾಗಿದೆ. ಅಲ್ಲದೆ. ಅಲ್ಲಿ ಭ್ರಷ್ಟಾಚಾರವು ಅಲ್ಪ ಪ್ರಮಾಣದಲ್ಲಿರುತ್ತದೆ. ಆದರೆ ವ್ಯಾಪಾರ ಮತ್ತು ಉತ್ಪಾದನೆಗಳಲ್ಲಿ ದುಸ್ಸಾಹಸವಾದ ಸ್ಪರ್ಧೆಯಿರುತ್ತದೆ. ಅದರ ಫಲವಾಗಿ ಮೋಸಗಾರಿಕೆ, ತಗಲುತನ, ಕುಯುಕ್ತಿ ಕಳ್ಳತನಗಳು ತಲೆದೋರುತ್ತವೆ. ಕೆಲಸಕ್ಕೆ ಬಾರದ ವಸ್ತುಗಳು ನಿರ್ಮಾಣವಾಗುತ್ತವೆ. ಉತ್ಪಾದಕರು, ಕೆಲಸಗಾರನು, ಕೊಳ್ಳುವವನು ಈ ಮೂವರೂ ತಮ್ಮ ತಮ್ಮ ಲಾಭವನ್ನೇಲಕ್ಷ್ಯಿಸುವರಾಗುತ್ತಾರೆ. ಇದು ಇಡೀ ಮಾನವ ವ್ಯವಹಾರವನ್ನೇ ವಿಷಮಯವಾಗಿ ಮಾಡುತ್ತದೆ. ಕೂಲಿಕಾರರು ಉಪವಾಸ ಬೀಳುತ್ತಾರೆ. ಮತ್ತು ಸಂಪು ಹೂಡುತ್ತಾರೆ. ಉತ್ಪಾದಕರು ಠಕ್ಕರಾಗುತ್ತಾರೆ. ಮತ್ತು ಕೊಳ್ಳುವವರು ತಮ್ಮ ನಡತೆಯಲ್ಲಿ ರಬೇಕಾದ ನೈತಿಕ ಅಂಶವನ್ನು ಅಲಕ್ಷಿಸುತ್ತಾರೆ. ಒಂದು ಅನ್ಯಾಯವು ಹಲವು ಅನ್ಯಾಯಗಳಿಗೆ ದಾರಿ ಮಾಡಿಕೊಡುತ್ತದೆ. ಕೊನೆಯಲ್ಲಿ ಕೆಲಸ ಮಾಡುವವರೂ ಕೊಳ್ಳುವವನೂ ಎಲ್ಲರೂ ಅಸಂತುಷ್ಟರಾಗುತ್ತಾರಲ್ಲದೆ, ವಿನಾಶದೆಡೆಗೆ ಸಾಗುತ್ತಾರೆ. ಇಂಥ ಜನರು ಇದ್ದಲ್ಲಿ ಸಂಪತ್ತು ಎನ್ನುವುದೇ ಒಂದು ಶಾಪವೆನಿಸಿಬಿಡುತ್ತದೆ.

ನ್ಯಾಯ ನೀತಿಗಳನ್ನವಲಂಬಿಸಿರುವ ಅರ್ಥಶಾಸ್ತ್ರವೇ ನಿಜವಾದ ಅರ್ಥಶಾಸ್ತ್ರವಾಗಿ ನಡೆಯುವುದನ್ನೂ ಪವಿತ್ರವಾಗಿರುವುದನ್ನೂ ಎಷ್ಟೆಷ್ಟು ಕಲಿಯುತ್ತ ಹೋಗುವವರೋ ಅಷ್ಟಷ್ಟು ಸುಖಿಗಳಾಗುತ್ತ

ಹೋಗುವರು, ಉಳಿದುದೆಲ್ಲ ವ್ಯರ್ಥಶ್ರಮವಷ್ಟೇ ಅಲ್ಲ, ನೇರವಾಗಿ ವಿನಾಶಕ್ಕೆ ಒಯ್ಯುವ ದಾರಿ ನ್ಯಾಯವಾಗಿಯಾಗಲಿ ಅನ್ಯಾಯವಾಗಿಯಾಗಲಿ ಹೇಗಾದರೂ ಮಾಡಿ ಸಿರವಂತರಾಗಿರಿ ಎಂದು ಜನರಿಗೆ ಉಪದೇಶ ಮಾಡುವುದೆಂದರೆ ಬಹಳ ದೊಡ್ಡ ಕೆಡುಕನ್ನು ಗೈದಂತೆಯೇ ಸೈ.

ಸರ್ವೋದಯದಿಂದ, ಪು.೫೦-೫೩

ಆರ್ಥಿಕ ಸಮಾನತೆ

ಸಮಾಜದ ಬಗ್ಗೆ ನನ್ನ ವಿಚಾರವು ಹೀಗಿದೆ: ನಾವೆಲ್ಲರೂ ಸಮಾನರಾಗಿಯೇ ಜನ್ಮ ತಾಳಿದ್ದೇವೆ. ಅಂದರೆ ಸಮಾನತೆಯ ಅವಕಾಶವನ್ನು ಪಡೆಯಲು ನಮಗೆಲ್ಲರಿಗೂ ಹಕ್ಕು ಇದೆ. ಆದರೆ, ಎಲ್ಲರೂ ಸರಿಮಾನವಾದ ಸಾಮರ್ಥ್ಯವುಳ್ಳವರಾಗಿಲ್ಲ. ಈ ಸೃಷ್ಟಿ ಕ್ರಮದಲ್ಲಿ ಎಲ್ಲರ ಸಾಮರ್ಥ್ಯವೂ ಸರಿಸಮನಾಗಿರುವುದು ಅವಶ್ಯಕವಾದ ಮಾತು. ಉದಾಹರಣೆಗೆ ಎಲ್ಲರೂ ಅಷ್ಟೇ ಎತ್ತರವುಳ್ಳವರು ಅಥವಾ ಅಷ್ಟೇ ಬುದ್ಧಿಶಾಲಿಗಳೂ ಆಗಿರುವುದಿಲ್ಲ. ಆದ್ದರಿಂದ ಸ್ವಾಭಾವಿಕಾಗಿಯೇ ಕೆಲವರಿಗೆ ಕಡಿಮೆ ಗಳಿಸುವ ಸಾಮರ್ಥ್ಯವಿರುತ್ತದೆ. ಪ್ರತಿಭಾಶಾಲಿಗಳಾದವರು ಹೆಚ್ಚಿಗೆ ದೊರಕಿಸುತ್ತಾರೆ. ತಾವು ಹೆಚ್ಚಿಗೆ ದೊರಕಿಸಲು ಅವರು ತಮ್ಮ ಪ್ರತಿಭೆಯನ್ನು ಕರುಣಾಪೂರ್ಣರಾಗಿ ಉಪಯೋಗಿಸಿದರೆ, ತಮ್ಮ ರಾಷ್ಟ್ರಕ್ಕೆ ಅವರು ಸೇವೆ ಸಲ್ಲಿಸಿದಂತಾಗುತ್ತದೆ. ಇಂಥ ಜನರು ಧರ್ಮದರ್ಶಿಗಳೆಂದು ಮಾತ್ರ ಬಾಳಬಲ್ಲರು. ಧರ್ಮದರ್ಶಿಗಳಾಗದೆ

ಬೇರಾವ ರೀತಿಯಲ್ಲಿಯೂ ಬಾಳಲು ಅವರಿಗೆ ಹಕ್ಕಿಲ್ಲ. ಬುದ್ಧಿಶಾಲಿಯಾದವನು ಹೆಚ್ಚಿಗೆ ಗಳಿಸಲು ನನ್ನ ಸಮ್ಮತಿ ಇದೆ. ನಾನು ಅವನ ಪ್ರತಿಭೆಯನ್ನು ಮುರುಟಿ ಹಾಕುವುದಿಲ್ಲ. ಅದರೆ ಒಬ್ಬ ತಂದೆಗೆ ಗಳಿಸಿ ತರುವ ಹಲವು ಗಂಡು ಮಕ್ಕಳಿದ್ದಾಗ ಆ ಮಕ್ಕಳ ಗಳಿಕೆಯೆಲ್ಲ ಆ ಕುಟುಂಬದ ಒಟ್ಟು ಅದಾಯದಲ್ಲಿ ಸೇರಿ ಹೋಗುವಂತೆ ಬುದ್ಧಿಶಾಲಿಯಾದವನ ಹೆಚ್ಚಿನ ಗಳಿಕೆಯ ಬಹುಭಾಗವು ರಾಷ್ಟ್ರದ ಕಲ್ಯಾಣಕ್ಕಾಗಿ ಉಪಯೋಗಿಸಲ್ಪಡಲೇಬೇಕು.

ಯ.ಇ, ೧೯೩೧

ಎಲ್ಲರಿಗೂ ಸಮನಾಗಿ ಹಂಚುವುದು ಎಂದರೆ, ಪ್ರತಿಯೊಬ್ಬನಿಗೂ ಅವನ ನೈಸರ್ಗಿಕ ಅವಶ್ಯಕತೆಯನ್ನು ಪೂರೈಸಿಕೊಳ್ಳುವಷ್ಟು ಸಾಧನ ಸಂಪತ್ತಿ ದೊರೆಯಬೇಕಲ್ಲವೇ ಅದಕ್ಕೂ ಹೆಚ್ಚಿಗಲ್ಲ ಎಂದು ಅರ್ಥ, ಉದಾಹರಣೆಗೆ, ಒಬ್ಬ ಮನುಷ್ಯ ಜೀರ್ಣ ಶಕ್ತಿ ಕಡಿಮೆ ಇದ್ದು ಅವನಿಗೆ ರೊಟ್ಟಿ ಮಾಡಿಕೊಳ್ಳಲು ಕಾಲು ಪೌಂಡು ಹಿಟ್ಟು ಬೇಕಾಗುತ್ತದೆ. ಇನ್ನೊಬ್ಬನಿಗೆ ಒಂದು ಪೌಂಡು ಹಿಟ್ಟು ಬೇಕಾಗುತ್ತದೆ. ಎಂದು ಇಟ್ಟುಕೊಳ್ಳೋಣ. ಈ ಇಬ್ಬರೂ ತಮ್ಮ ಈ ಬೇಡಿಕೆಯನ್ನು ಪೂರೈಸಿಕೊಳ್ಳುವ ಸ್ಥಿತಿಯಲ್ಲಿರಬೇಕು. ಇಂಥ ಸ್ಥಿತಿಯು ನಿಜವಾಗಿಯೂ ಆದರ್ಶವಾದುದು. ಆದರೆ ಈ ಆದರ್ಶವನ್ನು ಕೃತಿಯಲ್ಲಿ ತರಬೇಕಾದರೆ ನಮ್ಮ ಸಾಮಾಜಿಕ ರಚನೆಯ ಪೂರ್ಣವಾಗಿ ಪುನಾ ರಚಿಸಲ್ಪಡಬೇಕು. ಅಹಿಂಸೆಯ ಮೇಲೆ ನಿಳತ ಸಮಾಜವು ಇದಕ್ಕೂ ಬೇರೆಯಾದ ಆದರ್ಶವನ್ನು

ಪೋಷಿಸಲಾರದು. ಈ ಆದರ್ಶವನ್ನು ಮುಟ್ಟಲು ನಾವು ಬಹುತೇಕವಾಗಿ ಸಮರ್ಥರಾಗಲಿಕ್ಕಿಲ್ಲ. ಆದರೆ ಈ ಆದರ್ಶವನ್ನು ನಾವು ನಮ್ಮ ಕಣ್ಣ ಮುಂದಿಟ್ಟುಕೊಂಡು ಅದನ್ನು ಸಮೀಪಿಸಲು ಎಡೆಬಿಡದೆ ಕಾರ್ಯಪ್ರವೃತ್ತರಾಗಬೇಕು. ನಾವು ಈ ನಮ್ಮ ಗುರಿಯ ಕಡೆಗೆ ಎಷ್ಟರ ಮಟ್ಟಿಗೆ ಸುಖ, ಸಮಾಧಾನಗಳನ್ನು ಪಡೆಯುತ್ತೇವೆ. ಮತ್ತು ಅಷ್ಟರ ಮಟ್ಟಿಗೆ ಅಹಿಂಸಾತ್ಮಕ ಸಮಾಜವನ್ನು ಅಸ್ತಿತ್ವದಲ್ಲಿ ತರಲು ನಮ್ಮ ವಂತಿಗೆಯನ್ನು ನಾವು ಸಲ್ಲಿಸುತ್ತೇವೆ.

ಹ. ೧೯೪೦

ಉತ್ಪನ್ನದ ಸಮಾನತೆ

ಒಬ್ಬರು ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರವಾಗಿ ಗಾಂಧೀಜಿ ಹೀಗೆ ಹೇಳಿದರು. ಇಡೀ ಜಗತ್ತೇ ಅಸೂಯೆಪಡುವಷ್ಟು ಆದರ್ಶಪ್ರಾಯವಾದ ಸ್ವತಂತ್ರ ಜೀವನವನ್ನು ಭಾರತವು ಬಾಳಬೇಕೆಂದರೆ ಎಲ್ಲ ಭಂಗಿಗಳೂ ಡಾಕ್ಟರರೂ ವಕೀಲರೂ ಶಿಕ್ಷಕರೂ ವರ್ತಕರೂ ಹಾಗೂ ಇನ್ನಿತರರೂ ತಮ್ಮ ಪ್ರತಿದಿನದ ಪ್ರಾಮಾಣಿಕ ದುಡಿಮೆಯ ಫಲವಾಗಿ ಸಮಾನವಾದ ಕೂಲಿಯನ್ನು ಪಡೆಯಬೇಕು. ಭಾರತದ ಸಮಾಜವು ಈ ಗುರಿಯನ್ನು ಎಂದೂ ಮುಟ್ಟಲಾರದು, ಆದರೆ ಭಾರತವು ಸುಖಮಯವಾದ ರಾಷ್ಟ್ರವಾಗಬೇಕಾದರೆ ಇದನ್ನುಳಿದು ಇನ್ನಾವ ಗುರಿಯನ್ನೂ ಇಟ್ಟುಕೊಳ್ಳಕೂಡದು. ಮತ್ತು ಈ ಗುರಿಯನ್ನು ತಲುಪಲು ಪ್ರಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಹ. ೧೯೪೭

ವಿಕೇಂದ್ರೀಕರಣ

ಭಾರತವು ಅಹಿಂಸೆಯ ಮಾರ್ಗವನ್ನು ಹಿಡಿದು ವಿಕಾಸವನ್ನು ಹೊಂದಬೇಕಾದರೆ ಅದು ಬಹಳಷ್ಟು ವಿಷಯಗಳಲ್ಲಿ ವಿಕೇಂದ್ರೀಕರಣವನ್ನು ಸಾಧಿಸಬೇಕೆಂದು ನಾನು ಸೂಚಿಸುತ್ತೇನೆ. ಸಾಕಷ್ಟು ಶಕ್ತಿ ಸಾಮರ್ಥ್ಯಗಳು ನಮ್ಮಲ್ಲಿದಿದ್ದರೆ ಕೇಂದ್ರಿಕರಣವನ್ನು ನಡೆಯಿಸಿಕೊಂಡು ಹೋಗುವುದೂ ಅದನ್ನು ರಕ್ಷಿಸಿಸುವುದೂ ಸಾಧ್ಯವಿಲ್ಲ. ಕಳ್ಳರು ಒಯ್ಯಬಹುದಾದ ಬೆಲೆಯುಳ್ಳ ವಸ್ತುಗಳೇ ಇಲ್ಲದ ಸಾದಾ ಮನೆಗಳಿಗೆ ಪೊಲೀಸು ಕಾವಲಿನ ಅವಶ್ಯಕತೆಯೇ ಇರುವುದಿಲ್ಲ. ಸಿರಿವಂತರ ಪ್ರಾಸಾದಗಳನ್ನು ದರೋಡೆಗಾರರ ದಾಳಿಗಳಿಂದ ರಕ್ಷಿಸಲು ಬಲವಾದ ಕಾವಲು ಬೇಕಾಗುತ್ತದೆ. ದೊಡ್ಡ ಕಾರಖಾನೆಗಳ ಸ್ಥಿತಿಯೂ ಹೀಗೇ ಇದೆ. ಭೂದಳ, ಹಡಗುಪಡೆ, ವಾಯುಪಡೆಗಳಿಂದ ಸುಸಜ್ಜಿತವಾದ ಪಟ್ಟಣಗಳಿಂದೊಡಗೂಡಿದ ಭಾರತಕ್ಕೆ ಪರಚಕ್ರದ ದಾಳಿಯ ಹೆದರಿಕೆ ಇರುವಷ್ಟು ಬರೀ ಹಳ್ಳಿಗಳಿಂದೊಡಗೂಡಿದ ಭಾರತಕ್ಕೆ ಇರುವುದಿಲ್ಲ.

ಹ.೧೯೩೯

ಕಾರಖಾನೆ ನಾಗರಿಕತೆಯ ಮೇಲೆ ನೀವು ಅಹಿಂಸೆಯ ಕಟ್ಟಡವನ್ನು ಕಟ್ಟಲಾರಿರಿ. ಸ್ವಯಂಪೂರ್ಣವಾದ ಹಳ್ಳಿಗಳ ಮೇಲೆ ಅಹಿಂಸೆಯ ಕಟ್ಟಡವನ್ನು ನಿಲ್ಲಿಸುವುದು ಸಾಧ್ಯವಿದೆ. ನಾನು ಕಲ್ಪಿಸಿಕೊಂಡಿರುವ ಹಳ್ಳಿಯ ಅರ್ಥಶಾಸ್ತ್ರವು ಶೋಷಣೆಯನ್ನು ಸಂಪೂರ್ಣವಾಗಿ ತೊಲಗಿಸುತ್ತದೆ. ಮತ್ತು ಶೋಷಣೆಯೇ ಹಿಂಸೆಯ ಸಾರಸತ್ವವಾಗಿದೆ. ನೀವು ಅಹಿಂಸಾಪರರಾಗುವ ಮೊದಲು

ಹಳ್ಳಿಗಳನ್ನು ಪ್ರೀತಿಸುವವರಾಗಬೇಕು. ಹಳ್ಳಿಗಳನ್ನು ಪ್ರೀತಿಸುವವರಾಗಬೇಕದರೆ ನೀವು ಶ್ರದ್ಧೆಯನ್ನು ತಾಳಬೇಕು.

ಹ. ೧೯೩೯

ಮಾನಸಿಕ ಹಾಗೂ ನೈತಿಕ ಬೆಳವಣಿಗೆಯಿಂದೊಡಗೂಡಿದ ಮಾನವ ಸೌಖ್ಯವೇ ನಾವು ಸಾಧಿಸಬೇಕಾದ ಗುರಿ 'ನೈತಿಕ' ವೆಂಬ ವಿಶೇಷಣವನ್ನು 'ಆಧ್ಯಾತ್ಮಿಕ'ವೆಂಬ ವಿಶೇಷಣ ಸಮಾನಾರ್ಥಕವಾಗಿ ನಾನು ಉಪಯೋಗಿಸುತ್ತೇನೆ. ಈ ಗುರಿಯನ್ನು ವಿಕೇಂದ್ರೀಕರಣದಿಂದಲೇ ತಲುಪುವುದು ಸಾಧ್ಯವಿದೆ. ಕೇಂದ್ರೀಕರಣ ಪದ್ಧತಿಯ ಅಹಿಂಸಾತ್ಮಕ ಸಮಾಜ ರಚನೆಗೆ ವಿಸಂಗತವಾಗಿದೆ.

ಹ.೧೯೪೨

ಔದ್ಯೋಗೀಕರಣವು ಒಂದು ಶಾಪಜವಾಗಿದೆ

ಔದ್ಯೋಗೀಕರಣವು ಮಾನವ ಕುಲಕ್ಕೆ ಒಂದು ಶಾಪವಾಗಿ ಪರಿಣಮಿಸುವುದೆಂಬ ಹೆದರಿಕೆ ನನ್ನಲ್ಲಿದೆ. ಶೋಷಣೆ ಮಾಡಲು ನಿಮ್ಮಲ್ಲಿರುವಬಲ, ನಿಮಗೆ ದೊರೆಯುವ ಪರದೇಶದ ಪೇಟೆಗಳು ಮತ್ತು ನಿಮ್ಮ ಕೂಡ ಸ್ಪರ್ಧೆಗೆ ನಿಲ್ಲುವವರ ಅಭಾವ ಇವುಗಳನ್ನೇ ಔದ್ಯೋಗಿಕರಣವು ಸಂಪೂರ್ಣವಾಗಿ ಅವಲಂಬಿಸಿದೆ. ಇಂಗ್ಲೆಂಡಿನ ಮಟ್ಟಿಗೆ ಈ ಮೂರು ಅಂಶಗಳೂ ದಿನ ದಿನಕ್ಕೆ ಹೆಚ್ಚುತ್ತ ನಡೆದಿವೆ. ಇಂಗ್ಲೆಂಡಿನ ವಸ್ತುಗಳಿಗೆ ಭಾರತವು ಹಾಕಿದ ಬಹಿಷ್ಕಾರವು ಬರೀ ಒಂದು ಚಿಕ್ಕಾಸಿನ ಕಡಿತವಾಗಿದೆ. ಇಂಗ್ಲೆಂಡಿನ ಸ್ಥಿತಿಯೇ ಇದಾದರೆ ಭಾರತದಂಥ ದೊಡ್ಡ ದೇಶವು ಔದ್ಯೋಗೀಕರಣದಿಂದ ಲಾಭ ಪಡೆಯುವ ನಿರೀಕ್ಷೆಯನ್ನು ತಾಳುವುದು ಅಶಕ್ಯಕೋಟಿಯ

ವಾತಾಗಿದೆ. ನಿಜವಾಗಿ ಹೇಳಬೇಕೆಂದರೆ ಭಾರತವು ಔದ್ಯೋಗೀಕರಣಗೊಳಿಸಲ್ಪಟ್ಟರೆ ಅದು ಇನ್ನುಳಿದ ರಾಷ್ಟ್ರಗಳ ಶೋಷಣೆ ನಡೆಯಿಸಬೇಕಾಗುತ್ತದೆ. ಆಗ ಅದು ಉಳಿದ ರಾಷ್ಟ್ರಗಳಿಗೆ ಒಂದು ಶಾಪವೆನಿಸುವುದಲ್ಲದೇ ಇಡೀ ಜಗತ್ತಿಗೆ ಅನಿಷ್ಟ ರಾಷ್ಟ್ರವೆನಿಸುತ್ತದೆ. ಅದು ಅಲ್ಲದೆ ಭಾರತವು ಇನ್ನುಳಿದ ರಾಷ್ಟ್ರಗಳ ಶೋಷಣೆ ಮಾಡುವ ಹಾಗೆ ಅದರ ಔದ್ಯೋಗೀಕರಣವನ್ನು ನಾನೇಕೆ ಬಯಸಬೇಕು? ನಾವು ನಮ್ಮ ೩೦೦ ದಶಲಕ್ಷ ನಿರದ್ಯೋಗಿಗಳಿಗೆ ಕೆಲಸ ದೊರಕಿಸುವುದು ಸಾಧ್ಯವಿದೆ. ಆದರೆ ತನ್ನ ೩ ದಶಲಕ್ಷ ನಿರುದ್ಯೋಗಿಗಳಿಗೆ ಕೆಲಸ ದೊರಕಿಸಿಕೊಡಲು ಇಂಗ್ಲೆಂಡವು ಅಸಮರ್ಥವಾಗಿದೆಯಲ್ಲದೆ. ಇಂಗ್ಲೆಂಡಿನ ಅತ್ಯಂತ ಮೇಧಾವಿಗಳನ್ನೂ ಕಂಗೆಡಿಸುವಂಥ ಸಮಸ್ಯೆಯನ್ನು ಅದು ಎದುರಿಸುತ್ತಲಿದೆ. ಈ ಪರಿಸ್ಥಿತಿಯ ದುರಂತವನ್ನು ನೀವು ಅರಿಯಲಾರಿರಾ? ಔದ್ಯೋಗೀಕರಣದ ಭವಿಷ್ಯವು ಕಗ್ಗತ್ತಲಿನಿಂದ ಕೂಡಿದೆ. ಅಮೇರಿಕ, ಜಪಾನ್, ಫ್ರಾನ್ಸ್, ಜರ್ಮನಿಗಳು ಇಂಗ್ಲೆಂಡಿನ ಕೂಡ ಯಶಸ್ವಿಯಾಗಿ ಸ್ಪರ್ಧಿಸುತ್ತಲಿವೆ. ಭಾರತದಲ್ಲಿರುವ ತುಸು ಗಿರಣಿಗಳೂ ಇಂಗ್ಲೆಂಡಿನ ಕೂಡ ಸ್ಪರ್ಧೆ ನಡೆಸಿವೆ. ಅದೂಅಲ್ಲದೆ, ಭಾರತದಲ್ಲಿ ಈಗ ಜಾಗೃತಿಯಾದಂತೆ ಪ್ರಕೃತಿ ಸಂಪತ್ತು. ಖನಿಜ ಸಂಪತ್ತು ಮತ್ತು ಮನುಷ್ಯ ಸಂಪತ್ತಿನಿಂದ ಸಮೃದ್ಧವಾದ ದಕ್ಷಿಣ ಆಫ್ರಿಕೆಯಲ್ಲಿಯೂ ಜಾಗೃತಿಯುಂಟಾಗುವುದು. ಬಲಶಾಲಿಗಳಾದ ಇಂಗ್ಲೀಷರು ಆಫ್ರಿಕೆಯ ಶಕ್ತಿಶಾಲಿಗಳಾದ ಜನಾಂಗಗಳ ಮುಂದೆ ಕುಳ್ಳರಾಗಿ ಕಾಣುವರು. ಆಫ್ರಿಕನ್‌ರು ಉದಾರಿಗಳಾದ ಕಾಡು ಜನರೆಂದು ನೀವು ಅನ್ನಬಹುದು. ಆಫ್ರಿಕನ್‌ರು ಉದಾರಿಗಳೇನೋ

ನಿಜ. ಆದರೆ ಅವರು ಕಾಡು ಜನರಲ್ಲ. ಆಫ್ರಿಕೆಯೆಂದರೆ ತಮ್ಮ ವಸ್ತುಗಳನ್ನು ಒಯ್ದು ತುಂಬುವ ಒಂದು ಉಗ್ರಾಣವೆಂದು ತಿಳಿದ ಪಾಶ್ಚಿಮಾತ್ಯರಿಗೆ ಇನ್ನು ಕೆಲವೇ ವರುಷಗಳಲ್ಲಿ ಅದು ತಮ್ಮ ವಸ್ತುಗಳನ್ನು ಒಯ್ದು ತುಂಬುವ ಒಂದು ಸ್ಥಳವಲ್ಲ ವೆಂಬುದು ಅನುಭವಕ್ಕೆ ಬರುವುದು ಔದ್ಯೋಗೀಕರಣದ ಭವಿಷ್ಯತ್ತು ಪಾಶ್ಚಿಮಾತ್ಯರಿಗೆ ಕತ್ತಲಿನಿಂದ ಒಡಗೂಡಿದುದಾರೆ ಭಾರತಕ್ಕೆ ಅದು ಕಗ್ಗತ್ತಲಿನಿಂದ ಒಡಗೂಡಿದುದಾಗಲಾರದೆ?

ಯ.ಇ. ೧೯೩೧

ಯಂತ್ರ

ಯಂತ್ರಕ್ಕೂ ಒಂದು ಸ್ಥಾನವಿದೆ. ಅದು ನೆಲೆಯಾಗಿ ನಿಲ್ಲಲು ಬಂದಿದೆ. ಆದರೆ ಮನುಷ್ಯನಿಗೆ ಅವಶ್ಯಕವಾಗಿರುವ ಶ್ರಮವನ್ನು ಅದು ತಳ್ಳಿ ಹಾಕಬಾರದು. ನೇಗಿಲದಲ್ಲಿ ಸುಧಾರಣೆಯಾಗುವುದು ಒಳ್ಳೇಯದೇ. ಆದರೆ ಒಂದು ಆಕಸ್ಮಿಕ ಘಟನೆಯ ಸಲುವಾಗಿ ಒಬ್ಬ ಮನುಷ್ಯನು ತಾನು ಹುಡುಕಿ ತೆಗೆದ ಒಂದು ಯಂತ್ರದ ಸಹಾಯದಿಂದ ಇಡೀ ಭರತ ಖಂಡದ ಭೂಮಿಯನ್ನೆಲ್ಲ ಉಳುವಂತಾಗಿ ಇಡೀ ಭರತಖಂಡದ ಒಕ್ಕಲುತನದ ಉತ್ಪಾದನೆಯನ್ನೆಲ್ಲ ಅವನೊಬ್ಬನೆ ನಿಯಂತ್ರಿಸುವಂತಾದರೆ ಮತ್ತು ಒಕ್ಕಲುತನ ಮಾಡಿಕೊಂಡಿರುವ ಕೋಟಿಗಟ್ಟಲೆ ಜನರಿಗೆ ಉದ್ಯೋಗ ದೊರೆಯುವಂತಾದರೆ ಅವರೆಲ್ಲರೂ ಉಪವಾಸ ಬೀಳುವರಲ್ಲದೆ, ಈಗಾಗಲೇ ಹಲವರು ಆಗಿರುವಂತೆ ನಿರುದ್ಯೋಗಿಗಳಾದ ಅವರೆಲ್ಲರೂ ಹೆಡ್ಡರಾಗುವರು. ಯಾರೂ ಬಯಸದ ಈ

ಮೂಢಸ್ಥಿತಿಗೆ ಅವರು ಇಳಿಯುವ ಭಯವು ಪ್ರತಿ ಕ್ಷಣಕ್ಕೂ ಇದ್ದೇ ಇರುವುದು.

ಮನೆ ಕೈಗಾರಿಕೆಗಾಗಿ ಉಪಯೋಗಿಸಲಾಗುವ ಯಂತ್ರದಲ್ಲಿ ಮಾಡಲ್ಪಡುವ ಪ್ರತಿಯೊಂದು ಸುಧಾರಣೆಯನ್ನೂ ನಾನು ಸ್ವಾಗತಿಸುತ್ತೇನೆ. ಆದರೆ ಕೋಟಿಗಟ್ಟಲೆ ಒಕ್ಕಲಿಗರಿಗೆ ಅವರ ಮನೆ ಕೈಗಾರಿಕೆಯಾಗಿ ಇನ್ನೊಂದು ಕೆಲಸವನ್ನು ಒದಗಿಸಿಕೊಡದೇ ಕೈಯಿಂದ ನೂಲುವುದನ್ನು ಬಿಡಿಸಿ ಗಿರಣಿಯಿಂದ ನೂಲುವುದನ್ನು ಬಳಕೆಯಲ್ಲಿ ತರವುದು ಅಪರಾಧವೆಂದು ನಾನು ತಿಳಿದಿದ್ದೇನೆ.

ಯ.ಇ. ೧೯೩೫

"ನೀವು ಎಲ್ಲ ತರದ ಯಂತ್ರಗಳಿಗೂ ವಿರೋಧಿಗಳಾಗಿರುವಿರೋ?"

"ಇಲ್ಲ" ಎಂದು ನಾನು ಒತ್ತಿ ಹೇಳುತ್ತೇವೆ. ಆದರೆ ಸಾರಾಸಾರ ವಿಚಾರ ಮಾಡದೇ ಯಂತ್ರಗಳನ್ನು ಹೆಚ್ಚಿಸುವುದಕ್ಕೆ ನನ್ನ ವಿರೋಧವಿದೆ. ಮನುಷ್ಯನಿಗೆ ವಿನಾಶಕಾರಿಯಾದ ಎಲ್ಲ ಯಂತ್ರಗಳನ್ನೂ ನಾನು ಬಲವಾಗಿ ವಿರೋಧಿಸುತ್ತೇನೆ. ಆದರೆ ಸದಾ ರೀತೀಯ ಯಾಂತ್ರಿಕ ಸಾಧನ ಸಲಕರಣೆಗಳನ್ನು ವೈಯಕ್ತಿಕ ಶ್ರಮವನ್ನು ಉಳಿಸಿ ಮನೆ ಕೈಗಾರಿಕೆಯಲ್ಲಿ ಕೋಟಿಗಟ್ಟಲೆ ಜನರ ಭಾರವನ್ನು ಕಡಿಮೆ ಮಾಡುವಂಥ ಯಂತ್ರಗಳನ್ನೂ ನಾನು ಸ್ವಾಗತಿಸುತ್ತೇನೆ.

ಯ.ಇ, ೧೯೨೬

ಯಾವಾಗ ಹಳ್ಳಿಗಳ ಶೋಷಣೆಯು ನಿಲ್ಲುವುದೋ ಆವಾಗ ಮಾತ್ರ ಹಳ್ಳಿಗಳ ಆಭ್ಯುದಯವು ಸಾಧ್ಯವಿದೆ. ದೊಡ್ಡ ಪ್ರಮಾಣದಿಂದ

ಔದ್ಯೋಗೀಕರಣವನ್ನು ಕೈಕೊಂಡರೆ ಸ್ಪರ್ಧೆ ಹಾಗೂ ಪೇಟೆಗಳನ್ನು ದೊರಕಿಸುವ ಸಮಸ್ಯೆಗಳು ತಲೆದೋರುವುದರಿಂದ ಪ್ರತ್ಯಕ್ಷವಾಗಲೀ ಅಪ್ರತ್ಯಕ್ಷವಾಗಲೀ ಅದು ಅವಶ್ಯಕವಾಗಿ ನಮ್ಮನ್ನು ಶೋಷಣೆಯ ದಾರಿಗೆ ಒಯ್ಯುತ್ತದೆ. ಆದುದರಿಂದ ಹಳ್ಳಿಯು ಸ್ವಯಂ ಪೂರ್ಣವಾಗುವಂತೆಯೂ ತನ್ನ ಉಪಯೋಗಕ್ಕಾಗಿ ಮಾತ್ರ ಉತ್ಪಾದನೆ ಮಾಡುವಂತೆಯೂ ನಾವು ನಮ್ಮ ಲಕ್ಷ್ಯವೆನ್ನೆಲ್ಲ ಕೇಂದ್ರೀಕರಿಸಬೇಕು. ಹಳ್ಳಿಯ ಕೈಗಾರಿಕೆ ಈ ವೈಶಿಷ್ಟ್ಯವನ್ನು ಕಾಯ್ದುಕೊಂಡಲ್ಲಿ ಹಳ್ಳಿಗರು ತಾವೇ ತಯಾರಿಸಿಕೊಳ್ಳಲು ಸಾಧ್ಯವಿರುವ ಮತ್ತು ಉಪಯೋಗಿಸಲು ಶಕ್ಯವಿರುವ ಆಧುನಿಕ ಯಂತ್ರಗಳನ್ನು ಕೂಡ ಉಪಯೋಗಿಸಲು ನನ್ನ ಆಕ್ಷೇಪವಿಲ್ಲ. ಇಂಥ ಯಂತ್ರಗಳನ್ನು ಹೆರವರ ಶೋಷಣೆಗಾಗಿ ಮಾತ್ರ ಉಪಯೋಗಿಸಕೂಡದು.

ಬಂಡವಾಳ ಹಾಗೂ ದುಡಿತ

ಬಂಡವಾಳಗಾರರು ಮತ್ತು ಕೂಲಿಕಾರರು ಮೊದಲಾದವರಲ್ಲಿ ಸರಿಯಾದ ಹಿತ ಸಂಬಂಧಗಳನ್ನುಂಟು ಮಾಡಬೇಕೆಂಬ ಅಭಿಪ್ರಾಯದವನು ನಾನಾಗಿದ್ದೇನೆ. ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರಾಗಬೇಕೆಂದು ನಾನು ಬಯಸುವುದಿಲ್ಲ. ಬಂಡವಾಳ ಹಾಗೂ ದುಡಿತ ಇವುಗಳಲ್ಲಿ ನೈಸರ್ಗಿಕವಾದ ವಿರೋಧವಿದೆ. ಎಂದು ನಾನು ಭಾವಿಸುವುದಿಲ್ಲ.

ಯ. ಇ. ೧೯೨೫

ಬಂಡವಾಳಗಾರನಿಗೆ ನೈತಿಕ ಅಧಿಕಾರವಿಲ್ಲ

ಪ್ರ : ಒಬ್ಬ ಮನುಷ್ಯನು ಭೌತಿಕ ಸಂಪತ್ತನ್ನಾಗಲೀ ನೈತಿಕ ಸಂಪತ್ತನ್ನಾಗಲೀ ಕೂಡಿ ಹಾಕಿದಾಗ ಅವನು ಸಮಾಜದಲ್ಲಿರುವ ಇನ್ನಿತರರ ಸಹಾಯ ಸಹಕಾರಗಳಿಂದಲೇ ಅದನ್ನು ಕೂಡಿ ಹಾಕಿರುತ್ತಾನೆ. ಅಂದ ಮೇಲೆ ಆ ಸಂಪತ್ತಿನ ಯಾವುದೇ ಭಾಗವನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿಯೇ ಉಪಯೋಗಿಸಲು ಅವನಿಗೆ ನೈತಿಕ ಅಧಿಕರಾವಿದೆಯೇ?

ಉ : ಇಲ್ಲ. ಅವನಿಗೆ ಅಂಥ ನೈತಿಕ ಅಧಿಕಾರವಿಲ್ಲ

ಧರ್ಮದರ್ಶಿತ್ವ

ಪ್ರ : ಸಿರಿವಂತರು ತಮ್ಮ ಸಂಪತ್ತಿಗೆ ಧರ್ಮದರ್ಶಿಗಳಾಗಿಬೇಕೆಂದು ನೀವು ಕೇಳಿಕೊಂಡಿದ್ದೀರಿ. ಅಂದರೆ ಅವರು ತಮ್ಮ ಸಂಪತ್ತಿನ ಮೇಲಿರುವ ವೈಯಕ್ತಿಕ ಒಡೆತನವನ್ನು ಬಿಟ್ಟುಕೊಟ್ಟು ತಮ್ಮ ಆಸ್ತಿಯ ಆಡಳಿತಕ್ಕಾಗಿ ಕಾಯದೆ ಬದ್ಧವಾದ ಒಂದು ವಿಶ್ವಸ್ಥ ಮಂಡಳವನ್ನು ನಿರ್ಮಿಸಿ ಅದರ ಮುಖಾಂತರವಾಗಿ ಪ್ರಜಾಪ್ರಭುತ್ವದ ರೀತಿಯಿಂದ ಆಸ್ತಿಯ ಆಡಳಿತವನ್ನು ಸಾಗಿಸಬೇಕೆಂಬುದು ನಿಮ್ಮ ಮಾತಿನ ಅರ್ಥವೋ? ಈಗಿರುವ ಒಡೆಯನು ತೀರಿಕೊಂಡರೆ ಅವನ ವಾರಸುದಾರನನ್ನು ಗೊತ್ತು ಪಡಿಸುವು ಹೇಗೆ ಹೇಗೆ?

ಉ : ಇದಕ್ಕೆ ಉತ್ತರವಾಗಿ, ಜಗತ್ತಿನಲ್ಲಿಯ ಪ್ರತಿಯೊಂದು ವಸ್ತುವೂ ದೇವರ ಒಡೆತನಕ್ಕೆ ಸೇರಿದೆ ಮತ್ತು ಪ್ರತಿಯೊಂದು

ವಸ್ತುವು ದೇವರಿಂದಲೇ ಉಂಟಾಗಿದೆ ಎಂದು ಹಲವು ವರುಷಗಳ ಹಿಂದೆಯೇ ತಾವು ತಳೆದ ನಿಲುವೆಯನ್ನೇ ಈಗಲೂ ತಾಳಿರುವುದಾಗಿ ಗಾಂಧೀಜಿಯವರು ಹೇಳಿದರು. ಆದುದರಿಂದ ಸಂಪತ್ತು. ದೇವನ ಎಲ್ಲ ಮಕ್ಕಳದ್ದೂ ಆಗಿದೆಯಲ್ಲದೇ ಯಾವುದಾದರೂ ಒಬ್ಬ ವ್ಯಕ್ತಿಯದಾಗಿಲ್ಲ. ಯಾವಾಗ ಒಬ್ಬ ವ್ಯಕ್ತಿಯ ಹತ್ತಿರ ಅವನ ಅವಶ್ಯಕತೆಗಿಂತಲೂ ಆಗ ಆ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತು ಕೂಡಿ ಬೀಳುವುದೋ ಆಗ ಆ ಹೆಚ್ಚಿನ ಸಂಪತ್ತಿಗೆ ಆ ವ್ಯಕ್ತಿಯು ದೇವನ ಮಕ್ಕಳ ಪರವಾಗಿ ಧರ್ಮದರ್ಶಿಯಾಗುತ್ತಾನೆ.

ಸರ್ವಶಕ್ತನಾದ ದೇವರಿಗೆ ಯಾವ ವಸ್ತುವನ್ನೂ ಕಾಯ್ದಿಡುವ ಅವಶ್ಯಕತೆಯಿರುವುದಿಲ್ಲ. ದೇವರು ತನಗೆ ಬೇಕಾದುದನ್ನು ಪ್ರತಿದಿನ ಹುಟ್ಟಿಸುತ್ತಾನೆ. ತಾತ್ವಿಕ ರೀತಿಯಲ್ಲಿ ವಿಚಾರಿಸಿದಾಗ ಮನುಷ್ಯರೂ ಇದೇ ರೀತಿಯಾಗಿ ದಿನ ದಿನವೂ ತಮಗೆ ಬೇಕಾದಷ್ಟನ್ನು ಸಂಪಾದಿಸಿ ಜೀವಿಸಬೇಕಲ್ಲವೇ ನಾಳೆಗೆಂದು ಕಾಯ್ದಿಡಕೂಡದು. ಈ ತತ್ತ್ವವನ್ನು ಸಾಮಾನ್ಯವಾಗಿ ಎಲ್ಲ ಜನರೂ ಅಂಗೀಕರಿಸಿದರೆ, ಇದೇ ನ್ಯಾಯಸಮ್ಮತ ವಾದುದೆನಿಸುವುದು ಮತ್ತು ಧಮದರ್ಶಿತ್ವವು ನ್ಯಾಯಸಮ್ಮತವಾದ ಸಂಸ್ಥೆಯಾಗಿಬಿಡುವುದು. ಈ ಧರ್ಮದರ್ಶಿತ್ವವು ಭಾರತವು ಜಗತ್ತಿಗೆ ನೀಡುವ ಕೊಡುಗೆಯಾಗಬೇಕೆಂದು ಗಾಂಧೀಜಿಯವರು ಬಯಕೆಯಾಗಿತ್ತು. ಆಗ ಶೋಷಣೆಯು ಇಲ್ಲ ವಾಗುವದು ಮತ್ತು ಬಿಳಿಯ ಜನಾಂಗಕ್ಕಾಗಿ ಅವರ ವಂಶಜರಿಗಾಗಿ ಮೀಸಲಾಗಿಡುವ ಪದ್ಧತಿಯು ಅಳಿದುಹೋಗುವುದು ಈಗ ಭೀಷಣವಾದ ಯುದ್ಧದ ಬೀಜಗಳು ಈ ತರದ ಭೇದಭಾವ ಗಳಲ್ಲಿಯೇ ಅಡಗಿವೆ. ಇನ್ನು ವಾರಸುದಾರನ ಕಾರ್ಯ

ಮಾಡುತ್ತಲಿರುವನೂ ಅವನು ಕಾಯಿದೆಗೆ ಒಪ್ಪಿಗೆಯಾಗುವ ರೀತಿಯಲ್ಲಿ ತನ್ನ ವಾರಸುದಾರರನನ್ನು ನಾಮಕರಣ ಮಾಡಬಹುದು.

ಹ. ೧೯೪೭

ನಾನು ಪ್ರತಿಪಾದಿಸುವ 'ಧರ್ಮದರ್ಶಿತ್ವ'ದ ತತ್ತ್ವವು ಒಂದು ತಾತ್ಪೂರ್ತಿಕವಾದ ವ್ಯವಸ್ಥೆಯಲ್ಲ. ಮೋಸಗಾರಿಕೆಯಂತೂ ಅದು ಅಲ್ಲವೇ ಅಲ್ಲ. ಉಳಿದೆಲ್ಲ ತತ್ತ್ವಗಳು ನಶಿಸಿಹೋದರೂ ಈ ತತ್ತ್ವ ಮಾತ್ರನಿಲ್ಲು ವುದೆಂದು ನನಗೆ ಭರವಸೆಯಿದೆ. ಈ ತತ್ತ್ವಕ್ಕೆ ತತ್ತ್ವಜ್ಞಾನ ಮತ್ತು ಧರ್ಮಗಳ ಬೆಂಬಲವಿದೆ. ಐಶ್ವರ್ಯವಂತರು ಈ ತತ್ವವನ್ನು ಪಾಲಿಸಿಲ್ಲವೆಂಬುದು ಈ ತತ್ವಮ ಅಸತ್ಯವಾಗಿದೆ ಎಂದು ಸಿದ್ಧಾಂತಪಡಿಸಲಾರರು. ಇದರ ಹೊರತಾಗಿ ಇನ್ನುಳಿದ ಯಾವ ತತ್ತ್ವವೂ ಅಹಿಂಸೆಯ ಕೂಡ ಹೊಂದಿಕೊಳ್ಳುಲಾರದು.

ಹ, ೧೯೩೯

ಗಾಂಧೀಜಿಯವರ 'ಧರ್ಮದರ್ಶಿತ್ವ' ತತ್ವವು

(ಪ್ರಾರೆಲಾಲರಿಂದ)

ಆಗಾಖಾನ ಅರಮನೆಯ ಬಂಧನ ಸತ್ರದಲ್ಲಿದ್ದಾಗ ನಾವು ಈ ತತ್ವದ ಬಗ್ಗೆ ವಿಚಾರ ಮಾಡುವುದನ್ನು ಎಲ್ಲಿ ನಿಲ್ಲಿ ಸಿದ್ದೆವೋ ಸೆರೆಮನೆಯಿಂದ ನಮ್ಮ ಬಿಡುಗಡೆಯಾದ ಕೂಡಲೇ ಅಲ್ಲಿಂದ ಅದನ್ನು ಮತ್ತೆ ಪ್ರಾರಂಭಿಸಿದೆವು. ಧರ್ಮದರ್ಶಿತ್ವದ ವ್ಯಾವಹಾರಿಕವಾದ ಹಾಗೂ ಸರಳವಾದ ಸೂತ್ರವನ್ನು ಕಂಡು ಹಿಡಿಯಲು ಕಿಶೋರಿಲಾಲಭಾಯಿ ನರಹರಿಭಾಯಿಯವರು ನನ್ನ

ಕೂಡ ಸಹಕರಿಸಿದರು. ಆಮೇಲೆ ಅದನ್ನು ನಾವು ಬಾಪೂಜಿಯವರ ಮುಂದೆ ಇಟ್ಟೆವು. ಬಾಪೂಜಿಯವರು ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದರು. ಅದರ ಕರಡು ಪ್ರತಿಯು ಕೊನೆಯದಾಗಿ ಈ ಕೆಳಗಿನಂತೆ ಇತ್ತು.

೧. ಈಗಿರುವ ಬಂಡವಾಳ ಶಾಹಿ ಸಮಾಜವನ್ನು ಸಮಾನತೆಯ ಸಮಾಜವನ್ನಾಗಿ ಪರಿಮಿರ್ತಿಸಲು ಧರ್ಮದರ್ಶಿತ್ವವು ಸಾಧನವನ್ನು ಒದಗಿಸಿಕೊಡುತ್ತದೆ. ಅದು ಬಂಡವಾಳಕ್ಕೆ ಯಾವ ಅಸ್ಪದವನ್ನೂ ಕೊಡುವುದಿಲ್ಲ. ಅದರೆ ಈಗ ಬಂಡವಾಳದ ಒಡೆತನವುಳ್ಳ ವರ್ಗವು ಸುಧಾರಣೆಹೊಂದಲು ಅವಕಾಶವನ್ನು ಒದಗಿಸಿ ಕೊಡುತ್ತದೆ. ಅಧೋಗತಿಗಿಳಿದ ಮಾನವ ಸ್ವಭಾವವನ್ನು ಉದ್ಧರಿಸಲು ಯಾವಾಗಲೂ ಶಕ್ಯವಿದೆ ಎಂಬ ಶ್ರದ್ಧೆಯ ಮೇಲೆ ಈ ತತ್ತ್ವವು ನಿಂತಿದೆ.

೨. ಸಮಾಜವು ತನ್ನ ಕಲ್ಯಾಣಕ್ಕಾಗಿ ಎಷ್ಟರಮಟ್ಟಿಗೆ ಸ್ವಂತ ಒಡೆತನದ ಸೊತ್ತನ್ನು ಇಟ್ಟುಕೊಳ್ಳಲು ಸಮ್ಮ ತಿಸುವುದೋ ಅದರ ಹೊರತಾಗಿ ಹೆಚ್ಚಿನ ಸೊತ್ತಿಗೆ ಸ್ವಂತ ಒಡೆತನದ ಹಕ್ಕನ್ನು ಅದು ಮನ್ನಿಸುವುದಿಲ್ಲ.

೩. ಸಂಪತ್ತಿನ ಒಡೆತನದ ಹಾಗೂ ಉಪಯೋಗಗಳು ಕಾಯದೆಯ ನಿಯಂತ್ರಣದ ಹೊರಗೆ ಇರುವುದಿಲ್ಲ.

೪. ಹೀಗೆ ರಾಜ್ಯದಿಂದ ನಿಯಂತ್ರಿಸಲ್ಪಟ್ಟ ಧರ್ಮ ದರ್ಶಿತ್ವದಲ್ಲಿ ಒಬ್ಬ ತನ್ನ ಸ್ವಾರ್ಥದ ಸಂತೃಪ್ತಿಗಾಗಿ ಆಗಲೀ ಇಲ್ಲವೆ ಸಾಮಾಜಿಕ ಹಿತಕ್ಕೆ ಬರುವ ರೀತಿಯಲ್ಲಾಗಲೀ ಸಂಪತ್ತನ್ನು ಇಟ್ಟುಕೊಳ್ಳಲಾರ ಅಥವಾ ಉಪಯೋಗಿಸಲಾರ.

೫. ಒಬ್ಬ ವ್ಯಕ್ತಿಯು ಪಡೆಯಬಹುದಾದ ಯೋಗ್ಯವಾದ ಕನಿಷ್ಟ ವೇತನವನ್ನು ನಿಶ್ಚಿತಗೊಳಿಸಲು ಸೂಚಿಸಿದಂತೆ ಸಮಾಜದಲ್ಲಿರುವ ಯಾವನೇ ವ್ಯಕ್ತಿಯೊಬ್ಬನು ಪಡೆಯಬಹುದಾದ ಅತಿ ಹೆಚ್ಚಾದ ಅದಾಯದ ಮಿತಿಯನ್ನು ನಿಶ್ಚಿತಪಡಿಸಬೇಕು. ಅತಿ ಕಡಿಮೆಯಾದ ಹಾಗೂ ಅತಿ ಹೆಚ್ಚಾದ ಆದಾಯಗಳ ಅಂತರವು ಸಮಂಜಸವೂ ನ್ಯಾಯ ಸಮ್ಮತವೂ ಆಗಿರಬೇಕಲ್ಲದೆ ಅವೆರಡರಲ್ಲಿರುವ ಅಂತರವು ಅಳಿದುಹೋಗುವುದರ ಕಡೆಗೆ ಹೆಚ್ಚಾಗಿ ಒಲಿಯುವಂತೆ ಕಾಲ ಕಾಲಕ್ಕೆ ಬದಲಾವಣೆ ಯಾಗುವಂಥದೂ ಆಗಿರಬೇಕು.

ಮಾದರಿ ಜಮೀನುದಾರ

ಈಗ ಸದ್ಯ ರೈತನ ಮೇಲೆ ಬಿದ್ದಿರುವ ಭಾರವನ್ನು ಮಾದರಿ ಜಮೀನುದಾರನು ಕೂಡಲೇ ಮಾಡುವನು. ಆವನು ರೈತರ ಕೂಡ ನಿಕಟವಾದ ಸಂಬಂಧವನ್ನು ಬೆಳೆಯಿಸುವನು. ಅವರ ಬೇಡಿಕೆಗಳನ್ನು ತಿಳಿದುಕೊಳ್ಳುವನು ಮತ್ತು ಅವರ ಪ್ರಾಣವನ್ನು ಹಿಂಡುತ್ತಿರುವ ನಿರಾಶೆಯನ್ನು ಕಳೆದು ಅವರಲ್ಲಿ ಕಾನೂನುಗಳ ಭವಿಷ್ಯವನ್ನು ಆಶೆಯನ್ನು ತುಂಬುವನು. ಕಾಯಿದೆ ಕಾನೂನುಗಳ ಬಗ್ಗೆ, ಆರೋಗ್ಯ ನಿಯಮಗಳ ಬಗ್ಗೆ ರೈತರಲ್ಲಿ ನೆಲೆಸಿರುವ ಅಜ್ಞಾನವನ್ನು ಕಂಡು ಅವನು ಸಂತೋಷಪಡಲಾರನು. ರೈತರಿಗೆ ಜೀವನಾವಶ್ಯವಾಗಿರುವ ಪದಾರ್ಥಗಳನ್ನು ಒದಗಿಸಿಕೊಡಲು ತಾನು ಬಡತನವನ್ನು ಅಪ್ಪುವನು. ತನ್ನ ಅಧೀನದಲ್ಲಿರುವ ರೈತರ ಆರ್ಥಿಕ ಪರಿಸ್ಥಿತಿಯನ್ನು ಅವನು ಅಭ್ಯಾಸ ಮಾಡುವನು ಮತ್ತು ಶಾಲೆಗಳನ್ನು ಸ್ಥಾಪಿಸಿ ತನ್ನ ಮಕ್ಕಳ ಕೂಡ ರೈತರ ಮ್ಕಕಳನ್ನು ಕುಳ್ಳಿರಿಸಿ ಅವರನ್ನು

ಸುಶಿಕ್ಷಿತರನ್ನಾಗಿ ಮಾಡುವನು. ಹಳ್ಳಿಯಲ್ಲಿರುವ ಕೆರೆ ಬಾವಿಗಳನ್ನು ಬಳಸಿ ಸ್ವಚ್ಛ ಮಾಡಿಸುವನು. ತಾನು ಸ್ವತಃ ಬೀದಿಗಳನ್ನು ಉಡುಗಿ, ಶೌಚಕೂಪಗಳನ್ನು ಹಳ್ಳಿಯಲ್ಲಿರುವ ಕೆರೆ ಬಾವಿಗಳನ್ನು ಉಡುಗಿಸಿಕೊಳ್ಳುವಂತೆ ಶಾಪಂಗಿಪಗಳನ್ನು ಬಳಿಯುವಂತೆ ಶಿಕ್ಷಣ ಕೊಡುವನು. ತನ್ನ ಉದ್ಯಾನಗಳನ್ನು ಅನಿರ್ಬಂಧವಾಗಿ ರೈತರ ಉಪಯೋಗಕ್ಕಾಗಿ ತೆರೆದಿಡುವನು. ತನ್ನ ಸ್ವಂತದ ಸುಖ ವಿಲಾಸಗಳಿಗಾಗಿ ಅನಾವಶ್ಯಕವಾಗಿಟ್ಟುಕೊಂಡ ಕಟ್ಟಡಗಳನ್ನು ಶಾಲೆಗಾಗಿಯೇ, ಔಷಧಾಲಯಕ್ಕಾಗಿಯೋ ಇನ್ನಿತರ ಸಾರ್ವಜನಿಕ ಹಿತಕ್ಕಾಗಿಯೋ ಉಪಯೋಗಿಸುವನು. ಬದಲಾವಣೆಯನ್ನು ಅರ್ಥ ಮಾಡಿಕೊಂಡು ತಮ್ಮ ಒಡೆತನದಲ್ಲಿದ್ದುದೆಲ್ಲದರ ಮೇಲೆ ತಮಗೆ ದೈವದತ್ತ ಅಧಿಕಾರವಿದೆ ಎಂಬ ವಿಚಾರವನ್ನು ಬದಲು ಮಾಡಿದರೆ ಇಂದು ಹಳ್ಳಿಗಳೆಂದು ಕರೆಯಿಸಿಕೊಳ್ಳಲ್ಪಡುತ್ತಿರುವ ಏಳು ಲಕ್ಷ ಸೆಗಣಿಯ ಗುಂಡಿಗಳಾಗಿರುವ ಸ್ಥಾನಗಳು ತೀರ ತುಸು ಕಾಲಾವಧಿಯಲ್ಲಿಯೇ ಶಾಂತಿ, ಆರೋಗ್ಯ ಹಾಗೂ ಸೌಖ್ಯಗಳ ಸ್ಥಾನಗಳಾಗಿ ಪರಿವರ್ತನೆ ಹೊಂದಬಲ್ಲವು.

ಯ.ಇ. ೧೯೨೯

ಜಮೀನುದಾರರಿಗೆ

ಆಸ್ತಿಯುಳ್ಳ ವರ್ಗದವರ ಸ್ವಂತದ ಆಸ್ತಿಯನ್ನು ನ್ಯಾಯಸಮ್ಮತವಾದ ಕಾರಣವಿಲ್ಲದೇ ಕಸಿದುಕೊಳ್ಳುವ ಕೆಲಸಕ್ಕೆ ನಾನೆಂದೂ ಪಾಲುಗಾರನಾಗಲಾರೆ ಎಂದು ನಿಮಗೆ ನಾನು ಆಶ್ವಾಸನೆ ಕೊಡುತ್ತೇನೆ. ನಿಮ್ಮ ಅಂತಃಕರಣವನ್ನು ಮುಟ್ಟಿ

ನಿಮ್ಮಲ್ಲಿರುವ ಸ್ವಂತದ ಎಲ್ಲ ಸೊತ್ತೂ ನಿಮ್ಮ ರೈತರ ಸಲುವಾಗಿರುವ ಒಂದು ವಿಶ್ವಸ್ಥ ನಿಧಿಯೆಂದು ಭಾವಿಸಿ ಅದನ್ನು ನೀವು ಮುಖ್ಯವಾಗಿ ನಿಮ್ಮ ರೈತರ ಕಲ್ಯಾಣಕ್ಕಾಗಿಯೇ ಉಪಯೋಗಿಸುವಂತೆ ನಿಮ್ಮನ್ನು ಪರಿವರ್ತನೆಗೊಳಿಸುವುದೇ ಮತ್ತು ಆಕ್ಷೇಪರಹಿತವಾದ ರೀತಿಯಲ್ಲಿ ನಮ್ಮ ಜನತೆಯ ಮತವನ್ನು ತೆಗೆದುಕೊಂಡರೆ ಆಸ್ತಿವಂತ ವರ್ಗವನ್ನು ಸಂಪೂರ್ಣವಾಗಿ ಆಸ್ತಿರಹಿತರನ್ನಾಗಿ ಮಾಡಬೇಕೆಂಬುದಕ್ಕೆ ಅವರು ಮತ ಹಾಕುವುದಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ರೈತರು ಮತ್ತು ಜಮೀನುದಾರರು, ಸಹಕಾರ ಮತ್ತು ಸಹ ವ್ಯವಸ್ಥೆಗಳನ್ನು ಬೆಳೆಸುವುದಕ್ಕಾಗಿ ಕೆಲಸ ಮಾಡುತ್ತಿದ್ದೇನೆ.

ಆದರೆ ಇಲ್ಲಿ ನಾನು ಒಂದು ಎಚ್ಚರಿಕೆಯ ಮಾತನ್ನು ಹೇಳಲೇಬೇಕು. ಗಿರಣಿಯ ಒಡೆತನದಲ್ಲಿ ಕೆಲಸಗಾರರಿಗೂ ಸರಿ ಪಾಲು ಇದೆ ಎಂದು ನಾನು ಗಿರಣಿಗಳ ಒಡೆಯರಿಗೆ ಯಾವಾಗಲು ಹೇಳುತ್ತ ಬಂದಿದ್ದೇನೆ. ಅದೇ ರೀತಿಯಾಗಿ ನಿಮ್ಮ ಭೂಮಿಯ ಒಡೆತನವು ನಿಮಗೆ ಎಷ್ಟು ಸೇರಿದೆಯೋ ರೈತರಿಗೂ ಅಷ್ಟೇ ಸೇರಿದೆ, ಮತ್ತು ನಿಮಗೆ ಬರುವ ಉತ್ಪನ್ನವನ್ನು ನೀವು ವಿಲಾಸಮಯವಾದ ಹಾಗೂ ದುಂದುಗಾರಿಕೆಯ ಜೀವನದಲ್ಲಿ ಹಾಳು ಮಾಡಬಾರದು. ಅದನ್ನು ರೈತರ ಹಿತಕ್ಕಾಗಿಯೇ ಉಪಯೋಗಿಸಬೇಕೆಂದು ನಿಮಗಾದರೂ ನಾನು ಹೇಳುತ್ತೇನೆ. ನಿಮ್ಮ ಕೂಡ ನಿಮ್ಮ ರೈತರು ಬಾಂಧವ್ಯವನ್ನು ಅನುಭವಿಸುವಂತೆ ಮತ್ತು ನಿಮ್ಮ ಮನೆತನದ ಸದಸ್ಯರೆನಿಸಿರುವವರೆಗೆ ತಮ್ಮ ಹಿತ ಸಂಬಂಧಗಳ ಭದ್ರತೆಗೆ ಯಾವ

ಧಕ್ಕೆಯೂ ಬಾರದು ಎಂದು ಅವರಿಗೆ ಅನಿಸುವಂತೆ ಒಮ್ಮೆ ನೀವು ನಡೆದರೆ ಸಾಕು. ಅವರಲ್ಲಿಯೂ ನಿಮ್ಮಲ್ಲಿಯೂ ಯಾವ ತರದ ಲೆಕ್ಕವು ಬರುವುದಿಲ್ಲ. ಮತ್ತು ವರ್ಗ ಕಲಹವು ನಿಮ್ಮಲ್ಲಿ ಉಂಟಾಗುವುದಿಲ್ಲ. ಎಂಬ ಬಗ್ಗೆ ನೀವು ನಿಶ್ಚಿತವಾದ ರೀತಿಯಲ್ಲಿ ಮನಗಾಣುವಿರಿ.

ನಿಮ್ಮ ಎಲ್ಲ ಹೆದರಿಕೆಗಳೂ ಸಂಶಯಗಳೂ ನಿಮ್ಮ ಅಪರಾಧೀಮನೋವೃತ್ತಿಯಿಂದ ಬಂದಂಥವುಗಳಾಗಿವೆ. ತಿಳಿದೋ ತಿಳಿಯದೆಯೋ ನಿಮ್ಮನ್ನು ಅಪರಾಧಿಗಳನ್ನಾಗಿಸುವ ಅನ್ಯಾಯಗಳನ್ನೆಲ್ಲ ತೊಡೆದುಹಾಕಿರಿ. ಶಾಂತಿ ಹಾಗೂ ಸ್ವಾತಂತ್ರ್ಯ ಗಳಿಂದ ಬಾಳಬೇಕೆಂಬುದಕ್ಕಿಂತಲೂ ಹೆಚ್ಚಿನ ಮಹತ್ವಾಕಾಂಕ್ಷೆ ರೈತರಿಗಿಲ್ಲ; ನೀವು ನಿಮ್ಮ ಆಸ್ತಿಯನ್ನು ಅವರ ಸಲುವಾಗಿ ಉಪಯೋಗಿಸಿದರೆ ನಿಮ್ಮ ಒಡೆತನದಲ್ಲಿರುವ ಆಸ್ತಿಯ ಬಗ್ಗೆ ಅವರೆಂದೂ ಅಸೂಯೆಪಡುವುದಿಲ್ಲ.

ಅಮೃತ ಬಝಾರ ಪತ್ರಿಕಾ, ೧೯೩೪

ಭೂಮಿಯ ಒಡೆತನ

ನಮ್ಮ ಪೂರ್ವಜರು ನಮಗೆ ನಿಜವಾದ ಸಮಾಜವಾದವನ್ನು ನೀಡಿ ಹೋಗಿದ್ದಾರೆ. ಅವರು ಕಲಿಸುತ್ತಿದ್ದು ದೇನೆಂದರೆ " ಎಲ್ಲ ಭೂಮಿಯೂ ಗೋಪಾಲನಿಗೆ ಸೇರಿದುದಾಗಿದೆ. ಆದುದರಿಂದ ಸೀಮೆಯ ಗೆರೆ ಎಲ್ಲಿ ಇದೆ?" ಮನುಷ್ಯನೇ ಸೀಮೆಯ ಗೆರೆಯನ್ನು ಎಳೆಯುವವನಾಗಿದ್ದಾನೆ. ಆದುದರಿಂದ ಮಾನವನು ಆ ಸೀಮೆಯ ಗೆರೆಯನ್ನು ಅಳಿಸಿಬಿಡಬಲ್ಲನು. ಗೋಪಾಲ ಎಂಬುದರ ಶಬ್ದಶಃ

ಅರ್ಥವು ದನಗಾಹಿ ಅರ್ಥವೂ ಅದಕ್ಕೆ ಇದೆ. ಆಧುನಿಕ ಭಾಷೆಯಲ್ಲಿ ಆ ಶಬ್ದವು ರಾಷ್ಟ್ರ ಅಥವಾ ಜನತೆ ಎಂಬ ಅರ್ಥವನ್ನು ಭೂಮಿಯು ಇಂದು ಜನತೆಗೆ ಸೇರಿಲ್ಲ ಎಂಬ ಮಾತು ಅತ್ಯಂತ ಸತ್ಯವಾಗಿದೆ ಈ ತಪ್ಪು ನ್ಮಮ ಪೂರ್ವಜರು ಮಾಡಿದ ಉಪದೇಶದಲ್ಲಿಲ್ಲ. ಈ ತತ್ತ್ವದಂತೆ ನಡೆಯದಿದ್ದ ನಮ್ಮಲ್ಲಿಯೇ ಈ ತಪ್ಪು ಇದೆ.

ಈ ಉಪದೇಶದಂತೆ ನಡೆಯಲು ಯಾವುದೇ ರಾಷ್ಟ್ರಕ್ಕೆ ರಶಿಯವನ್ನು ಒಳಗೊಂಡು–ಸಾಧ್ಯವಿರುವ ಒಳ್ಳೆಯ ಯತ್ನಗಳನ್ನೆಲ್ಲ ಅಹಿಂಸಾತ್ಮಕವಾಗಿ ಕೈಕೊಳ್ಳಲು ನಾವು ಸಮರ್ಥರಾಗಿದ್ದೇವೆಂಬುದರಲ್ಲಿ ಸಂದೇಹವೇ ಇಲ್ಲ.

ಹ,೧೯೩೭

ರೈತರು ಮತ್ತು ಜಮೀನುದಾರರು

ತಾವು ಹಿಡಿದಿರುವ ಭೂಮಿಗಳೆಲ್ಲ ಸಂಪೂರ್ಣವಾಗಿ ತ್ಮಮವೇ ಆಗಿವೆ. ಅವು ಜಮೀನುದಾರರಿಗೆ ಸೇರಿಲ್ಲ ಎಂಬ ಸಿದ್ಧಾಂತವನ್ನು ರೈತರು ಬಿಟ್ಟುಕೊಡಬೇಕು.ಇನ್ನೊಬ್ಬರ ಆಕ್ರಮಣದಿಂದ ತಮ್ಮ ಹಕ್ಕುಗಳನ್ನು ರಕ್ಷಿಸುವ ಜಮೀದಾರನು ಯಜಮಾನನಾಗಿರುವ ಅವಿಭಕ್ತ ಕುಟುಂಬ ಸದಸ್ಯರಾಗಿ ಈ ರೈತರು ಇರಬೇಕು. ಕಾಯದೆಯು ಏನೇ ಹೇಳಲಿ ಜಮೀನುದಾರಿಯು ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳ ಬೇಕಾದರೆ ಅದು ಅವಿಭಕ್ತ ಕುಟುಂಬದ ಮಟ್ಟಕ್ಕೆ ಬರಬೇಕು.

ಯ.ಇ, ೧೯೩೧

ಸಹಕಾರಿ ಒಕ್ಕಲುತನ

ಒಬ್ಬರು ಒಂದು ಪ್ರಶ್ನೆ ಕೇಳಿದಾಗ ಗಾಂಧೀಜಿಯವರು ಅದಕ್ಕೆ ಉತ್ತರವಾಗಿ ಭೂಮಿಯ ಒಡೆಯರು ತಮ್ಮ ಭೂಮಿಯನ್ನು ಸಹಕಾರಿ ರೀತಿಯಲ್ಲಿ ಇಟ್ಟುಕೊಳ್ಳಬೇಕು. ಮತ್ತು ಸಹಕಾರಿ ಪದ್ಧತಿಯಿಂದ ಅದನ್ನು ಸಾಗುವಳಿ ಮಾಡಬೇಕು ಎಂಬುದೇ ತಮ್ಮ ಸಹಕಾರದ ಕಲ್ಪನೆಯಾಗಿದೆ ಎಂದು ಹೇಳಿದರು. ಇದರಿಂದ ದುಡಿತ, ಭಂಡವಲು ಹಾಗೂ ಸಾಧನ ಸಾಮುಗ್ರಿಗಳ ಉಳಿತಾಯವಾಗುತ್ತದೆ. ಭೂಮಿಯ ಒಡೆಯರು ಸಹಕಾರದಿಂದಲೇ ಕೆಲಸ ಮಾಡುತ್ತಾರೆ ಮತ್ತು ಬಂಡವಾಳ, ಸಾಧನ, ಸಲಕರಣೆಗಳು, ದನಕರುಗಳು, ಬೀಜದ ಕಾಳು ಮುಂತಾದವುಗಳಿಗೆ ಸಹಕಾರಿ ರೀತಿಯಲ್ಲಿಯೇ ಒಡೆಯರಾಗಿರುತ್ತಾರೆ. ಗಾಂಧೀಜಿಯವರ ವಿಚಾರದಂತೆ ಸಹಕಾರಿ ಪದ್ಧತಿಯ ಒಕ್ಕಲುತನವನ್ನು ಬಳಕೆಯಲ್ಲಿ ತಂದರೆ ನಮ್ಮ ದೇಶದ ಸ್ಥಿತಿ ಬದಲಾವಣೆ ಹೊಂದುವುದಲ್ಲದೆ ನಮ್ಮ ಜನತೆಯಲ್ಲಿರುವ ಬಡತನ ಮತ್ತು ಆಲಸ್ಯತನಗಳೂ ಹೇಳ ಹೆಸರಿಲ್ಲದಾಗುತ್ತದೆ. ಜನರು ತಮ್ಮ ತಮ್ಮಲ್ಲಿ ಸ್ನೇಹಭಾವವನ್ನು ಬೆಳೆಸಿಕೊಂಡು ಒಂದೇ ಕುಟುಂಬದವರಂತೆ ಆದಾಗ ಮಾತ್ರ ಇದೆಲ್ಲ ಸಾಧ್ಯವಾಗುತ್ತದೆ.

ಹ, ೧೯೪೭

೪. ಸರ್ವೋದಯದ ಸಮಾಜ ವ್ಯವಸ್ಥೆ

ವ್ಯಕ್ತಿ ಹಾಗೂ ಸಮಾಜ

ವ್ಯಕ್ತಿ ಸ್ವಾತಂತ್ರ್ಯಕ್ಕೆ ನಾನು ಬೆಲೆ ಕೊಡುತ್ತೇನೆ. ಅದರೆ ಮನುಷ್ಯನು ಸ್ವಾಭಾವತಃ ಸಾಮಾಜಿಕ ಪ್ರಾಣಿ ಎಂಬುದನ್ನು ನೀವು ಮರೆಯುತಕ್ಕದ್ದಲ್ಲ. ಸಾಮಾಜಿಕ ಪ್ರಗತಿಗೆ ಅವಶ್ಯವಿರುವಂತೆ ತನ್ನ ವ್ಯಕ್ತಿ ವಿಶಿಷ್ಟತೆಯನ್ನು ರೂಪಿಸಿಕೊಳ್ಳಲು ಕಲಿತುದರಿಂದಲೇ ಮಾನವನು ಈಗಿನ ಉನ್ನತ ಸ್ಥಿತಿಗೆ ಏರಿದ್ದಾನೆ. ಅನಿರ್ಬಂಧವಾದ ವ್ಯಕ್ತಿ ವಿಶಿಷ್ಟತೆಯು ಕಾಡು ಪ್ರಾಣಿಗಳ ಧರ್ಮವಾಗಿದೆ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನಿರ್ಬಂಭಗಳ ನಡುವಿನ ದಾರಿಯನ್ನು ಹಿಡಿಯಲು ನಾವು ಕಲಿಯಬೇಕು. ಇಡೀ ಸಮಾಜದ ಕಲ್ಯಾಣವನ್ನು ಲಕ್ಷಿಸಿ ಸಮಾಜಿಕ ನಿರ್ಬಂಧಗಳಿಗೆ ಮನಃ ಪೂರ್ವಕವಾಗಿ ಒಳಗಾಗುವುದು ಅವಶ್ಯವಿದೆ. ಹೀಗೆ ಒಳಗಾದ ವ್ಯಕ್ತಿಯನ್ನೂ ಆ

ವ್ಯಕ್ತಿಯನ್ನೂ ಆ ವ್ಯಕ್ತಿಯು ಸದಸ್ಯನಾಗಿರುವ ಸಮಾಜವನ್ನೂ ಸರ್ವೋದಯವು ವೈಭವಶಾಲಿಯನ್ನಾಗಿ ಮಾಡುತ್ತಿದೆ.

ಹ, ೧೯೩೯

ವರ್ಣಾಶ್ರಮ

ಹಿಂದೂ ಧರ್ಮವನ್ನು ನಾನು ತುಸು ತಿಳಿದಮಟ್ಟಿಗೆ ವರ್ಣ ಎಂಬುದರ ಅರ್ಥವು ನಾವು ಊಹಸಿದುದ್ದಕ್ಕಿಂತಲೂ ಸರಳವಾಗಿದೆ. ಅದರ ಸರಳವಾದ ಅರ್ಥವೇನೆಂದರೆ ಅನುಸರಿಸುತ್ತ ಬಂದ ವೃತ್ತಿಯನ್ನು ಪ್ರತಿಯೊಬ್ಬ ಮಾನವನು ಪಾಲಿಸಬೇಕಾದ ನೀತಿಗೆ ವಿರುದ್ಧವಾಗದ ರೀತಿಯಲ್ಲಿ ಮತ್ತು ಕೇವಲ ತಮ್ಮ ಉದರ ನಿರ್ವಾಣಕ್ಕಾಗಿ ಅನುಸರಿಸಬೇಕು. ನಾವೆಲ್ಲರೂ ಈ ವರ್ಣರ್ಮಮವನ್ನು ಪಾಲಿಸಿದರೆ ನಮ್ಮ ಲೌಕಿಕ ಮಹತ್ವಾಕಾಂಕ್ಷೆಗೆ ಒಂದು ಮಿತಿಯುಂಟಾಗುವುದು ಮತ್ತು ಯಾವಕ್ಷೇತ್ರಗಳ ಮುಖಾಂತರವಾಗಿ ದೇವರುನ್ನು ಅರಿತುಕೊಳ್ಳಲು ಸಾಧ್ಯವಿದೆಯೋ ಆ ವಿಶಾಲವಾದ ಕ್ಷೇತ್ರಗಳನ್ನು ಶೋಧಿಸಲು ನಮ್ಮ ಶಕ್ತಿಯು ಸ್ವಾತಂತ್ರ್ಯವನ್ನು ಪಡೆಯುವದು.

ಯ,ಇ, ೧೯೨೩

ಪ್ರತಿಯೊಬ್ಬನೂ ಕೆಲವು ಒಲವುಗಳನ್ನು ಹೊಂದಿಯೇ ಈ ಜಗತ್ತಿನಲ್ಲಿ ಜನ್ಮ ತಾಳುತ್ತಾನೆ ಪ್ರತಿಯೊಬ್ಬನೂ ತಾನುಗೆಲ್ಲಲಾರದ ಕೆಲವು ನಿಶ್ಚಿತವಾದ ಕುಂದು ಕೊರತೆಗಳನ್ನೂ ಪಡೆದುಕೊಂಡೇ ಹುಟ್ಟಿ ಬರುತ್ತಾನೆ. ಆ ಕುಂದು ಕೊರತೆಗಳನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿಯೇ ವರ್ಣಧರ್ಮವನ್ನು ರಚಿಸಲಾಗಿದೆ. ವಿಶಿಷ್ಟ

ಒಲವುಗಳುಳ್ಳ ವಿಶಿಷ್ಟ ಜನರಿಗಾಗಿ ವಿಶಿಷ್ಟವಾದ ಕಾರ್ಯಕ್ಷೇತ್ರಗಳನ್ನು ವರ್ಣಾಶ್ರಮ ಧರ್ಮವು ಗೊತ್ತುಪಡಿಸುತ್ತದೆ. ಇದರಿಂದ ವ್ಯರ್ಥವಾಗಿ ನಡೆಯುವ ಸ್ಪರ್ಧೆಯು ನಿಂತುಹೋಗುತ್ತದೆ. ಕುಂದು ಕೊರತೆಗಳನ್ನು ಕಂಡು ಹಿಡಿಯುವಾಗ ವರ್ಣಧರ್ಮವು ಉಚ್ಚ ನೀಚ ಭೇದಭಾವವನ್ನು ಗಣನೆಗೆ ತಂದುಕೊಳ್ಳಲಿಲ್ಲ. ಒಂದು ಕಡೆಗೆ ಅದು ಪ್ರತಿಯೊಬ್ಬನಿಗೂ ಅವನ ದುಡಿತದ ಪ್ರತಿಫಲ ದೊರೆಯುವ ಬಗ್ಗೆ ಹೊಣೆಯನ್ನು ಹೊತ್ತಿತ್ತು. ಇನ್ನೊಂದೆಡೆಗೆ ಪ್ರತಿಯೊಬ್ಬನೂ ತನ್ನ ನೆರೆಯವನ ಮೇಲೆ ಒತ್ತಾಯ ತರದಂತೆ ನಿರ್ಬಂಧ ಹಾಕಿತು. ಈ ಮಹಾಧರ್ಮವು ಇಂದು ಅಧಃಪತನವನ್ನು ಹೊಂದಿ ಅಕೀರ್ತಿಯನ್ನು ಗಳಿಸಿದೆ. ಆದರೆ ವರ್ಣಧರ್ಮದ ಸಂಪೂರ್ಣವಾದ ಅರ್ಥವನ್ನು ತಿಳಿದುಕೊಂಡು ಅದನ್ನು ಕಾರ್ಯರೂಪದಲ್ಲಿ ತಂದಾಗ ಮಾತ್ರ ಆದರ್ಶವಾದ ಸಾಮಾಜಿಕ ವ್ಯವಸ್ಥೆಯು ವಿಕಾಸಗೊಳ್ಳುವುದೆಂದು ನನ್ನ ನಂಬುಗೆಯಾಗಿದೆ.

ದಿ. ಮೊಡರ್ನ ರಿವ್ಯೂ. ೧೯೨೫

ಅಂತರ್ಜಾತೀಯ ವಿವಾಹ

ವರ್ಣಾಶ್ರಮದ ವ್ಯವಸ್ಥೆಯಲ್ಲಿ ಅಂತರ್ಜಾತೀಯ ವಿವಾಹ ಹಾಗೂ ಅಂತರ್ಜಾತೀಯ ಭೋಜನಗಳಿಗೆ ನಿರ್ಬಂಧವಿರಲಿಲ್ಲ. ಹಾಗೆ ನಿರ್ಬಂಧವು ಇರಲೂಬಾರದು.

ವರ್ಣಾಶ್ರಮದಲ್ಲಿ ಅಂತರ್ಜಾತಿಯ ವಿವಾಹ ಮತ್ತು ಅಂತರ್ಜಾತೀಯ ಭೋಜನಗಳಿಗೆ ನಿರ್ಬಂಧವಿರದಿದ್ದರೂ ಅವುಗಳಿಗಾಗಿ ಒತ್ತಾಯವಿರಕೂಡದು. ಒಬ್ಬ ವ್ಯಕ್ತಿಗೆ ಅವನು

ಗಂಡಸೇ ಇರಲಿ ಹೆಂಗಸೇ ಇರಲಿ ತನಗೆ ಸರಿಕಂಡಲ್ಲಿ ಮದುವೆಯಾಗಲೂ ಅಥವಾ ಊಟ ಮಾಡಲು ಅನಿರ್ಬಂಧವಾದ ಸ್ವಾತಂತ್ರ್ಯವಿರಬೇಕು. ವರ್ಣಾಶ್ರಮ ಧರ್ಮವನ್ನು ಪಾಲಿಸಿದರೆ, ಮುದವೆಯ ವಿಷಯದಲ್ಲಿ ಮಾತ್ರ ಶಕ್ಯವಿದ್ದಷ್ಟು ತಮ್ಮ ವರ್ಣದಲ್ಲಿಯೇ ಶರೀರ ಸಂಬಂಧ ಬೆಳೆಸುವ ಪ್ರವೃತ್ತಿಯು ಸ್ವಾಭಾವಿಕವಾಗಿಯೇ ಉಂಟಾಗುತ್ತದೆ.

ಹ.೧೯೪೭

ಸ್ತ್ರೀ ಪುರುಷರಿಗೆ ಸಮಾನಾಧಿಕಾರ

ಸಾಮಾನ್ಯವಾಗಿ ಒಬ್ಬ ಗಂಡಸು ತನ್ನ ಜೀವಮಾನವೆಲ್ಲ ಒಬ್ಬಳೇ ಹೆಂಡತಿಯನ್ನು ಒಬ್ಬ ಹೆಂಗಸು ಒಬ್ಬನೇ ಗಂಡನನ್ನು ಮಾಡಿಕೊಂಡಿರಬೇಕು ಎಂದು ಗಾಂಧೀಜಿಯವರು ಹೇಳಿದರು. ಮೇಲಿನ ಜಾತಿಗಳಲ್ಲಿ ಸ್ತ್ರೀಯರು ಒತ್ತಾಯದ ವೈಧವ್ಯವನ್ನು ಅನುಭವಿಸಲು ರೂಢಿ ಸಂಪ್ರದಾಯಗಳು ಅವರನ್ನು ಒಪ್ಪಿಸಿದವು. ಆದರೆ ಗಂಡಸರಿಗೆ ಮಾತ್ರ ಇದರ ವಿರುದ್ಧವಾದ ನಿಯಮವನ್ನು ಅನ್ವಯಿಸಲಾಯಿತು. ಇದು ನಿಜವಾಗಿಯೂ ಒಂದು ಅಪಮಾನಕರವಾದ ಸಂಗತಿಯೆಂದು ಗಾಂಧೀಜಿಯವರು ಸಾರಿದರು.

ಅವರ ಪ್ರಕಾರ ಎಲ್ಲ ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಬೇಕು. ಸ್ತ್ರೀ ಪುರಷರು ಸಮಾನರೆಂದು ಗಾಂಧೀಜಿಯವರು ನಂಬಿದ್ದರು. ಆದುದರಿಂದ ಸ್ತ್ರೀಯರಿಗೂ ಪುರುಷರಷ್ಟೇ ಅಧಿಕಾರವಿದೆ ಎಂದು ವಿಚಾರ ಮಾಡಬಲ್ಲ ವರಾಗಿದ್ದರು.

ಹ., ೧೯೩೭

ಮದುವೆ

ಮದುವೆಯು ಜೀವನದಲ್ಲಿ ಒಂದು ಸ್ವಾಭಾವಿಕ ಸಂಗತಿಯಾಗಿದೆ ಮತ್ತು ಮದುವೆಯೆಂದರೆ ಒಂದು ಕೀಳು ವಿಷಯವೆಂದು ಯಾವುದೇ ರೀತಿಯಲ್ಲಿ ಭಾವಿಸುವುದು ಸಂಪೂರ್ಣವಾಗಿ ತಪ್ಪಾದುದು. ಮದುವೆಯ ಒಂದು ಪವಿತ್ರವಾದ ವಿಷಯವೆಂದು ತಿಳಿದುಕೊಂಡು ವೈವಾಹಿಕ ಜೀವನದಲ್ಲಿ ಸಂಯಮವನ್ನು ಪಾಲಿಸುವುದು ನಿಜವಾದ ಆದರ್ಶವಾಗಿದೆ.

ಹ. ೧೯೪೭

ಘಟಸ್ಫೋಟ

ಒಬ್ಬ ಸ್ತ್ರೀ ಹಾಗೂ ಒಬ್ಬ ಪುರುಷ ಇಬ್ಬರೂ ತಾವು ಬಂದಾಗ ಬೇಕೆಂದು ಬಯಸಿದಾಗ ಸಮಾಜದಲ್ಲಿರುವ ಇನ್ನಿತರರನ್ನುಳಿದು ಅವರಿಬ್ಬರೇ ಒಂದುಗೂಡುವ ಹಕ್ಕನ್ನು ಮದುವೆಯು ದೃಢಪಡಿಸುತ್ತದೆ. ಆದರೆ ಗಂಡನು ತನ್ನ ಹೆಂಡತಿ ತನ್ನ ಕೂಡ ಕೂಡಿ ಇರಲೇಬೇಕು ಎಂದು ಹೆಂಡತಿ ತನ್ನ ಗಂಡನು ತನ್ನ ಕೂಡ ಕೂಡಿ ಇರಲೇಬೇಕು ಎಂದು ಕೇಳಲು ಹಕ್ಕನ್ನು ಮಾತ್ರ ಮದುವೆಯೂ ಕೊಡುವುದಿಲ್ಲ.

ಗಂಡ ಹೆಂಡಿರಲ್ಲೂ ಒಬ್ಬರು ನೈತಿಕ ಹಾಗೂ ಇನ್ನಿತರ ಕಾರಣಗಳಿಗಾಗಿ ಇನ್ನೊಬ್ಬರ ಕೂಡ ಕೂಡಿಸಿಕೊಂಡಿರಲು ಬಯಸದೇ ಇದ್ದಾಗ ಏನು ಮಾಡಬೇಕು? ಎಂಬ ಪ್ರಶ್ನೆ ಬೇರೆಯೇ ಆಗಿದೆ. ನೈತಿಕ ಕಾರಣಗಳಿಗಾಗಿ ದಂಪತಿಗಳು ಅಗಲುವ ಪ್ರಸಂಗ ವಿದ್ದಾಗ ಮತ್ತು ಘಟಸ್ಫೋಟದ ಹೊರತಾಗಿ ಬೇರಾವ ದಾರಿಯೂ ಇಲ್ಲ

ದಿದ್ದಾಗ ಘಟಸ್ಫೋಟವನ್ನು ಪಡೆಯಲು ನಾವು ಹಿಂಜರಿಯ ಬಾರದು ಎಂದು ನಾನು ವೈಯಕ್ತಿಕವಾಗಿ ಅಭಿಪ್ರಾಯ ಪಡುತ್ತೇನೆ.

ಯ.ಇ.೧೯೨೫

ಗರ್ಭನಿರೋಧ

ಜನಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ ನಮ್ಮ ರಾಷ್ಟ್ರಕ್ಕೆ ಜನನ ನಿಯಂತ್ರಣ ಅವಶ್ಯ ಎಂಬ ಸಿದ್ಧಾಂತವನ್ನು ನಾನು ಅಲ್ಲ ಗಳೆಯುತ್ತೇನೆ. ಅದು ಎಂದೂ ಸಿದ್ಧಗೊಳಿಸಲ್ಪಟ್ಟಿಲ್ಲ. ಯೋಗ್ಯವಾದ ಹಿಡುವಳಿ, ಒಳ್ಳೆಯ ರೀತಿಯ ಒಕ್ಕಲುತನ ಮತ್ತು ಪೂರಕವಾದ ಉದ್ಯೋಗ ವ್ಯವಸಾಯಗಳಿಂದ ಈಗಿರುವ ಜನಸಂಖ್ಯೆಯ ಇಮ್ಮಡಿಯಾದ ಜನಸಂಖ್ಯೆಯನ್ನು ಪೋಷಿಸಲು ನಮ್ಮ ದೇಶವು ಸಮರ್ಥವಿದೆ.

ಯ.ಇ, ೧೯೨೫

ಪ್ರ : ಸಂಯಮವು ಸಾಧ್ಯವಿಲ್ಲದಾಗ ಬಹಳ ಮಕ್ಕಳನ್ನು ಹಡೆದು ತನ್ನ ಆರೋಗ್ಯವನ್ನೆಲ್ಲ ಕಳೆದುಕೊಂಡ ತಾಯಿಯ ಸಲುವಾಗಿ ಮತ್ತು ಆ ಮಕ್ಕಳ ಸಲುವಾಗಿ, ಗರ್ಭ ನಿರೋಧಕ ಸಾಧನಗಳ ಸಹಾಯದಿಂದ ಜನನ ನಿಯಂತ್ರಣವನ್ನು ಮಾಡುವುದು ಒಳ್ಳೆಯದಲ್ಲವೆ?

ಉ : ಪತ್ನಿಯರು ಈ ವಿಷಯದಲ್ಲಿ ತಮ್ಮ ಗಂಡಂದಿರುನ್ನು ನಿರೋಧಿಸಬೇಕು. ಗರ್ಭನಿರೋಧದ ಸಾಧನಗಳನ್ನು ಉಪಯೋಗಿ ಸುವುದರಿಂದ ಭಯಾನಕವಾದ ಪರಿಣಾಮ ಗಳಾಗುತ್ತವೆ. ಸ್ತ್ರೀ

ಪುರುಷರು ಬರೀ ಕಾಮ ಜೀವನಕ್ಕಾಗಿಯೇ ಬಾಳಿ ಬದುಕುತ್ತಾರೆ. ಅವರು ಮಂದಬುದ್ಧಿಗಳೂ ಚಂಚಲ ಮನಸ್ಸಿನವರೂ ಅಷ್ಟೇಕೆ ಮಾನಸಿಕವಾಗಿ ಮತ್ತು ನೈತಿಕವಾಗಿ ಅಧಃ ಪತನ ಹೊಂದಿದವರೂ ಆಗುತ್ತಾರೆ.

ಪ್ರ : ಮಕ್ಕಳನ್ನು ಹಡೆಯಲು ತೀರ ಅಶಕ್ತರಾದ ಸ್ತ್ರೀಯರು ಇರುವ ವಿಶಿಷ್ಟ ಪ್ರಸಂಗಗಳಲ್ಲಿ ಅಥವಾ ತಾಯಿ-ತಂದೆಗಳಲ್ಲಿ ಒಬ್ಬರು ರೋಗಗ್ರಸ್ತರಾಗಿರುವ ಪ್ರಸಂಗಗಳಲ್ಲಿಯಾಗಲೀ ಈ ಪದ್ಧತಿಯನ್ನು ಅನುಸರಿಸಬಹುದೋ?

ಉ : ಇಲ್ಲ. ಮೇಲೆ ಹೇಳಿದಂಥ ಪ್ರಸಂಗಗಳಲ್ಲಿ ಗಂಡಹೆಂಡಿರು ಬೇರೆಬೇರೆಯಾಗಿ ಬಾಳಬೇಕು.

ನಿರ್ಬೀಜೀಕರಣವನ್ನು ಜನರ ಮೇಲೆ ಹೇರುವುದು ಅಮಾನುಷವಾದುದೆಂದು ನಾನು ಬಗೆಯುತ್ತೇನೆ. ಮೇಲಿಂದ ಮೇಲೆ ರೋಗಗ್ರಸ್ತರಾಗುವ ವ್ಯಕ್ತಿಗಳ ವಿಷಯದಲ್ಲಿ ಮಾತ್ರ ಅವರು ಒಪ್ಪಿಕೊಂಡರೆ, ನಿರ್ಬೀಜೀಕರಣವನ್ನು ಪ್ರಯೋಗಿಸಬಹುದು, ನಿರ್ಬೀಜಿಕರಣವೂ ಒಂದು ಪ್ರಕಾರದ ಗರ್ಭನಿರೋಧ ಸಾಧನವೇ ಅಗಿದೆ ಸ್ತ್ರೀಯರು ಗರ್ಭನಿರೋಧ ಸಾಧನಗಳನ್ನು ಉಪಯೋಗಿಸುವುದಕ್ಕೆ ನಾನು ವಿರೋಧವುಳ್ಳವ ನಾಗಿರುವೆನು ಆದರೆ ಗಂಡನು ದುಡುಕಿನ ಸ್ವಭಾವದವನಾಗಿರುವುದರಿಂದ ಅವನು ಐಚ್ಛಿಕವಾಗಿ ನಿರ್ಬೀಜೀಕರಣವನ್ನು ಮಾಡಿಕೊಳ್ಳಲು ನನ್ನ ಆಕ್ಷೇಪವೇನೂ ಇಲ್ಲ.

ಮೃತಬಜಾರ ಪತ್ರಿಕಾ.೧೯೩೫

ಗೋರಕ್ಷಣೆ

ಮನುಷ್ಯನ ವಿಕಾಸಕ್ರಮದಲ್ಲಿ ಗೋರಕ್ಷಣೆಯು ಒಂದು ಅತ್ಯಂತ ಚಮತ್ಕಾರವಾದ ವಿಷಯವಾಗಿ ನನಗೆ ತೋರುತ್ತಿದೆ. ಅದು ಮಾನವರನ್ನು ಮಾನವಕುಲದ ಆಚೆಗೆ ಕರೆದೊಯ್ಯುತ್ತದೆ. ಆಕಳು ಎಂದರೆ ಮನುಷ್ಯನ ಕೆಳಗಿರುವ ಎಲ್ಲಾ ಪ್ರಾಣಿ ವರ್ಗವೇ ಎಂದು ನಾನು ಅರ್ಥ ಮಾಡುತ್ತೇನೆ. ಇಡೀ ಜೀವಕೋಟಿಯ ಕೂಡ ಇರುವ ತನ್ನ ತಾದಾತ್ಮ್ಯವನ್ನು ಮನುಷ್ಯನು ಆಕಳಿನ ಮುಖಾಂತರ ಅರಿತುಕೊಳ್ಳುತ್ತಾನೆ.

ಭಾರತದಲ್ಲಿ ಆಕಳು ಅತ್ಯುತ್ತಮವಾದ ಪ್ರಾಣಿಯಾಗಿತ್ತು. ಆಕಳು ಬರೀ ಒಂದು ಪ್ರಾಣಿಯಾಗಿರದೇ ಸಮೃದ್ಧಿಯನ್ನು ನೀಡುವ ಗೋಮಾತೆ ಎನಿಸಿತ್ತು. ಗೋಮಾತೆಯ ಹಾಲನ್ನು ಕೊಡುತ್ತಿದ್ದಳಷ್ಟೇ ಅಲ್ಲ, ಒಕ್ಕಲುತನವೂ ಅವಳ ಕೃಪೆಯಿಂದಲೇ ಸಾಧ್ಯವಾಯಿತು. ಗೋಮಾತೆಯ ಕರುಣೆಯ ಕಾವ್ಯವಾಗಿದ್ದಾಳೆ. ಈ ಸಭ್ಯ ಪ್ರಾಣಿಯ ಪ್ರೇಮದಲ್ಲಿ ಪ್ರತಿಯೊಬ್ಬನೂ ಕರುಣೆಯನ್ನು ಕಾಣುತ್ತಾನೆ. ಲಕ್ಷಾವಧಿ, ಭಾರತೀಯರಿಗೆ ಗೋಮಾತೆಯು ತಾಯಿಯಾಗಿದ್ದಾಳೆ. ಗೋರಕ್ಷಣೆಯೆಂದರೆ ದೇವರು ಸೃಷ್ಟಿಸಿದ ಎಲ್ಲ ಮೂಕಪ್ರಾಣಿಗಳ ಸಂರಕ್ಷಣೆಯಾಗಿದೆ. ಪ್ರಾಚೀನ ದ್ರಷ್ಟಾರನು, ಅವನು ಯಾವನೇ ಇರಲಿ, ಮೊದಲು ಗೋಮಾತೆಯಿಂದಲೇ ಪ್ರಾರಂಭಿಸಿದರು. ಕೆಳಗಿನ ವರ್ಗಗಳು ಮೂಕವಾಗಿರುವುದರಿಂದ ಅವುಗಳ ನಿವೇದನೆ ಹೆಚ್ಚು ಸತ್ವಶಾಲಿಯಾಗಿವೆ.

ಯ.ಇ, ೧೯೨೧

೫. ಸರ್ವೋದಯದ ರಾಜ್ಯವ್ಯವಸ್ಥೆ

ಸರ್ವೋದಯ ಪ್ರಜಾಸತ್ತೆಯು

ಅಸಂಖ್ಯಾತವಾದ ಹಳ್ಳಿಗಳನ್ನೊಳಗೊಂಡ ಈ ರಚನೆಯಲ್ಲಿ ಯಾವಾಗಲೂ ವಿಸ್ತಾರಗೊಳ್ಳುತ್ತಿರುವ, ಯಾವಾಗಲೂ ಮೇಲೆ ಮೇಲೆ ಹೋಗುತ್ತಿರುವ ವರ್ತುಲಗಳಿಂದ ಕೂಡಿರುತ್ತದೆ. ಪಿರಾಮಿಡ್ ತುತ್ತತುದಿಯು ಕೆಳಗಿನ ಅಡಿಪಾಯದಿಂದ ಪೋಷಿಸಲ್ಪಡುವಂತೆ ಇಲ್ಲಿ ಜೀವನವಿರುವುದಿಲ್ಲ. ಇಲ್ಲಿಯ ಜೀವನ ಒಂದು ಮಹಾಸಾಗರದಂತೆ ವಿಸ್ತಾರವಾದ ವರ್ತುಲವಾಗಿರುತ್ತದೆ. ವ್ಯಕ್ತಿಯೇ ಈ ಮಹಾಸಾಗದಂತಿರುವ ವರ್ತುಲದ ಕೇಂದ್ರಬಿಂದುವಾಗಿರುತ್ತಾನೆ. ಈ ವ್ಯಕ್ತಿ ತನ್ನಹಳ್ಳಿಗಾಗಿ ತನ್ನ ಜೀವನವನ್ನು ಕೊಡಲು ಯಾವಾಗಲೂ ಸಿದ್ಧನಿರುತ್ತಾನೆ. ಒಂದು ಹಳ್ಳಿಯು ತನ್ನ ಸುತ್ತಮುತ್ತಲೂ ಇರುವ ಹಳ್ಳಿಗಳ ಸಲುವಾಗಿ ನಿಗರ್ವಿಗಳೂ

ವಿನಯಶೀಲರೂ ಆದ ತಾವು ಯಾವ ಮಹಾಸಾಗರದಂತಿರುವ ವರ್ತುಲದ ಪೂರ್ಣಭಾವವಾಗಿರುವರೋ ಆ ಮಹಾಸಾಗರದ ಗಾಂಭೀರ್ಯವನ್ನು ಪಡೆದ ವ್ಯಕ್ತಿಗಳಿಂದ ಒಡಗೂಡಿ ಕೊನೆಗೆ ಎಲ್ಲವೂ ಒಂದು ಜೀವನವಾಗುತ್ತದೆ.

ಆದುದರಿಂದ ಕೊನೆಗೆ ಇರುವ ಪರಿಘವು ತನ್ನ ಒಳಗಿರುವ ವರ್ತುಲವನ್ನು ಹಿಸುಕಲು ತನ್ನ ಶಕ್ತಿಯನ್ನು ಉಪಯೋಗಿಸುವುದಿಲ್ಲ. ಅದರ ಬದಲಾಗಿ ತನ್ನ ಒಳಗಿರುವ ಎಲ್ಲದಕ್ಕೂ ಅದು ಶಕ್ತಿಯನ್ನು ನೀಡಿ ಅವೆಲ್ಲವುಗಳಿಂದ ತಾನು ಬಲಶಾಲಿಯಾಗುತ್ತದೆ. ಆದರೆ ಇದೆಲ್ಲವೂ ಬರೀ ಕಲ್ಪನಾ ಸಾಮ್ರಜ್ಯವಾಗಿದೆ. ಅದುದರಿಂದ ಇದು ವಿಚಾರಾರ್ಹವಾಗಿಲ್ಲ. ಎಂದು ಯಾರೂ ಮೂದಲಿಸಬಹುದು. ಭೂಮಿತಿಯಲ್ಲಿ ವ್ಯಾಖ್ಯೆಯನ್ನು ಕೊಟ್ಟ ಹಾಗೆ ಬಿಂದುವನ್ನು ತೆಗೆಯಲು ಯಾವ ಮುಷ್ಯನಿಗೂ ಸಾಧ್ಯವಿಲ್ಲದಿದ್ದರೂ ಆ ಬಿಂದುವಿಗೆ ಹೇಗೆ ಒಂದು ಶಾಶ್ವತವಾದ ಬೆಲೆ ಇರುವುದೋ ಹಾಗೆ ಇಲ್ಲಿ ನಾನು ವರ್ಣಿಸಿದ ಚಿತ್ರಕ್ಕೂ ಮಾನವ ಜೀವನದ ದೃಷ್ಟಿಯಿಂದಲೂ ತನ್ನದೇ ಆದ ಬೆಲೆ ಇದೆ. ಈ ಚಿತ್ರವನ್ನು ಪರಿಪೂರ್ಣವಾಗಿ ಕಾರ್ಯರೂಪದಲ್ಲಿ ತರಲು ಸಾಧ್ಯವಿಲ್ಲದಿದ್ದರೂ ಈ ನೈಜ ಚಿತ್ರಕ್ಕಾಗಿ ಭಾರತವು ಬಾಳಿ ಬದಕಲಿ, ನಾವು ಯಾವುದನ್ನಾದರೂ ಸಾಧಿಸುವ ಮೊದಲು ನಾವು ಏನನ್ನೂ ಸಾಧಿಸಬೇಕಾಗಿದೆ ಎಂಬುದರ ಚಿತ್ರವು ಯೋಗ್ಯವಾದ ರೀತಿಯಲ್ಲಿ ನಮ್ಮ ಕಣ್ಣ ಮುಂದೆ ಇರಲಿಕ್ಕೇಬೇಕು. ತೀರ ಕೆಳಗಿರುವ ಮನುಷ್ಯನು ತೀರ ಮೇಲಕ್ಕಿರುವ ಮನುಷ್ಯನ ಕೂಡ ಸಮಾನತೆಯನ್ನು ಪಡೆದಿರುವಂಥ ಅಥವಾ ಬೇರೆ ಮಾತಿನಲ್ಲಿ ಹೇಳಬೇಕೆಂದರೆ

ಇವನು ಮೊದಲನೆಯವನು. ಇವನು ಕೊನೆಯವನು ಎಂಬ ಭೇದವೇ ಇಲ್ಲದಿರುವ ಈ ನನ್ನ ಚಿತ್ರದ ಸತ್ಯತೆಯು ಎಂದಾದರೂ ಭಾರತದ ಪ್ರತಿಯೊಂದು ಹಳ್ಳಿಯೂ ಪ್ರಜಾರಾಜ್ಯವಾಗುವ ಸಮಯ ಬಂದಾಗ ಅನುಭವಕ್ಕೆ ಬರುವುದು.

ಹ.,೧೯೪೬

ಕೇಂದ್ರದಲ್ಲಿ ಇಪತ್ತು ಜನರು ಕುಳಿತುಕೊಂಡು ನಿಜವಾದ ಪ್ರಜಾಸತ್ತೆಯನ್ನು ನಾವು ಬಳಕೆಯಲ್ಲಿ ತರುತ್ತೇನೆಂದರೆ ಅದು ಅಸಾಧ್ಯವಾದ ಮಾತು. ನಿಜವಾದ ಪ್ರಜಾಸತ್ತೆಯ ಕೆಳಗಿನಿಂದ ಅಂದರೆ ಪ್ರತಿಯೊಂದು ಹಳ್ಳಿಯ ಜನರಿಂದ ಕಾರ್ಯರೂಪದಲ್ಲಿ ತರಲ್ಪಡಬೇಕು.

ಹ.,೧೯೪೮

ಅಹಿಂಸೆಯನ್ನು ಆಧರಿಸಿ ನಿಂತ ಸ್ವರಾಜ್ಯವನ್ನು ಕಟ್ಟಬೇಕಾದರೆ ಹಳ್ಳಿಗಳಿಗೆ ಯೋಗ್ಯವಾದ ಸ್ಥಾನವನ್ನು ನಾವು ಕೊಡಲೇಬೇಕು.

ಹ.,೧೯೪೦

ರಾಜಕೀಯ ಅಧಿಕಾರ

ನನ್ನ ಮಟ್ಟಿಗೆ ರಾಜಕೀಯ ಅಧಿಕಾರವು ನಾವು ಮುಟ್ಟಬೇಕಾಗಿರುವ ಒಂದು ಗುರಿಯಾಗಿಲ್ಲ. ಆದರೆ ಜನತೆಯು ತನ್ನ ಜೀವನವನ್ನು ಪ್ರತಿಯೊಂದು ವಿಭಾಗದಲ್ಲಿಯೂ ಸುಧಾರಿಸಿಕೊಳ್ಳುವುದಕ್ಕೆ ಸಮರ್ಥವಾಗಲು ಅದು ಒಂದು ಸಾಧನ ಮಾತ್ರ. ರಾಷ್ಟ್ರೀಯ ಪ್ರತಿನಿಧಿಗಳ ಮುಖಾಂತರ ರಾಷ್ಟ್ರದ ಜೀವನವನ್ನು ನಿಯಂತ್ರಿಸುವ ಮುಖಾಂತರ ರಾಷ್ಟ್ರದ ಜೀವನವನ್ನು

ನಿಯಂತ್ರಿಸುತ್ತದೆ. ರಾಷ್ಟ್ರದ ಜೀವನವು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಷ್ಟು ಪರಿಪೂರ್ಣತೆಗೆ ಬಂದರೆ ಪ್ರಾತಿನಿಧ್ಯವು ಅನವಶ್ಯಕವಾಗುತ್ತದೆ. ಆಗ ತಿಳುವಳಿಕೆಯುಳ್ಳ ಅರಾಜಕತೆ (enlightened anarchy) ಸ್ಥಾಪಿಸಲ್ಪಡುತ್ತದೆ. ಅಂಥ ರಾಜ್ಯವ್ಯವಸ್ಥೆಯಲ್ಲಿ ಪ್ರತಿಯೊಬ್ಬನೂ ತನ್ನನ್ನು ತಾನೇ ಆಳುತ್ತಾನೆ. ಮತ್ತು ಪ್ರತಿಯೊಬ್ಬನೂ ತನ್ನ ನೆರೆಹೊರೆಯವನಿಗೆ ತಾನು ಕಂಟಕನಾಗದಂತೆ ತನ್ನನ್ನು ಆಳುತ್ತಾನೆ. ಆದುದರಿಂದ ಆದರ್ಶವಾದ ರಾಜ್ಯದಲ್ಲಿ ರಾಜಕೀಯ ಅಧಿಕಾರವೇ ಇರುವುದಿಲ್ಲ. ಯಾಕೆಂದರೆ ಅಲ್ಲಿ ರಾಜ್ಯವೇ ಇರುವುದಿಲ್ಲ. ಆದರೆ ಜೀವನದಲ್ಲಿ ಆದರ್ಶವನ್ನು ಎಂದೂ ಸಂಪೂರ್ಣವಾಗಿ ಮುಟ್ಟಲಿಕ್ಕೆ ಆಗುವುದಿಲ್ಲ. ಅದಕ್ಕಾಗಿ ಯಾವ ಸರಕಾರವು ತೀರ ಕಡಿಮೆ ಆಳುತ್ತದೆಯೋ ಆ ಸರಕಾರವೇ ಶ್ರೇಷ್ಠತಮ ಸರಕಾರವೆಂದು ಥೋರೋ(Thoreau) ಹೇಳಿದ ಸುಪ್ರಸಿದ್ಧವಾದ ಮಾತನ್ನು ನಾವು ಇಲ್ಲಿ ನೆನೆಯಬೇಕು.

ಯ. ಇ, ೧೯೩೦

ಪರರಾಷ್ಟ್ರಗಳ ಸಂಬಂಧ

ನನ್ನ ದೇಶಭಕ್ತಿಯು ಸಂಕುಚಿತವಾಗಿಲ್ಲ. ಅದು ಇನ್ನೊಂದು ರಾಷ್ಟ್ರವನ್ನು ಅಪಾಯಕ್ಕೆ ಗುರಿಮಾಡುವುದಿಲ್ಲವಷ್ಟೇ ಅಲ್ಲ ಉಳಿದೆಲ್ಲ ರಾಷ್ಟ್ರಗಳಿಗೂ ನಿಜವಾದ ಅರ್ಥದಲ್ಲಿ ಹಿತಚಿಂತಕವಾಗಿರುತ್ತದೆ. ನಾನು ತಿಳಿದ ರೀತಿಯಲ್ಲಿ ಭಾರತದ ಸ್ವಾತಂತ್ರ್ಯವು ಜಗತ್ತಿಗೆ ಎಂದೂ ಒಂದು ಅನಿಷ್ಟವಾಗಿ ಪರಿಣಮಿಸಲಾರದು.

ಯ.ಇ, ೧೯೨೪

ಜಗತ್ತಿನ ಕಲ್ಯಾಣಕ್ಕಾಗಿ ಸ್ವೇಚ್ಛೆಯಿಂದ ಮತ್ತು ಪವಿತ್ರವಾದ ರೀತಿಯಲ್ಲಿ ಬಲಿದಾನವಾಗಿ ತನ್ನನ್ನು ಅರ್ಪಿಸಲು ಭಾರತವು ಮುಂದಾಗಬೇಕೆಂಬ ಇಚ್ಛೆಯಿಂದ ಭಾರತವು ಸ್ವತಂತ್ರವೂ, ಶಕ್ತಿಶಾಲಿಯೂ ಆಗಬೇಕೆಂದು ನಾನು ಬಯಸುತ್ತೇನೆ. ವ್ಯಕ್ತಿಯು ತಾನು ಪರಿಶುದ್ಧನಾದಾಗ ತನ್ನ ಕುಟುಂಬಕ್ಕೆ ತನ್ನನ್ನು ಬಲಿದಾನವಾಗಿ ಅರ್ಪಿಸುತ್ತಾನೆ. ಹಳ್ಳಿಯು ತನ್ನ ಜಿಲ್ಲೆಗಾಗಿ ಬಲಿದಾನ ಮಾಡುತ್ತದೆ. ಜಿಲ್ಲೆಯು ತನ್ನ ಪ್ರಾಂತ್ಯಕ್ಕಾಗಿ ಬಲಿದಾನ ಮಾಡುತ್ತದೆ. ಪ್ರಾಂತ್ಯವು ತನ್ನ ರಾಷ್ಟ್ರಕ್ಕಾಗಿ ಬಲಿದಾನಮಡುತ್ತದೆ. ರಾಷ್ಟ್ರವು ಜಗತ್ತಿನಲ್ಲಿರುವ ಎಲ್ಲರಿಗಾಗಿ ಬಲಿದಾನ ಮಾಡುತ್ತಾದೆ.

ಯ.ಇ, ೧೯೨೫

ಶಾಂತಿಗಾಗಿ ಅಂತರಾಷ್ಟ್ರೀಯ ಸಂಘಟನೆ

ಅಂತರರಾಷ್ಟ್ರೀಯ ಸಂಘದ ಸದಸ್ಯನೆನಿಸುವ ಪ್ರತಿಯೊಂದು ಚಿಕ್ಕ ದೊಡ್ಡ ರಾಷ್ಟ್ರವು ಸಂಪೂರ್ಣವಾಗಿ ಸ್ವಾತಂತ್ರ್ಯವನ್ನು ಪಡೆದಾಗ ಮಾತ್ರ ನಿಜವಾದ ಅಂತರಾಷ್ಟ್ರೀಯ ಸಂಘವು ಸ್ಥಾಪಿಸಲ್ಪರುತ್ತದೆ ಸದಸ್ಯನಾದ ಪ್ರತಿಯೊಂದು ರಾಷ್ಟ್ರವೂ ಎಷ್ಟರಮಟ್ಟಿಗೆ ಅಹಿಂಸೆಯನ್ನು ಅರಗಿಸಿಕೊಳ್ಳುವುದೋ ಅಷ್ಟರಮಟ್ಟಿಗೆ ಅದರ ಸ್ವಾತಂತ್ರ್ಯದ ಸ್ವರೂಪವು ನಿರ್ಧರಿಸಲ್ಪಡುತ್ತದೆ. ಅತಿ ಚಿಕ್ಕ ರಾಷ್ಟ್ರವು ತಾವು ಭಾವನೆಯನ್ನು ತಾಳುತ್ತದೆ. ಶ್ರೇಷ್ಠ ಮತ್ತು ಕನಿಷ್ಠ ಎಂಬ ಭಾವನೆ ಸಂಪೂರ್ಣವಾಗಿ ಅಳಿದುಹೋಗುವುದು.

ಹ, ೧೯೩೯

ಪ್ರ : ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಅಂತರಾಷ್ಟ್ರೀಯ ಆಡಳಿತ ಸಂಸ್ಥೆಯ ಕೆಳಗೆ ಈ ಜಗತ್ತು ಒಂದುಗೂಡುವ ಸಾಧ್ಯತೆಯನ್ನು ನೀವು ಕಾಣುತ್ತೀರೋ?

ಉ : ಅಂಥ ಸಾಧ್ಯತೆಯಿಂದ ಮಾತ್ರವೇ ಜಗತ್ತು ಬಾಳಲು ಶಕ್ಯವಿದೆ.

ಹ., ೧೯೪೬

೬. ಸರ್ವೋದಯ ಕಾರ್ಯಕರ್ತನಿಗಿರಬೇಕಾದ ಅರ್ಹತೆಗಳು

೧. ದೇವರ ಬಗ್ಗೆ ಅವನಲ್ಲಿ ಸಜೀವನವಾದ ನಂಬುಗೆ ಇರಬೇಕು. ಯಾಕೆಂದರೆ ದೇವರೇ ಅವನ ಏಕಮಾತ್ರ ಆಧಾರವಾಗಿರುವನು.

೨. ಅವನು ಸತ್ಯ ಅಹಿಂಸೆಗಳನ್ನು ತನ್ನ ಧರ್ಮವಾಗಿ ಅಂಗೀಕರಸಬೇಕು ತನ್ನ ಕಷ್ಟಸೆಗಳನ್ನು ತನ್ನ ಧರ್ಮವಾಗಿ ಅಂಗೀಕರಸಭೇಕು. ತನ್ನ ಕಷ್ಟಸಹಿಷ್ಣುತೆಯಿಂದ ವ್ಯಕ್ತವಾಗುವ ಪ್ರೇಮ ಮತ್ತು ಅಹಿಂಸೆಗಳ ಮುಖಾಂತರ ಮನುಷ್ಯನಲ್ಲಿ ಸ್ವಾಭಾವಿಕ ವಾಗಿರುವ ಅವನು ನಿರೀಕ್ಷೆಯನ್ನಿಟ್ಟು ಕೊಂಡಿರುವನೋ ಆ ಒಳ್ಳೆಯತನದಲ್ಲಿ ಅವನಿಗೆ ನಂಬುಗೆ ಇರಬೇಕು.

೩. ಅವನು ಪರಿಶುದ್ಧವಾದ ಜೀವನವನ್ನು ನಡೆಸುತ್ತಿರಬೇಕು. ತಾನು ಕೈಗೊಂಡ ಕಾರ್ಯಕ್ಕಾಗಿ ತನ್ನಲ್ಲಿರುವ ಎಲ್ಲ ವಸ್ತು, ಒಡವೆಗಳನ್ನೂ ತನ್ನ ಜೀವನವನ್ನೂ ಕೊಡಲು ಅವನು ಸಿದ್ಧನಾಗಿರಬೇಕು.

೪. ಅವನು ಯಾವಾಗಲೂ ಖಾದಿಧಾರಿಯೂ ನೂಲುವವನೂ ಆಗಿರಬೇಕು.

೫. ತನ್ನ ವಿಚಾರಶಕ್ತಿಯು ಮಸಳಿಸಬಾರದೆಂದೂ ತನ್ನ ಮನಸ್ಸು ಸ್ಥಿರವಾಗಿರಬೇಕೆಂದೂ ಅವನು ಮದ್ಯಪಾನ ನಿಷೇಧಕನಾಗಿರಬೇಕಲ್ಲದೇ ಎಲ್ಲ ತರದ ಮಾದಕ ಪದಾರ್ಥಗಳಿಂದಲೂ ದೂರ ಇರಬೇಕು.

೬. ಕಾಲಕಾಲಕ್ಕೆ ಗೊತ್ತುಪಡಿಸಲ್ಪಡುವ ಶಿಸ್ತಿನ ಎಲ್ಲ ನಿಯಮಗಳನ್ನೂ ಅವನು ಕಾಯಾ ವಾಚಾ ಮನಃಪೂರ್ವಕವಾಗಿ ಕಾರ್ಯರೂಪದಲ್ಲಿ ತರಬೇಕು.

ಇವಿಷ್ಟೇ ಅರ್ಹತೆಗಳೆಂದು ತಿಳಿಯಬಾರದು ಇವು ಅರ್ಹತೆಗಳು ಕೆಲವು ಉದಾಹರಣೆಗಳು ಮಾತ್ರ ಆಗಿವೆ.

ಹ., ೧೯೩೯

ಗಾಂಧೀಜಿ ಓದಿದ ಪುಸ್ತಕಗಳಲ್ಲಿ ಅವರ ಮೇಲೆ ಗಾಢವಾದ ಪ್ರಭಾವ ಬೀರಿ ವ್ಯಾವಹಾರಿಕ ಬದಲಾವಣೆಯನ್ನುಂಟುಮಾಡಿದ ಕೃತಿ ರಸ್ಕಿನ್‌ನ ಅಂಟು ದಿಸ್ ಲಾಸ್ಟ್ (UNTO THIS LAST) ಮುಂದೆ ಗಾಂಧಿ ಅದನ್ನು ಗುಜರಾತಿ ಭಾಷೆಗೆ ಅನುವಾದಿಸಿ 'ಸರ್ವೋದಯ' ವೆಂದು ಹೆಸರಿಟ್ಟರು. ಸರ್ವೋದಯವೆಂದರೆ ಸಕಲರ ಕಲ್ಯಾಣ. ಅಲ್ಲಿ ಕಾಯಕ ಮಾಡಿ ಉಪಜೀವನವನ್ನು ಸಾಗಿಸುವ ಅಧಿಕಾರ ಎಲ್ಲರಿಗೂ ಸಮನಾಗಿರುತ್ತದೆ. ಉಳುವವನು ಮತ್ತು ಕೈಗಾರಿಕೆಗಳಲ್ಲಿ ದುಡಿಯುವವನ ಜೀವನವು ಸಾರ್ಥಕವಾದ ಜೀವನವಾಗಿರುತ್ತದೆ. ನಮ್ಮ ಕಾರ್ಯಗಳಿಗೆಲ್ಲ ಸತ್ಯವನ್ನೇ ಕೇಂದ್ರವಾಗಿಟ್ಟುಕೊಂಡು ಸಾಗುವುದು, ಸತ್ಯವಿಲ್ಲದೇ ಜೀವನದಲ್ಲಿ ಯಾವ ತತ್ವಗಳನ್ನಾಗಲೀ ನಿಯಮಗಳನ್ನಾಗಲೀ ಪಾಲಿಸಲಾಗದೆಂದು ತಿಳಿದು ಆಚರಿಸುವುದೇ ಸರ್ವೋದಯ ಮೂಲಮಂತ್ರವೆಂದು ಗಾಂಧಿ ಹೇಳುತ್ತಾರೆ. ಸತ್ಯ, ಅಹಿಂಸೆ ಮತ್ತು ಪ್ರೇಮ, ಶುದ್ಧ ಚಾರಿತ್ರ್ಯ, ನಿರ್ಭಯ, ಕಳ್ಳತನ ಮಾಡದಿರುವುದು, ಅನಾವಶ್ಯಕ ವಸ್ತುವನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳದಿರುವುದು, ತ್ಯಾಗ, ಆಹಾರ ಪಾನೀಯಗಳಲ್ಲಿ ಸಂಯಮ, ಸರ್ವಮತಗಳಲ್ಲಿ ಆದರ, ಅಸ್ಪೃಶ್ಯತಾ ನಿರೋಧ ಇವೆಲ್ಲವೂ ಸರ್ವೋದಯ ಸಾಧನೆಗೆ ಅವಶ್ಯವಿರುವ ಸದ್ಗುಣಗಳಾಗಿವೆ.

ಡಾ. ಬೈರಮಂಗಲ ರಾಮೇಗೌಡ